ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 16 ಸೋಮವಾರ 2024

ಸಂಪುಟ: 45 | ಸಂಚಿಕೆ: 239 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ವಿಜಯೇಂದ್ರ ಬಣದ ಸಭೆ

- ಮುಂದಿನ ಚುನಾವಣೆವರೆಗೆ ಬಿಜೆಪಿ ರಾಜ್ಯಾಧ್ಯಕ್ಷರಾಗಿ ವಿಜಯೇಂದ್ರ ಮುಂದುವರೆಯಬೇಕು
- ಫೆ.27ಕ್ಕೆ ಯಡಿಯೂರಪ್ಪ ಹುಟ್ಟುಹಬ್ಬ ಸಮಾವೇಶ ಮೂಲಕ ಶಕ್ತಿ ಪ್ರದರ್ಶನಕ್ಕೆ ನಿರ್ಣಯ

ದಾವಣಗೆರೆ, ಡಿ.15– ನಗರದ ಖಾಸಗಿ ಹೋಟೆಲ್‌ನಲ್ಲಿ ವಿಜಯೇಂದ್ರ ಬೆಂಬಲಿಸಿ ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ನೇತೃತ್ವದಲ್ಲಿ ನಡೆದ ಸಭೆ ಮುಕ್ತಾಯವಾಗಿದೆ. ಸಭೆಯಲ್ಲಿ ಮುಂದಿನ ಚುನಾವಣೆಯವರೆಗೂ ಬಿ.ವೈ.ವಿಜಯೇಂದ್ರ ಅವರನ್ನು ಬಿಜೆಪಿ ರಾಜ್ಯಾಧ್ಯಕ್ಷರನ್ನಾಗಿ ಮುಂದುವರೆಸಬೇಕು ಎಂಬ ಅಭಿಪ್ರಾಯ ಮಾಜಿ ಶಾಸಕರು, ಸಚಿವರಿಂದ ವ್ಯಕ್ತವಾಗಿದೆ.

ಸಭೆ ಬಳಿಕ ಮಾತನಾಡಿದ ಮಾಜಿ ಶಾಸಕ ಕಟ್ಟಾ ಸುಬ್ರಮಣ್ಯ ನಾಯ್ಡು ವಿಜಯೇಂದ್ರ ಅವರನ್ನು ಮುಂದಿನ ಚುನಾವಣೆವರೆಗೂ ಬಿಜೆಪಿ ರಾಜ್ಯಾಧ್ಯಕ್ಷರನ್ನಾಗಿ ಮುಂದುವರೆಸಬೇಕು. ಯಡಿಯೂರಪ್ಪ ಅವರ ಹುಟ್ಟುಹಬ್ಬದ ಪ್ರಯುಕ್ತ ದಾವಣಗೆರೆಯಲ್ಲಿ ಸಮಾವೇಶ ಮಾಡುತ್ತೇವೆ. ದೆಹಲಿಗೆ ತೆರಳಿ ರಾಷ್ಟ್ರೀಯ ನಾಯಕರಿಗೂ ಆಹ್ವಾನ ನೀಡುತ್ತೇವೆ. ಇಂದಿನ ಸಭೆಯಲ್ಲಿ ಮುಂದಿನ ಚುನಾವಣೆಯಲ್ಲಿ ಗೆಲ್ಲಲು ಶಕ್ತಿ ಇರುವವರು ಸೇರಿದ್ದೇವೆ ಎಂದರು.



ದಾವಣಗೆರೆಯಲ್ಲಿ ಮಾಜಿ ಸಚಿವ ರೇಣುಕಾಚಾರ್ಯ ಅಧ್ಯಕ್ಷತೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಬಣದ ಮುಖಂಡರು ಸಭೆ ನಡೆಸಿದರು.

ನಾವೆಲ್ಲರೂ ಪಕ್ಷದ ನಿಷ್ಠಾವಂತ ಕಾರ್ಯಕರ್ತರು, ನಮಗೆಲ್ಲರಿಗೂ ಚುನಾವಣೆಗೆ ಸ್ಪರ್ಧಿಸಲು ಅವಕಾಶ ಕೊಡಬೇಕು ಎಂಬ ಬೇಡಿಕೆ ಇದೆ. ಎಲ್ಲರಿಗೂ ಸೂಕ್ತ ಸ್ಥಾನಮಾನ ಕೊಡಬೇಕು ಎಂಬುದು ನಮ್ಮ ಅಭಿಪ್ರಾಯವಾಗಿದೆ. ಇಂದು ನಡೆದ ಸಭೆಯಲ್ಲಿ 10 ಮಂದಿಯ ಪ್ರಮುಖರ ಸಮಿತಿ ರಚನೆ ಮಾಡಲಾಗಿದೆ. ರಾಜಕೀಯ ಸಮಾವೇಶ ಮಾಡಲು ಅವಕಾಶ ಇಲ್ಲದಿರುವುದರಿಂದ ಯಡಿಯೂರಪ್ಪ ಅವರ ಹುಟ್ಟುಹಬ್ಬ ಆಚರಣೆ ಮಾಡುತ್ತೇವೆ. ■ 9ನೇ ಪುಟಕ್ಕೆ

150 ಕೋಟಿ ಆಫರ್; ವಿಜಯೇಂದ್ರ ಮೇಲಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪ ಸುಳ್ಳು

ಅಲ್ಪಸಂಖ್ಯಾತ ಆಯೋಗದ ಮಾಜಿ ಅಧ್ಯಕ್ಷ ಅನ್ವರ್ ಮಾಣಿಪ್ಪಾಡಿ ಸ್ಪಷ್ಟನೆ

ಮಂಗಳೂರು, ಡಿ.15– ವಕ್ಫ್ ಆಸ್ತಿ ಕಬಳಿಕೆಯ ಬಗ್ಗೆ ಮೌನವಾಗಿರಲು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು 150 ಕೋಟಿ ಆಫರ್ ಮಾಡಿದ್ದರೆಂಬ ಸಿಎಂ ಸಿದ್ದರಾಮಯ್ಯ ಆರೋಪ ಸುಳ್ಳು ಎಂದು ಅಲ್ಪಸಂಖ್ಯಾತ ಆಯೋಗದ ಮಾಜಿ ಅಧ್ಯಕ್ಷ ಅನ್ವರ್ ಮಾಣಿಪ್ಪಾಡಿ ಸ್ಪಷ್ಟಪಡಿಸಿದ್ದಾರೆ.



ಮಾಧ್ಯಮದ ಜೊತೆ ಮಾತನಾಡಿದ ಅವರು, ಈ ಪ್ರಕರಣವನ್ನು ಮುಚ್ಚಿ ಹಾಕಲು ಕಾಂಗ್ರೆಸ್‌ನವರೇ ಕೋಟಿ ಕೋಟಿ ಲಂಚ ನೀಡುವ ಆಫರ್ ನೀಡಿದ್ದಾರೆ ಎಂದು ಆರೋಪಿಸಿದ್ದಾರೆ.

ಸಿಎಂ ಸಿದ್ದರಾಮಯ್ಯನವರು ಇದೀಗ ಮಾಡಿದ ಆರೋಪ ಸುಳ್ಳು. ವಿಜಯೇಂದ್ರ ಯಾವುದೇ ರೀತಿಯ ಹಣದ ಆಫರ್ ನೀಡಿಲ್ಲ. ಸರ್ಕಾರ ತನಿಖೆ ಮಾಡಬೇಕೆಂದು ವಿಜಯೇಂದ್ರ ಅವರನ್ನು (ಯಡಿಯೂರಪ್ಪ ಸಿಎಂ ಆಗಿದ್ದಾಗ) ಒತ್ತಾಯಿಸಿದ್ದೆ. ಈ ವರದಿಯನ್ನು ಮುಚ್ಚಿ ಹಾಕಲು ಪ್ರಯತ್ನಿಸಿದ ಎಲ್ಲರ ವಿರುದ್ಧ ಕಿಡಿಕಾರಿದ್ದು ಸತ್ಯ. ಇದೀಗ ಸಿಎಂ ಸಿದ್ದರಾಮಯ್ಯ ಅವರು ಹೇಳಿದ ರೀತಿ ಸಿಬಿಐಗೆ ■ 9ನೇ ಪುಟಕ್ಕೆ

ಮೈಸೂರು ಮಿತ್ರ ಸೋಮವಾರ 16 ಡಿಸೆಂಬರ್ 2024

36ನೇ ಆವೃತ್ತಿ ಎನ್.ಆರ್.ಗಾಲ್ಫ್ ಓಪನ್ ಉದ್ಘಾಟನೆ



ಮೈಸೂರಿನ ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್ (ಜೆಡಬ್ಲ್ಯುಜಿಸಿ)ನಲ್ಲಿ ನಡೆದ 36ನೇ ಆವೃತ್ತಿಯ ಎನ್.ಆರ್.ಗಾಲ್ಫ್ ಓಪನ್ ಮತ್ತು ವರ್ಷದ ಪಂದ್ಯದ ಚಾಂಪಿಯನ್ ಶಿಪ್ ಅನ್ನು ಎನ್.ಆರ್.ಗ್ರೂಪ್‌ನ ವ್ಯವಸ್ಥಾಪಕ ಪಾಲುದಾರ ಅರ್ಜುನ್ ರಂಗ ಉದ್ಘಾಟಿಸಿದರು. ಜೆಡಬ್ಲ್ಯುಜಿಸಿ ಅಧ್ಯಕ್ಷ ಡಾ.ಅಬ್ರಹಾಂ ಥಾಮಸ್, ಕ್ಯಾಪ್ಟನ್ ಎಂ.ಎಸ್. ಯಶ್ವಂತ್, ಕಾರ್ಯದರ್ಶಿ ವಿ.ಜಿ.ಆಚಾರ್ ಹಾಗೂ ಸಮಿತಿ ಸದಸ್ಯರು ಚಿತ್ರದಲ್ಲಿದ್ದಾರೆ.

ಬ್ರಾಂಡೆಡ್ ಸಿದ್ಧ ಉಡುಪುಗಳು, ಶೂಸ್ ಮಾರಾಟ



ಮೈಸೂರು,ಡಿ.15–ಬ್ರಾಂಡೆಡ್ ಸಿದ್ಧ ಉಡುಪುಗಳ ಮತ್ತು ಫುಟ್‌ವೇರ್‌ಗಳ ಮೇಲೆ ಭಾರಿ ರಿಯಾಯಿತಿ ಮಾರಾಟವನ್ನು ಮೈಸೂರಿನ ವಿನೋಬಾ ರಸ್ತೆಯಲ್ಲಿರುವ ನಂಜರಾಜ ಬಹದ್ದೂರ್ ಛತ್ರದಲ್ಲಿ ಏರ್ಪಡಿಸಲಾಗಿದೆ. ಬ್ರಾಂಡೆಡ್ ಫುಟ್ ವೇರ್ ಪುರುಷರ ಮತ್ತು ಮಹಿಳೆಯರ ಸ್ಪೋರ್ಟ್ಸ್ ಶೂಸ್, ಪುರುಷರ ಬ್ರಾಂಡೆಡ್ ಶರ್ಟ್ಸ್, ಪ್ಯಾಂಟ್ಸ್, ಟೀ–ಶರ್ಟ್ಸ್, ಜಾಕೆಟ್ಸ್, ಟ್ರಾಕ್‌ಪ್ಯಾಂಟ್, ಲೋವರ್ ಶರ್ಟ್ಸ್, ಬೆಲ್ಟ್‌ಗಳು ಲಭ್ಯವಿದ್ದು, ಮಹಿಳೆಯರ ಬ್ರಾಂಡೆಡ್ ಕುರ್ತಿಗಳು ಲೇಡಿಸ್ ಟಾಪ್ಸ್, ಜಾಕೆಟ್ಸ್, ಸ್ವೆಟರ್ಸ್, ಟ್ರ್ಯಾಕ್ ಪ್ಯಾಂಟ್ಸ್, ಟೀ ಶರ್ಟ್ಸ್, ಟೈಟ್ಸ್, ಪ್ಲಾಜೋ, ಲೆಗ್ಗಿನ್ಸ್ ಸಹಿತ ಅನೇಕ ಬ್ರಾಂಡೆಡ್ ಉತ್ಪನ್ನಗಳು ಆಫರ್ ದರದಲ್ಲಿ ಮಾರಾಟವಾಗುತ್ತಿವೆ.

ಬ್ರಾಂಡೆಡ್ ಅಡಿದಾಸ್, ನೈಕಿ, ಪೂಮಾ, ರೋಡ್ ಸ್ಟಾರ್, ರೀಬಾಕ್, ಎಚ್‌ಆರ್‌ಎಕ್ಸ್ ವಾನ್ಸ್, ಯುಸಿಬಿ, ಮಸ್ಟ್ ಅಂಡ್ ಹರ್ಬರ್, ಲೊಟ್ಟೊ, ಸಹಿತ ವಿವಿಧ ಕಂಪನಿಗಳ ಉತ್ಪನ್ನಗಳ ಮೇಲೆ ಭಾರಿ ರಿಯಾಯಿತಿ ಇದೆ. ಈ ಅವಕಾಶ ಡಿ.20ರವರೆಗೆ ಮಾತ್ರ ಬೆಳಗ್ಗೆ 10.30ರಿಂದ ರಾತ್ರಿ 9.30ರವರೆಗೆ ಪ್ರದರ್ಶನ ಹಾಗೂ ಮಾರಾಟ ಸೌಲಭ್ಯವಿದೆ.

ಸಾಂಸ್ಕೃತಿಕ ಸಂಭ್ರಮ



ಮೈಸೂರಿನ ರೋಟರಿ ವೆಸ್ಟ್ ಸ್ಕೂಲ್‌ನ 'ಪರ್ವ' ವಾರ್ಷಿಕೋತ್ಸವ ಸಮಾರಂಭದಲ್ಲಿ ವಿದ್ಯಾರ್ಥಿನಿಯರು ಸಾಂಸ್ಕೃತಿಕ ಕಾರ್ಯಕ್ರಮ ಪ್ರಸ್ತುತಪಡಿಸಿದರು.

ದಿ ಮೈಸೂರು ಕೋ-ಆಪರೇಟಿವ್ ಬ್ಯಾಂಕ್ ನಿರ್ದೇಶಕರ ಚುನಾವಣೆ

ಕೆ.ಉಮಾಶಂಕರ್ ನೇತೃತ್ವದ ತಂಡದಿಂದ ಮತಯಾಚನೆ



ಮೈಸೂರಿನ ಪಡುವಾರಹಳ್ಳಿಯಲ್ಲಿ ಕೆ.ಉಮಾಶಂಕರ್ ನೇತೃತ್ವದ ತಂಡದಿಂದ ಭಾನುವಾರ ಮತ ಯಾಚಿಸಲಾಯಿತು.


ಮೈಸೂರು,ಡಿ.15(ಪಿಎಂ)– ಮೈಸೂರಿನ ಗಾಂಧಿ ಚೌಕದಲ್ಲಿರುವ ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್‌ನ ನಿರ್ದೇಶಕರ ಚುನಾವಣೆಯು 2025ರ ಜನವರಿಯಲ್ಲಿ ನಡೆಯಲಿದ್ದು, ಈ ಹಿನ್ನೆಲೆಯಲ್ಲಿ ಕೆ.ಉಮಾಶಂಕರ್ ನೇತೃತ್ವದ ತಂಡದಿಂದ ಭಾನುವಾರ ಮತ ಯಾಚಿಸಲಾಯಿತು.

ಮೈಸೂರಿನ ಪಡುವಾರಹಳ್ಳಿಯಲ್ಲಿ ಯಜಮಾನರ ಸಮ್ಮುಖದಲ್ಲಿ ಮತದಾರರನ್ನು ಭೇಟಿ ಮಾಡಿ ಮತ ಯಾಚಿಸಿ ಬೆಂಬಲಿಸುವಂತೆ ಕೋರಲಾಯಿತು. ಇದೇ ವೇಳೆ ಮಾತನಾಡಿದ ಬ್ಯಾಂಕಿನ ಮಾಜಿ ಅಧ್ಯಕ್ಷ ಕೆ.ಉಮಾಶಂಕರ್, ಕಳೆದ ಐದು ವರ್ಷಗಳ ತಮ್ಮ ತಂಡದ ಅವಧಿಯಲ್ಲಿ ಎಟಿಎಂ ಸೇವೆ ಕಲ್ಪಿಸಲಾಗಿದೆ. ಜೊತೆಗೆ ಪ್ರತಿ ವರ್ಷವೂ ಬ್ಯಾಂಕ್ ಲಾಭದಲ್ಲಿದ್ದು, ಸದಸ್ಯರಿಗೆ ಶೇ.10ರಷ್ಟು ಡಿವಿಡೆಂಟ್ ನೀಡಲಾಗಿದೆ ಎಂದು ತಿಳಿಸಿದರು.

ಸದಸ್ಯರು ಮರಣ ಹೊಂದಿದರೆ, ಅಂದೇ ಮರಣನಿಧಿ ನೀಡಿ, ಸದಸ್ಯರ ನಂಬಿಕೆ ಗಳಿಸಿದ್ದೇವೆ. ಮುಂದೆ ಆರ್‌ಬಿಐ ನಿರ್ದೇಶನದಂತೆ ಬಿಓಎಂ ಮಾಡಿ ಭವಿಷ್ಯದಲ್ಲಿ ನಾಲ್ಕು ಶಾಖೆಗಳನ್ನು ತೆರೆಯಲು ಕ್ರಮ ವಹಿಸುತ್ತೇವೆ. ಆ ಮೂಲಕ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಸ್ಥಾಪಿಸಿದ ಬ್ಯಾಂಕಿನ ಪ್ರಗತಿಯೊಂದಿಗೆ ಸದಸ್ಯರ ಮನೆ ಬಾಗಿಲಿಗೆ ಬ್ಯಾಂಕಿನ ಸೇವೆ ಒದಗಿಸಲು ಕಾರ್ಯಕ್ರಮ ರೂಪಿಸಲಿದ್ದೇವೆ ಎಂದು ಹೇಳಿದರು.

ಬ್ಯಾಂಕಿನ ಅಧ್ಯಕ್ಷೆ ಪಿ.ರಾಜೇಶ್ವರಿ (ಮಹಿಳಾ ಮೀಸಲು), ಉಪಾಧ್ಯಕ್ಷೆ ಪಿ.ಸವಿತಾ (ಮಹಿಳಾ ಮೀಸಲು), ನಿರ್ದೇಶಕರಾದ ಹೆಚ್.ಹರೀಶ್ ಕುಮಾರ್(ಸಾಮಾನ್ಯ), ಪಡುವಾರಹಳ್ಳಿ ಎಂ.ರಾಮಕೃಷ್ಣ (ಎಸ್‌ಟಿ ವಿಭಾಗ), ಸಿ.ರೇವಣ್ಣ (ಬಿಸಿಎ), ಎಂ.ಕುಮಾರ್ (ಸಾಮಾನ್ಯ), ಕೆ.ಗಿರೀಶ (ಎಸ್‌ಸಿ ಮೀಸಲು) ಹಾಜರಿದ್ದರು.

ಬೂತ್ ಅಧ್ಯಕ್ಷರ ಆಯ್ಕೆ



ಬಿಜೆಪಿ ಸಂಘಟನಾ ಪರ್ವದ ಹಿನ್ನೆಲೆಯಲ್ಲಿ ಮೈಸೂರು ನರಸಿಂಹರಾಜ ಕ್ಷೇತ್ರದ 30ನೇ ವಾರ್ಡ್ ವ್ಯಾಪ್ತಿಯ ಹಲವು ಬೂತ್‌ಗಳ ಅಧ್ಯಕ್ಷರಾಗಿ ಆಯ್ಕೆಯಾದವರನ್ನು ಅಭಿನಂದಿಸಲಾಯಿತು. ಈ ವೇಳೆ ಮಾಜಿ ಮೇಯರ್ ಸಂದೇಶ್ ಸ್ವಾಮಿ, ಮಂಡಲದ ಅಧ್ಯಕ್ಷ ಎಸ್.ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಪದ್ಮನಾಭ, ಚುನಾವಣೆ ಅಧಿಕಾರಿ ಮೈಸೂರು ರಾಜೇಶ್, ಮುಖಂಡರಾದ ನಾರಾಯಣ ಲೋಲಪ್ಪ ಭಾನುಪ್ರಕಾಶ್ ಮತ್ತಿತರರು ಉಪಸ್ಥಿತರಿದ್ದರು.

ದತ್ತಾತ್ರೇಯ ಸ್ಮರಣೆ ಮಾಡಿದರೆ ಕಷ್ಟ ನಿವಾರಣೆ ಖಚಿತ

ದತ್ತಾತ್ರೇಯ ಸ್ವಾಮಿಗೆ ಪೂಜೆ ಸಲ್ಲಿಸಿ, ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅಭಿಮತ





ಮೈಸೂರಿನ ನಂಜನಗೂಡು ರಸ್ತೆಯ ಶ್ರೀ ಅವಧೂತ ದತ್ತ ಪೀಠದಲ್ಲಿ ಭಾನುವಾರ ಶ್ರೀ ದತ್ತಾತ್ರೇಯ ಜಯಂತಿ ಪ್ರಯುಕ್ತ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಶ್ರೀ ದತ್ತಾತ್ರೇಯ ಸ್ವಾಮಿಗೆ ತೈಲಾಭಿಷೇಕ ನೆರವೇರಿಸಿದರು. ಅವಧೂತ ದತ್ತ ಪೀಠದ ಕಿರಿಯ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಡಿ.15(ಬಿಎಲ್‌ಯು)– ದತ್ತಾತ್ರೇಯ ಸ್ಮರಣೆ ಮಾಡಿದರೆ ಕಷ್ಟ ನಿವಾರಣೆಯಾಗುತ್ತದೆ ಎಂದು ಮೈಸೂರಿನ ಶ್ರೀ ಅವಧೂತ ದತ್ತ ಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅಭಿಪ್ರಾಯಪಟ್ಟರು.

ನಗರದ ನಂಜನಗೂಡು ಊಟಿ ರಸ್ತೆಯ ಗಣಪತಿ ಸಚ್ಚಿದಾನಂದ ಆಶ್ರಮದ ವಿಶ್ವ ಪ್ರಾರ್ಥನಾ ಮಂದಿರದಲ್ಲಿ ದತ್ತಾತ್ರೇಯ ಸ್ವಾಮೀಜಿಗೆ ಪೂಜೆ ಸಲ್ಲಿಸಿದ ನಂತರ ಆಶೀರ್ವಚನ ನೀಡಿ ಮಾತನಾಡಿದ ಅವರು, ಭಕ್ತಿಯಿಂದ ಸ್ಮರಣೆ ಮಾಡಿದರೆ ದತ್ತಾತ್ರೇಯ ಸ್ವಾಮಿಗಳು ಸಂತೃಪ್ತರಾಗುತ್ತಾರೆ. ಇದರಿಂದ ಜಗತ್ತಿನ ಎಲ್ಲಾ ರೀತಿಯ ಕಷ್ಟ ನಿವಾರಣೆಗೆ ಆಗುತ್ತದೆ ಎಂದು ಹೇಳಿದರು.

ಇಂದು ವಿಶ್ವದಲ್ಲಿ ಯುದ್ಧ ಭಯ ಕಾಡುತ್ತಿದೆ. ಇದರಿಂದ ಶಾಂತಿ ಮತ್ತು ನೆಮ್ಮದಿ ಇಲ್ಲದಂತಾಗಿದೆ. ಈ ಹಿನ್ನೆಲೆ ಜಗತ್ತಿನಲ್ಲಿ ಶಾಂತಿ, ನೆಮ್ಮದಿ ನೆಲೆಸಿ ರಕ್ಷಣೆ ಮಾಡುವಂತೆ ದತ್ತಾತ್ರೇಯ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಲಾಗಿದೆ ಎಂದು ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ತಿಳಿಸಿದರು.

ರಾಕ್ಷಸರು ಹಾಗೂ ಮನುಷ್ಯರಿಗೂ ದತ್ತಾತ್ರೇಯ ಸ್ವಾಮಿಗಳೆ ಗುರುಗಳು. ಬುದ್ಧಿ ಕೆಟ್ಟಾಗ, ಅನಾರೋಗ್ಯ ಉಂಟಾದಾಗ, ದಿಕ್ಕು ತಪ್ಪಿದಾಗ ದತ್ತಾತ್ರೇಯ ಸ್ವಾಮಿ ಸ್ಮರಣೆ ಮಾಡಿದರೆ ಕಷ್ಟ ನಿವಾರಣೆ ಆಗುತ್ತದೆ ಎಂದು ಸ್ವಾಮೀಜಿ ಸಲಹೆ ನೀಡಿದರು. ಈ ಸಂದರ್ಭದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ದತ್ತಾತ್ರೇಯ ಸ್ವಾಮಿಗೆ ತೈಲಾಭಿಷೇಕ ನೆರವೇರಿಸಿದರು. ಪೌರ್ಣಮಿ ಹಾಗೂ ಶ್ರೀ ದತ್ತಾತ್ರೇಯ ಜಯಂತಿ ಪ್ರಯುಕ್ತ ಪವಮಾನ ಹೋಮ ಮತ್ತು ದತ್ತಾತ್ರೇಯ ವಜ್ರ ಮಂತ್ರ ಹೋಮ ಕೂಡ ನೆರವೇರಿಸಲಾಯಿತು. ಕೊಜ್ಜಿ ಆಶ್ರಮ ಭಜನಾ ತಂಡದಿಂದ ಶ್ರೀ ದತ್ತಾತ್ರೇಯ ಸ್ವಾಮಿ ನಾಮ ಸಂಕೀರ್ತನೆ ಹಾಗೂ ಅನಘ ವ್ರತ ಮಾಡಲಾಯಿತು.

ವಿಶ್ವ ಒಕ್ಕಲಿಗ ಮಹಾಸಂಸ್ಥಾನ ಮಠಕ್ಕೆ ನಿಶ್ಚಲಾನಂದನಾಥ ಮಹಾಸ್ವಾಮೀಜಿ ಉತ್ತರಾಧಿಕಾರಿಯಾಗಿ ಪಟ್ಟಾಧಿಕಾರ



ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠಕ್ಕೆ ಉತ್ತರಾಧಿಕಾರಿಯಾಗಿ ನಿಶ್ಚಲಾನಂದನಾಥ ಮಹಾಸ್ವಾಮೀಜಿ ಅವರು ಭಾನುವಾರ ಜವಾಬ್ದಾರಿ ವಹಿಸಿಕೊಂಡರು.

ಕೆಂಗೇರಿ, ಡಿ.15– ನಿಶ್ಚಲಾನಂದನಾಥ ಮಹಾಸ್ವಾಮೀಜಿ ಅವರು ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠಕ್ಕೆ ಉತ್ತರಾಧಿಕಾರಿಯಾಗಿ ನೂರಾರು ಸ್ವಾಮೀಜಿಗಳ ಸಮ್ಮುಖದಲ್ಲಿ ಭಾನುವಾರ ಜವಾಬ್ದಾರಿ ವಹಿಸಿಕೊಂಡರು.

ಮೈಸೂರು ರಸ್ತೆಯ ಕೆಂಗೇರಿಯಲ್ಲಿರುವ ಮಠದ ಆವರಣದಲ್ಲಿ ವಿಧಿ ವಿಧಾನಗಳೊಂದಿಗೆ ಸನ್ಯಾಸತ್ವ ದೀಕ್ಷೆ ಪಡೆದ ನಿವೃತ್ತ ಕೆಎಎಸ್ ಅಧಿಕಾರಿ ಎಚ್.ಎಲ್.ನಾಗರಾಜ್ ಅವರು ನಾಡಿನ ಮಠಾಧೀಶರು, ಸಾವಿರಾರು ಜನರ ಸಮ್ಮುಖದಲ್ಲಿ ನಿಶ್ಚಲಾನಂದನಾಥ ಮಹಾಸ್ವಾಮೀಜಿ ಎಂಬ ನಾಮಾಂಕಿತದೊಂದಿಗೆ ಪೀಠ ಏರಿದರು.

ನಿಡುಮಾಮಿಡಿ ಜಗದ್ಗುರು ಮಠದ ವೀರಭದ್ರ ಚನ್ನಮಲ್ಲ ದೇಶೀಕೇಂದ್ರ ಸ್ವಾಮೀಜಿ ಮಾತನಾಡಿ, ಕೆಎಎಸ್‌ನಂತಹ ಅಧಿಕಾರ ಹೊಂದಿದವರು ಲೌಕಿಕ ಆಕರ್ಷಣೆ ತೊರೆದು ಸನ್ಯಾಸತ್ವ ಸ್ವೀಕರಿಸುವುದು ಅಸಾಮಾನ್ಯ ಸಂಗತಿ. ಭಕ್ತರು ಹಾಗೂ ಸಮಾಜದ ಒಳಿತಿಗೆ ಪೂರಕವಾಗಿ ಕಾರ್ಯ ನಿರ್ವಹಿಸಬೇಕು. ಗುರುಗಳಿಗೆ ನಿಷ್ಠನಾಗಿರಬೇಕು ಎಂದು ಸಲಹೆ ನೀಡಿದರು.


ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿ, ಆದಿ ಚುಂಚನಗಿರಿ ಮಠ ಹಾಗೂ ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನದ ನಡುವೆ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ಎರಡೂ ಮಠಕ್ಕೂ ಇರುವುದು ಒಂದೇ ಪರಂಪರೆ, ಒಬ್ಬರೇ ಗುರು. ಒಂದೇ ಸಮುದಾಯವಾದ ನಾವು ಎಂದಿಗೂ ಒಂದೇ ತಾಯಿಯ ಮಕ್ಕಳು ಎಂದು ಸ್ಪಷ್ಟಪಡಿಸಿದರು. ನಮಗೆ ಮೂರನೇ ವ್ಯಕ್ತಿಯ ಅವಶ್ಯಕತೆ ಬರಬಾರದು ಎಂದೂ ಹೇಳಿದರು.

ಶ್ರೀಮಠದ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ ಮಾತನಾಡಿ, ನನಗೆ 80 ವರ್ಷ ಆಗಿರುವುದರಿಂದ ಆರೋಗ್ಯ ಕ್ಷೀಣಿಸುತ್ತಿದೆ. ಹೀಗಾಗಿ, ಮುಂದಿನ ಉತ್ತರಾಧಿಕಾರಿ ಮಾಡಬೇಕು ಎಂಬ ತೀರ್ಮಾನ ತೆಗೆದುಕೊಳ್ಳಲಾಯಿತು. ಅದರಂತೆ ನಾವು ಎಚ್.ಎಲ್. ನಾಗರಾಜ್ ಅವರ ಪಟ್ಟಾಭಿಷೇಕ ಮಾಡಿದ್ದೇವೆ. ಬಡ ಜನರು ಮೆಡಿಕಲ್ ವಿದ್ಯಾಭ್ಯಾಸ ಮಾಡಲು ಕಾಲೇಜು ನಿರ್ಮಾಣದ ಸಂಕಲ್ಪ ಮಾಡಬೇಕಾಗಿದೆ. ನಿಮ್ಮೆಲ್ಲರ ಸಹಕಾರ ಬೇಕು ಎಂದರು.

ಉತ್ತರಾಧಿಕಾರಿ ನಿಶ್ಚಲಾನಂದನಾಥ ಸ್ವಾಮೀಜಿ ಮಾತನಾಡಿ, ನಾನು ಇಂದು ಸಮಾಜಕ್ಕೆ ಅರ್ಪಣೆಯಾಗಲು ತುಮಕೂರಿನ ಸಿದ್ದಗಂಗಾ ಮಠದ ಶಿವಕುಮಾರ ಸ್ವಾಮೀಜಿಗಳು ಹಾಗೂ ಆದಿಚುಂಚನಗಿರಿ ಶ್ರೀಗಳು ಕಾರಣ. ಸಂಸ್ಥಾನ ಮಠಕ್ಕೆ ಹಲವರ ತ್ಯಾಗದ ಕೊಡುಗೆ ಇದೆ. ನಾನು ಎಲ್ಲವನ್ನೂ ತ್ಯಾಗ ಮಾಡಿ ಬಂದಿದ್ದೇನೆ. ನಿರ್ಮಲಾನಂದನಾಥ ಶ್ರೀಗಳು ಕೂಡ ನನಗೆ ಸಲಹೆ ನೀಡಿದ್ದಾರೆ. ಹಿಂಜರಿಕೆ ಇಲ್ಲದೆ ನಾವಿಬ್ಬರೂ ಸಮಾಜವನ್ನು ಮುನ್ನಡೆಸೋಣ ಎಂದಿದ್ದಾರೆ ಎಂದು ಹೇಳಿದರು. ಪಟ್ಟಾಧಿಕಾರ ಕಾರ್ಯಕ್ರಮಕ್ಕೆ ಆದಿಚುಂಚನಗಿರಿ ಶ್ರೀಗಳು ಬರುವುದಿಲ್ಲ ಎಂದು ಹಲವರು ಹೇಳಿದ್ದರು. ಆದರೆ, ಇಂದು ನನ್ನ ಪಕ್ಕ ಕುಳಿತು ನನ್ನ ಶಕ್ತಿಯಾಗಿ ನಿಂತಿದ್ದಾರೆ ಎಂದು ಕೃತಜ್ಞತೆ ಸೂಚಿಸಿದರು.

ಸ್ಫಟಿಕಪುರಿ ಮಹಾ ಸಂಸ್ಥಾನದ ನಂಜಾವಧೂತ ಸ್ವಾಮೀಜಿ, ಅವಧೂತ ವಿನಯ್ ಗುರೂಜಿ, ಬೇಲಿಮಠದ ಶಿವಾನುಭವ ಚರಮೂರ್ತಿ ಮಹಾಸ್ವಾಮೀಜಿ, ಹಿರೇಮಠ ಸಂಸ್ಥಾನದ ಡಾ.ಬಸವಲಿಂಗ ಪಟ್ಟಾಧ್ಯಕ್ಷರು, ಮಧುರೆ ಭಗೀರಥ ಪೀಠದ ಪುರುಷೋತ್ತಮಾನಂದ ಮಹಾಸ್ವಾಮೀಜಿ, ವಿಶ್ವಕರ್ಮ ಏಕದಂಡಗಿ ಪೀಠದ ಕಾಳಹಸ್ತೇಂದ್ರ ಮಹಾಸ್ವಾಮೀಜಿ, ಮುಖಂಡರಾದ ಪಂಚಲಿಂಗಯ್ಯ, ರಾಮಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

16.12.2024 ಸೋಮವಾರ, ಮಳೆ ನಕ್ಷತ್ರ: ಮೂಲ, 16.12.2024ರಿಂದ 28.12.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಧನುರ್ಮಾಸ, ಕೃಷ್ಣ ಪಕ್ಷ,
ತಿಥಿ: ಪಾಡ್ಯ, ನಕ್ಷತ್ರ: ಆರ್ದ್ರಾ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಸರ್ಕಾರಿ ಆಯುರ್ವೇದ ಕಾಲೇಜು ಮತ್ತು ಆಸ್ಪತ್ರೆ, ಮೈಸೂರು ಯೋಗ ಒಕ್ಕೂಟ :** ಉಚಿತ ಆರೋಗ್ಯ ತಪಾಸಣೆ, ಸ್ಥಳ: ಪರಮಹಂಸ ಯೋಗ ಮಹಾವಿದ್ಯಾಲಯ ಇಂಟರ್‌ನ್ಯಾಷನಲ್ ಯೋಗ ಸ್ಕೂಲ್, ರಾಮಕೃಷ್ಣನಗರ, ಬೆಳಗ್ಗೆ 8.30 ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ವೆರಿಕೋಸ್ ವೇನ್ಸ್, ಬೊಜ್ಜು ನಿವಾರಣೆ ಹಾಗೂ ಮಧುಮೇಹ/ಸಕ್ಕರೆ ಕಾಯಿಲೆಗೆ ಪ್ರತ್ಯೇಕ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ ಸಂಜೆ 4.30ರವರೆಗೆ.

■ **ಪಾಳ್ಯಂ ಶ್ರೀ ಶಾಸ್ತಾಪೀಠ, ಅಭಯದಾಯಕ ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನಂ:** ಧನುರ್ಮಾಸದ ವಿಶೇಷ ಪೂಜಾ ಲಕ್ಷಾರ್ಚನಾ ಮತ್ತು ವಾರ್ಷಿಕ ಕುಂಬಾಭಿಷೇಕ ಪೂಜಾ ಮಹೋತ್ಸವ, ಬೆಳಗ್ಗೆಯಿಂದ ಶಕ್ತಿ ಗಣಪತಿ ಹೋಮ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಪ್ರಾಂಗಣ, ರಾಘವೇಂದ್ರನಗರ.

■ **ಶ್ರೀ ಶ್ರೀ ನಾಗಾನಂದ ದತ್ತಾತ್ರೇಯ ಮಠ: ಕ್ರೋಧಿನಾಮ ಸಂವತ್ಸರದ ಭಗವಾನ್** ಶ್ರೀ ದತ್ತಾತ್ರೇಯ ಸ್ವಾಮಿಯವರ 48ನೇ ವರ್ಷದ ಸಪ್ತಾಹ, ಬೆಳಗ್ಗೆ ಕಳಸ ಸ್ಥಾಪನೆ, ಗಣಪತಿ ಪೂಜೆ, ವರುಣ, ಪೂಜೆ, ಕಂಕಣ ಬಂಧನ, ಅಭಿಷೇಕ, ವಿಷ್ಣು ಸಹಸ್ರನಾಮ ದತ್ತಿ ಸಹಸ್ರನಾಮ, ಶ್ರೀ ಗುರುಚಂದ್ರ ಪಾರಾಯಣ, ಭಜನೆ, ದತ್ತಾತ್ರೇಯ ಉತ್ಸವ, ಮಹಾಮಂಗಳಾರತಿ, ಸಂಜೆ 6.30ಕ್ಕೆ ಭಜನೆ, ರಾತ್ರಿ 8 ಗಂಟೆಗೆ ಪೂಜೆ, ಪ್ರಸಾದ ವಿನಿಯೋಗ, ದೇವಸ್ಥಾನದ ಆವರಣ, ಬೆಲವತ್ತ ಗ್ರಾಮ (ಮಂಟಿ).

■ **ಮೈಸೂರು ವಿಶ್ವವಿದ್ಯಾನಿಲಯ ಮನೋ ವಿಜ್ಞಾನ ಅಧ್ಯಯನ ವಿಭಾಗ, ಮನೋ ವಿಜ್ಞಾನ ಹಿರಿಯ ವಿದ್ಯಾರ್ಥಿಗಳ ಸಂಘ, ಮೈಸೂರು ಸೈಕಾಲಜಿಕಲ್ ಸೊಸೈಟಿ :** ಮನೋ ವಿಜ್ಞಾನ ವಿಭಾಗದ ಶ್ರೇಷ್ಠ ಹಿರಿಯ ವಿದ್ಯಾರ್ಥಿ ರಾಷ್ಟ್ರಕವಿ ಕುವೆಂಪು ಅವರ ಜನ್ಮೋತ್ಸವ ದಿನಾಚರಣೆ ಪ್ರಯುಕ್ತ ಮನೋ ವಿಜ್ಞಾನ ವಿಭಾಗದ ಶತಮಾನೋತ್ಸವ ಸಂಭ್ರಮಾಚರಣೆ ವಿಶೇಷ ಉಪನ್ಯಾಸ ಕಾರ್ಯಕ್ರಮ, ಉದ್ಘಾಟನೆ: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಅಧ್ಯಕ್ಷತೆ: ಮನೋ ವಿಜ್ಞಾನ ಅಧ್ಯಯನ ವಿಭಾಗದ ಮುಖ್ಯಸ್ಥೆ ಪ್ರೊ.ಸಂಪತ್ತ ಕುಬೇರ, ಸ್ಥಳ: ಮನೋ ವಿಜ್ಞಾನ ವಿಭಾಗ, ಮಾನಸಗಂಗೋತ್ರಿ, ಮೈಸೂರು ವಿವಿ ಬೆಳಗ್ಗೆ 11 ಗಂಟೆಗೆ

■ **ಶಬರಿ ಮಲೆ ಶ್ರೀ ಅಯ್ಯಪ್ಪ ಪೂಜಾ ಸಮಿತಿ, ಶ್ರೀ ಅಯ್ಯಪ್ಪ ಸ್ವಾಮಿ ಮತ್ತು ಶ್ರೀ ಗುರುವಾಯೂರ ಪುನ್ ದೇವಾಲಯ:** 64ನೇ ವಾರ್ಷಿಕ ಪೂಜಾ ಮಹೋತ್ಸವ, ಅನ್ನದಾನ, ಸ್ಥಳ: ದೇವಸ್ಥಾನದ ಆವರಣ, ಚಾಮುಂಡಿಬೆಟ್ಟದ ಪಾದ, 12.30ರಿಂದ.

■ **ರಂಗಾಯಣ, ಸಕ್ಕರಿ ಬಾಳಚಾರ್ಯ ಶಾಂತರವಿ ಟ್ರಸ್ಟ್ :** ಆಧುನಿಕ ಕನ್ನಡ ರಂಗಭೂಮಿ ದಿನಾಚರಣೆ ಅಂಗವಾಗಿ ಶಾಂತಕವಿ ಸಕ್ಕರೆ ಬಾಳಾಚಾರ್ಯರ ಬದುಕು ಬರಹ ಹಾಗೂ ನಾಟಕಗಳ ಕುರಿತು ಕಾರ್ಯಕ್ರಮ, ಉಪನ್ಯಾಸ: ಹಿರಿಯ ರಂಗಕರ್ಮಿಗಳಾದ ಪ್ರೊ.ಎನ್.ಉಮೇಶ್, ಡಾ.ಪ್ರಕಾಶ್ ಗರುಡ,ರಂಗ ಶಿಕ್ಷಕ ಉಮೇಶ್ ಸಾಲಿಮಾನ ಅವರಿಂದ. ಅಧ್ಯಕ್ಷತೆ: ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಸ್ಥಳ: ಬಿ.ವಿ.ಕಾರಂತ ರಂಗ ಚಾವಡಿ, ರಂಗಾಯಣ, ಬೆಳಗ್ಗೆ 10.30ಕ್ಕೆ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ 20ನೇ ಅವತರಣಿಕೆ, ಸ್ಥಳ: ರಾಮ್ ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

■ **ಶ್ರೀ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠ:** ವಿಷ್ಣು ದೀಪೋತ್ಸವ, ಬೆಳಗ್ಗೆ 7 ಗಂಟೆಗೆ, ಶ್ರೀ ಲಕ್ಷ್ಮಿಕಾಂತಸ್ವಾಮಿ ಮತ್ತು ಶ್ರೀ ಲಕ್ಷ್ಮಿದೇವಿಗೆ ಅಭಿಷೇಕ, ವಿಶೇಷ ಹೋಮ, ಹವನ, ವಿಶೇಷ ಅಲಂಕಾರ, ಸಂಜೆ 4.30ಕ್ಕೆ, ಗಣಪತಿ ಹೋಮ, ಸುದರ್ಶನ ಹೋಮ, ಪೂರ್ಣಾಹುತಿ, ಶ್ರೀ ಲಕ್ಷ್ಮಿಕಾಂತ ಸ್ವಾಮಿ ಉತ್ಸವ, ಸಂಜೆ 6 ಗಂಟೆಗೆ ದೀಪೋತ್ಸವ, ಸ್ಥಳ: ಶ್ರೀ ಲಕ್ಷ್ಮಿಕಾಂತ ದೇವಸ್ಥಾನ, ಇನ್ಫೋಸಿಸ್ ಎದುರು, ಹೆಬ್ಬಾಳು.

■ **ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ :** ಯೋಗ ಭೀಷ್ಮ, ಯೋಗ ಚೇತನ ಡಾ.ಬಿ.ಕೆ.ಎನ್.ಐಯ್ಯಂಗಾರ್ ಅವರ 106ನೇ ಜಯಂತೋತ್ಸವ, ಮುಖ್ಯ ಅತಿಥಿಗಳು: ಮೈಸೂರು ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮಾಜಿ ಅಧ್ಯಕ್ಷ ಚಂದ್ರಶೇಖರ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಹಿರಿಯ ಸಮಾಜ ಸೇವಕ ರಘುರಾಮ್ ವಾಜಪೇಯಿ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಸ್ಥಳ: ಟ್ರಸ್ಟ್ ಕಚೇರಿ ಆವರಣ, ವಿಷ್ಣುವರ್ಧನ್ ರಸ್ತೆ, ಚಾಮರಾಜಪುರಂ.

■ **ವಂದನ ಚಾರಿಟಬಲ್ ಫೌಂಡೇಷನ್, ಶ್ರೀ ಛಾಯಾದೇವಿ ವಿದ್ಯಾ ಸಂಸ್ಥೆ, ಪೊಲೀಸ್ ಇಲಾಖೆ :** ಅಪರಾಧ ತಡೆ ಮಾಸಾಚರಣೆ, ಸ್ಥಳ: ಶ್ರೀ ಛಾಯಾದೇವಿ ವಿದ್ಯಾ ಸಂಸ್ಥೆ, ರಾಜೇಂದ್ರನಗರ, ಮಧ್ಯಾಹ್ನ 2 ಗಂಟೆಗೆ.

■ **ವ್ಯವಸ್ಥಾಪಕರು:** ಗಾನ ಗಾರುಡಿಗ ಎಸ್. ಸಿದ್ಧಾರ್ಥ ಅವರ ಸ್ಮರಣಾರ್ಥ ಸ್ವರಾಂಜಲಿ ಕಾರ್ಯಕ್ರಮ, ಸ್ಥಳ: ನಾದಬ್ರಹ್ಮ ಸಂಗೀತ ಸಭಾಂಗಣ, ಸಂಜೆ 5 ಗಂಟೆಗೆ.

■ **ವೇಣು ಗೋಪಾಲಸ್ವಾಮಿ ದೇವಸ್ಥಾನ:** ತಿರುಪ್ಪಾವೈ ಪ್ರವಚನ ಕಾರ್ಯಕ್ರಮ, ವಿದ್ಯಾಸ್ಮಣಿ, ದರ್ಶನವಾರಿಧಿ, ಮಹಾರಾಣಿ ಕಾಲೇಜು ನಿವೃತ್ತ ಸಂಸ್ಕೃತ ಪ್ರಾಧ್ಯಾಪಕ ವಿದುಷಿ ಡಾ.ಕೆ.ಎಲ್.ಪ್ರಸನ್ನಾಕ್ಷಿ ಅವರಿಂದ ತಿರುಪ್ಪಾವೈ ಪ್ರವಚನ, ಸ್ಥಳ: ದೇವಸ್ಥಾನದಲ್ಲಿ ತ್ಯಾಗರಾಜ ರಸ್ತೆ, ಶ್ರೀ ಚಿಕ್ಕಾಂಜನೇಯ ಸ್ವಾಮಿ ದೇವಸ್ಥಾನದ ಸಮೀಪ, ಸಂಜೆ 6.30ಕ್ಕೆ.

■ **ಹೆಬ್ಬಾರ್ ಶ್ರೀ ವೈಷ್ಣವ ಸಭಾ ; ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ:** ತಿರುಪ್ಪಾವೈ ಪ್ರವಚನ, ಮಹಾರಾಣಿ ಕಾಲೇಜು (ಬೆಂಗಳೂರ) ನಿವೃತ್ತ ಸಂಸ್ಕೃತ ಪ್ರಾಧ್ಯಾಪಕ ಕೆ.ಎಸ್.ಶ್ರೀಧರನ್, ಸ್ಥಳ: ಸನಾತನೀ ಸಭಾ, ಜಯನಗರ, ಸಂಜೆ 6.15ರಿಂದ

ಹಲಗಯ್ಯನಹುಂಡಿ, ಮೈಸೂರು ತಾಲೂಕು.

■ **ಮಹಾರಾಜ ಸರ್ಕಾರಿ ಪದವಿ ಪೂರ್ವ ಕಾಲೇಜು, ರಾಷ್ಟ್ರೀಯ ಸೇವಾ ಯೋಜನೆ:** ವಾರ್ಷಿಕ ವಿಶೇಷ ಶಿಬಿರ 2024–25, ಧ್ವಜಾರೋಹಣ: ಮುಖ್ಯಮಂತ್ರಿ ಸಿದ್ದರಾಮಯ್ಯ, ಉದ್ಘಾಟನೆ: ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ, ಅಧ್ಯಕ್ಷತೆ: ಶಾಸಕ ಕೆ.ಹರೀಶ್‌ಗೌಡ, ಸ್ಥಳ: ಹಲಗಯ್ಯನಹುಂಡಿ, ಮೈಸೂರು ತಾಲೂಕು. ಮಧ್ಯಾಹ್ನ 3 ಗಂಟೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ, ಪ್ರೊ.ಹೆಚ್.ಎಂ.ಕಲಾಶ್ರೀ, 6.15–ಗೀತಾರಾಧನ, 6.35 ಮತ್ತು ಸಂಜೆ 6.10: ಅಂಚೆ–ಅಂಕನ–ಆಕಾಶವಾಣಿ ಅಂಕಣ, ಪ್ರಸ್ತುತಿ: ಡಾ.ಅಮ್ಮಸಂದ್ರ ಸುರೇಶ ಹಾಗೂ ಎಂ.ಎನ್. ವಿಜಯಲಕ್ಷ್ಮಿ, ಪ್ರಾಯೋಜಕರು: ಭಾರತೀಯ ಅಂಚೆ, ಮೈಸೂರು ವಿಭಾಗ, 6.40–ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಎಂ.ಎಸ್.ಲಕ್ಷ್ಮೀಶ, ಶಾಂತಲಾ ವಟ್ಟಂ, ವ್ಯಾಖ್ಯಾನ–ಡಾ.ಮ.ರಾಮಕೃಷ್ಣ, 6.50–ರೈತರಿಗೆ ಸಲಹೆ, 7.15–ಭರವಸೆ ಹೊನಲು, ವೈದ್ಯರ ಕಿವಿಮಾತು–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಟ್ರಸ್ಟ್‌ವೆಲ್ ಆಸ್ಪತ್ರೆ, ಜೆ.ಸಿ.ರಸ್ತೆ, ಬೆಂಗಳೂರು, 8.30–ಕನ್ನಡ ಚಿತ್ರಗೀತೆಗಳು, 9.00–ಕ್ಯಾನ್ಸರ್ ಕುರಿತ ಮಿಥ್ಯೆಗಳು–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು –ಭಾರತೀಯ ಕ್ಯಾನ್ಸರ್ ಸೊಸೈಟಿ, ಕರ್ನಾಟಕ ಚಾಪ್ಟರ್, 9.10–ನೆನಪಿನಂಗಳ (ಧ್ವನಿ ಭಂಡಾರದಿಂದ): ಹಿರಿಯ ರಂಗಕರ್ಮಿ ಹಾಗೂ ವಾಕ್ ಶ್ರವಣ ಶಿಕ್ಷಣ ತಜ್ಞ ಡಾ.ನ.ರತ್ನ ಅವರೊಂದಿಗೆ ಹೆಚ್.ಎಸ್.ಉಮೇಶ್ ಅವರು ನಡೆಸಿದ್ದ ಸಂವಾದದ ಮೊದಲ ಭಾಗ, 10.05–ವಿಜಯ ದಿವಸ್ ಕುರಿತ ಕಾರ್ಯಕ್ರಮ, ವಿಜಯ್ ದಿವಸದ ಸಂದರ್ಭದಲ್ಲಿ ಬರಹಗಾರರು ಹಾಗೂ ಭಾರತೀಯ ವಾಯುಪಡೆಯಲ್ಲಿ ಸೇವೆ ಸಲ್ಲಿಸಿರುವ ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕು ಮೂರ್ನಾಡುವಿನ ಕಿಗ್ಗಾಲು ಎಸ್.ಗಿರೀಶ್ ಅವರೊಂದಿಗೆ ಸಂದರ್ಶನ, ಸಂದರ್ಶಕರು: ಪಿ.ಎಂ.ಜಗದೀಶ್, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ–ಗೇಮ್ ಶೋ, ಪ್ರಸ್ತುತಿ: ದಿಗ್ವಿಜಯ್ ಬಿ, **ಮಧ್ಯಾಹ್ನ:** 12.05–ವನಿತಾ ವಿಹಾರ, 12.35–ದೇವರನಾಮ, ಡಾ.ಪಿ.ಎಸ್.ಮುರಳೀಧರ್, 12.45–ನಮ್ಮ ಆರೋಗ್ಯ: 'ಧೂಮಪಾನ–ಆರೋಗ್ಯಕ್ಕೆ ಹಾನಿಕರ' ಕುರಿತು ಶ್ವಾಸಕೋಶ ತಜ್ಞರಾದ ಡಾ.ಆರ್.ಲಕ್ಷ್ಮೀನರಸಿಂಹನ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ : ಬೇಂದ್ರೆ ಮಂಜುನಾಥ್, 1.00–ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳ ಸರಣಿ ಪ್ರಧಾನಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆಯ ಬಗ್ಗೆ ಪತ್ರಕರ್ತ ರವಿಕುಮಾರ್ ಪಿ.ಕೆ.ಅವರೊಂದಿಗೆ ಸಂದರ್ಶನ., ಸಂದರ್ಶಕರು: ಜಾಂಪಣ್ಣ ಆಶೀಹಾಳ್, 1.20–ಭಾವಗೀತೆಗಳು–ಶರಧಿ ಪಾಟೀಲ್, 2.40–ಚಿತ್ರಗೀತೆಗಳು, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ವಿದ್ವಾನ್ ಕಾರೈಕುಡಿ. ಆರ್.ಮಣಿ ನಿರ್ದೇಶನದ ವಾದ್ಯವೃಂದ, 4.00–ಮಹಿಳಾರಂಗ–"ನಾನು ನನ್ನ ಕಂಪನಿ" ಗಾಣದ ಎಣ್ಣೆಯನ್ನು ಬಳಸಿ ನೈಸರ್ಗಿಕವಾಗಿ ಸಾಬೂನು ತಯಾರಿಸುವ ಉದ್ಯಮಿ ಕರೀಷ್ಮಾ ಅವರೊಂದಿಗೆ ಮಾತುಕತೆ. ಪ್ರಸ್ತುತಿ: ಸಹನ, 4.45–ಹಿಂದಿ ಪಾಠ–ಕಿಶೋರ್ ಎಂ.ಕಾಕಡೆ, 6.50–ಕೃಷಿರಂಗ: ರೈತ ಉತ್ಪಾದಕ ಕಂಪನಿಗಳು ಖರೀದಿದಾರರು ಹಾಗೂ ಗ್ರಾಹಕರ ಸಹಯೋಗ ಈ ಕುರಿತು ಮಾತನಾಡುತ್ತಾರೆ ಕೊಡಗು ವಿಶ್ವವಿದ್ಯಾನಿಲಯದ ಕುಲಪತಿ ಡಾ.ಅಶೋಕ್ ಆಲೂರು, 2. ಜನಪದ ಸಂಗೀತ–ಮೋಳೆರಾಜಣ್ಣ ಮತ್ತು ಸಂಗಡಿಗರಿಂದ ಮಂಟೇಸ್ವಾಮಿ ಕಾವ್ಯದ ಮುದ್ದಮ್ಮನ ಪ್ರಸಂಗ, 7.45–ವಿಧಾನಮಂಡಲದಲ್ಲಿ ಇಂದು, 8.00–ಸಂಸದ್ ಸಮೀಕ್ಷಾ, 8.15–ಯುವವಾಣಿ : ಮೈಸೂರು ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಎಂ.ಎ ಕನ್ನಡ ವಿಷಯದಲ್ಲಿ ಪ್ರಥಮ rankನೊಂದಿಗೆ 18 ಚಿನ್ನದ ಪದಕ ಗಳಿಸಿದ ಹುಣಸೂರು ತಾಲೂಕು ಕಲ್ಕುಣಿಕೆಯ ಶ್ರೀವಿದ್ಯಾ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಡಾ.ಮೈಸೂರು ಉಮೇಶ್, 9.30–ಕರ್ನಾಟಕ ಶಾಸ್ತ್ರೀಯ ಸಂಗೀತ: ಬಿ.ವಿ.ದುರ್ಗಾಭವಾನಿ–ಹಾಡುಗಾರಿಕೆ, 10.00–ಸಂಸತ್ತಿನ ಪ್ರಶ್ನೋತ್ತರ ಅವಧಿಯ ಕಲಾಪಗಳ ಧ್ವನಿಮುದ್ರಣ.

ಮೈಸೂರು ಮಿತ್ರ

ಸೋಮವಾರ 16 ಡಿಸೆಂಬರ್ 2024

ವಿಟಿಯು ಕುಲಪತಿ ಡಾ.ಎಸ್.ವಿದ್ಯಾಶಂಕರ್ ಅವರಿಗೆ ಆತ್ಮೀಯ ಅಭಿನಂದನೆ



ಮೈಸೂರಿನ ಮಾನಸ ಗಂಗೋತ್ರಿಯ ಸೆನೆಟ್ ಭವನದಲ್ಲಿ ಭಾನುವಾರ ವಿಟಿಯು ಕುಲಪತಿ ಡಾ.ಎಸ್.ವಿದ್ಯಾಶಂಕರ್ ಅವರನ್ನು ಅವರ ಪತ್ನಿ ಜ್ಯೋತಿ ವಿದ್ಯಾಶಂಕರ್ ಜೊತೆಯಲ್ಲಿ ಅಭಿನಂದಿಸಲಾಯಿತು. ಆದಿಚುಂಚನಗಿರಿ ಮಠದ ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಮಾಜಿ ಡಿಸಿಎಂ ಡಾ.ಸಿ.ಎನ್.ಅಶ್ವಥನಾರಾಯಣ್, ಎಂಎಲ್‌ಸಿ ಎ.ಹೆಚ್.ವಿಶ್ವನಾಥ್ ಇತರರು ಚಿತ್ರದಲ್ಲಿದ್ದಾರೆ.

ಮೈಸೂರು,ಡಿ.15(ಪಿಎಂ)– ಲಯನ್ಸ್ ಇಂಟರ್‌ನ್ಯಾಷನಲ್ ಮಲ್ಟಿಪಲ್ ಡಿಸ್ಟ್ರಿಕ್ಟ್ 317 (ಕರ್ನಾಟಕ, ಗೋವಾ ಮತ್ತು ಭಾಗಶಃ ಆಂಧ್ರಪ್ರದೇಶ ರಾಜ್ಯಗಳನ್ನು ಒಳಗೊಂಡಂತೆ), ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಹಾಗೂ ಡಾ.ಎಸ್.ವಿದ್ಯಾಶಂಕರ್ ಅಭಿಮಾನಿ ಬಳಗದ ಸಂಯುಕ್ತಾಶ್ರಯದಲ್ಲಿ ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ (ವಿಟಿಯು) ಕುಲಪತಿ ಡಾ.ಎಸ್.ವಿದ್ಯಾಶಂಕರ್ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು.

ಮೈಸೂರಿನ ಮಾನಸ ಗಂಗೋತ್ರಿಯ ಸೆನೆಟ್ ಭವನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಅದ್ಧೂರಿ ಸಮಾರಂಭದಲ್ಲಿ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರ ಸಾನ್ನಿಧ್ಯದಲ್ಲಿ ಡಾ.ಎಸ್.ವಿದ್ಯಾಶಂಕರ್ ಅವರನ್ನು ಅವರ ಪತ್ನಿ ಜ್ಯೋತಿ ವಿದ್ಯಾಶಂಕರ್ ಜೊತೆಯಲ್ಲಿ ಅಭಿನಂದಿಸಲಾಯಿತು. ಇದೇ ವೇಳೆ 9 ಮಂದಿ ಪ್ರತಿಭಾನ್ವಿತ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ತಲಾ ಒಂದು ಲ್ಯಾಪ್‌ಟಾಪ್ ನೀಡುವುದರೊಂದಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಸಮಾರಂಭ ಉದ್ಘಾಟಿಸಿದ ಮಾಜಿ ಉಪಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವಥನಾರಾಯಣ್ ಮಾತನಾಡಿ, ಡಾ.ಎಸ್.ವಿದ್ಯಾಶಂಕರ್ ಕಾಲೇಜು ಪ್ರಾಧ್ಯಾಪಕರಾಗಿದ್ದಾಗಿನಿಂದಲೂ ನನಗೆ ಪರಿಚಿತರು. ನಾನು ಉನ್ನತ ಶಿಕ್ಷಣ ಸಚಿವನಾಗುವ ಮುಂಚೆಯೇ ಮುಕ್ತ ವಿವಿ ಕುಲಪತಿಯಾಗಿ ಒಳ್ಳೆಯ ಕೆಲಸ ಕಾರ್ಯ ಮಾಡುತ್ತಿದ್ದರು. ಆ ಮೂಲಕ ಎಲ್ಲರ ವಿಶ್ವಾಸಗಳಿಸಿದ್ದರು. ಉತ್ತಮ ಆಡಳಿತ ಕೊಡುವ ಮೂಲಕ ಮಾನ್ಯತೆ ಕಳೆದುಕೊಂಡಿದ್ದ ಮುಕ್ತ ವಿವಿಯನ್ನು ಎಲ್ಲಾ ಸಂಕಷ್ಟದಿಂದ ಮುಕ್ತಗೊಳಿಸಿದರು. ಇಂದು ಮುಕ್ತ ವಿವಿ ದೊಡ್ಡ ಶಕ್ತಿಯಾಗಿ ಬೆಳೆಯಲು ಅವರ ಕೊಡುಗೆ ಅಪಾರ ಎಂದು ತಿಳಿಸಿದರು.

ತಮ್ಮ ಪ್ರತಿಭೆಯಿಂದ ಅವರೀಗ ವಿಟಿಯು ಕುಲಪತಿಯಾಗಿದ್ದಾರೆ. ಅಗತ್ಯವಿರುವ ಎಲ್ಲಾ ಸುಧಾರಣೆಗಳನ್ನು ವಿಟಿಯುನಲ್ಲಿ ತರುತ್ತಿದ್ದಾರೆ. ವಿಟಿಯು ಕುಲಪತಿಯಾಗಿ ಒಂದು ದಿನವನ್ನು ವ್ಯರ್ಥ ಮಾಡದೇ ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ. ಜವಾಬ್ದಾರಿ ವಹಿಸಿಕೊಂಡ ಕೂಡಲೇ ಎನ್‌ಇಪಿ 2020ರ ಅನುಷ್ಠಾನಕ್ಕೆ ಕ್ರಮ ವಹಿಸಿ, ಅಂತರ್‌ಶಿಸ್ತೀಯ, ಬಹುಶಿಸ್ತೀಯ ವಿಷಯ ಕಲಿಕೆಗೆ ಅವಕಾಶ ಕಲ್ಪಿಸಿದರು ಎಂದರು.

ನಮ್ಮ ಸರ್ಕಾರಿ ಶಾಲೆಗಳಲ್ಲಿ ನರ್ಸರಿ ಶಿಕ್ಷಣ ಎಂಬುದೇ ಇಲ್ಲ. ಈಗ ಪ್ರಾಯೋಗಿಕವಾಗಿ 100ರಿಂದ 200 ಶಾಲೆಗಳಲ್ಲಿ ನರ್ಸರಿ ಪ್ರಾರಂಭ ಮಾಡಿದ್ದಾರೆ. ಆದರೆ ಶಿಕ್ಷಕರಿಲ್ಲದೇ ಇರುವ ಶಿಕ್ಷಕರಿಂದಲೇ ಆರಂಭಿಸಲಾಗಿದೆ. ಇಂತಹ ವ್ಯವಸ್ಥೆಯಿಂದ ಸರಿಯಾದ ಶಿಕ್ಷಣ ಕೊಡಲು ಸಾಧ್ಯವಿಲ್ಲ. ನಿಜವಾದ ಶಕ್ತಿ ಕೇಂದ್ರಗಳೆಂದರೆ ವಿದ್ಯಾಸಂಸ್ಥೆಗಳು, ಅವುಗಳಿಗೆ ಉತ್ತೇಜನ ಕೊಡಬೇಕು. ನಮ್ಮ ಶಿಕ್ಷಣ ವ್ಯವಸ್ಥೆಗೆ ಆದ್ಯತೆ ಕೊಟ್ಟು ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬೇಕಿದೆ ಎಂದರು.

ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಮಾತನಾಡಿ, ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರು ಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಗೊತ್ತಿರುವಂತಹ ಒಬ್ಬ ಸಾಧಕರು. ಸಂಸ್ಕೃತಿ, ಸಂಸ್ಕಾರ ಮತ್ತು ದೈವತ್ವ ಎಲ್ಲವೂ ಅವರಲ್ಲಿದೆ. ಅಂತಹ ಸ್ವಾಮೀಜಿಯವರು ಸಾನ್ನಿಧ್ಯ ವಹಿಸಿರುವುದು ಸಂತಸ ತಂದಿದೆ ಎಂದರು.

ನಮ್ಮ ಜನತಂತ್ರ ವ್ಯವಸ್ಥೆಯಲ್ಲಿ ಜನಾದೇಶ ಪಡೆದ ಸರ್ಕಾರಗಳು, ಅದರ ಅಧೀನದ ಸಂಸ್ಥೆಗಳು, ಇಲಾಖೆಗಳು ಸಕಾಲದಲ್ಲಿ ಸೂಕ್ತ ತೀರ್ಮಾನ ಕೈಗೊಳ್ಳುವುದು ವಿರಳ. ಇದರಿಂದ ಜನತೆ ಸಮಸ್ಯೆ ಎದುರಿಸಬೇಕಾಗುತ್ತದೆ. ಹಾಗಾಗಿ ಸಕಾಲದಲ್ಲಿ ಸೂಕ್ತ ತೀರ್ಮಾನ ಕೈಗೊಳ್ಳುವುದು ಅತ್ಯಂತ ಮುಖ್ಯ. ನಾನು ಕೂಡ ಮುಕ್ತ ವಿವಿಯಲ್ಲಿ ಬೋರ್ಡ್ ಆಫ್ ಮೆಂಬರ್ ಇದ್ದೆ. ಆಗ ವಿದ್ಯಾಶಂಕರ್ ಅವರ ಕಾರ್ಯವೈಖರಿಯನ್ನು ಹತ್ತಿರದಿಂದ ಕಂಡಿದ್ದು, ಅವರು ತ್ವರಿತವಾಗಿ ಸೂಕ್ತ ತೀರ್ಮಾನ ಕೈಗೊಳ್ಳುತ್ತಿದ್ದರು. ಆ ಮೂಲಕ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡುತ್ತಿದ್ದರು. ಸಕಾಲದಲ್ಲಿ ಪರೀಕ್ಷೆಗಳನ್ನು ನಡೆಸುತ್ತಿದ್ದರು. ಈಗಂತೂ ಸರ್ಕಾರ ಒಂದು ಪರೀಕ್ಷೆ ಸರಿಯಾಗಿ ನಡೆಸುತ್ತಿಲ್ಲ ಎಂದು ದೂರಿದರು.

ಮೈಸೂರು–ಕೊಡಗು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಲಯನ್ಸ್ ಸಂಘಟನೆಯ ಮಾಜಿ ಜಿಲ್ಲಾ ರಾಜ್ಯಪಾಲ ಹಾಗೂ ಮಲ್ಟಿಪಲ್ ಗ್ಯಾಟ್ ಸಂಯೋಜಕ ಕೆ.ದೇವೇಗೌಡ, ಲಯನ್ಸ್ ಇಂಟರ್‌ನ್ಯಾಷನಲ್ ಮಲ್ಟಿಪಲ್ ಡಿಸ್ಟ್ರಿಕ್ಟ್ 317ರ ಅಧ್ಯಕ್ಷ ಡಾ.ಎನ್.ಕೃಷ್ಣೇಗೌಡ, ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಅಧ್ಯಕ್ಷ ಡಿ.ರವಿಕುಮಾರ್ ಮತ್ತಿತರರು ಹಾಜರಿದ್ದರು.

ಸಿದ್ದರಾಮಯ್ಯ ಸರ್ಕಾರದಿಂದ ಎನ್‌ಇಪಿ ತಿರಸ್ಕಾರ ಸರಿಯಲ್ಲ ; ಎಂಎಲ್‌ಸಿ ವಿಶ್ವನಾಥ್ ಆಕ್ಷೇಪ

ಮೈಸೂರು,ಡಿ.15(ಪಿಎಂ)– ಸಿದ್ದರಾಮಯ್ಯನವರ ಸರ್ಕಾರ ಎನ್‌ಇಪಿ–2020 ಅನ್ನು ಸಂಪೂರ್ಣವಾಗಿ ತಿರಸ್ಕರಿಸಿದ್ದು, ಇದು ಸರಿಯಲ್ಲ ಎಂದು ಎಂಎಲ್‌ಸಿ ಎ.ಹೆಚ್.ವಿಶ್ವನಾಥ್ ಆಕ್ಷೇಪ ವ್ಯಕ್ತಪಡಿಸಿದರು.

ಸಮಾರಂಭದಲ್ಲಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿಯವರು ರಾಷ್ಟ್ರೀಯ ಶಿಕ್ಷಣ ನೀತಿ–2020 ಜಾರಿಗೆ ತಂದರು. ಈ ನೀತಿ ತುಂಬ ಚೆನ್ನಾಗಿದೆ. ತಮ್ಮ ಅವಧಿಯಲ್ಲಿ ಡಾ.ಸಿ.ಎನ್.ಅಶ್ವಥನಾರಾಯಣ್ ಸಹ ರಾಜ್ಯದಲ್ಲಿ ಇದರ ಅನುಷ್ಠಾನಕ್ಕೆ ಕ್ರಮ ವಹಿಸಿದ್ದರು. ಸ್ವಲ್ಪ ಆತುರವೂ ಆಯಿತು ಎಂದರು.

ಶಾಲಾ ಶಿಕ್ಷಣ ಅತ್ಯಂತ ಮುಖ್ಯ. ಎನ್‌ಇಪಿ–2020ರಿಂದ ಕಿಂಡರ್‌ಗಾರ್ಟನ್‌ನಿಂದ ಉತ್ತಮ ಶಿಕ್ಷಣ ದೊರೆಯಲು ಸಾಧ್ಯವಿದೆ. ಕಾನ್ವೆಂಟ್‌ಗಳಲ್ಲಿ ಎಲ್‌ಕೆಜಿ, ಯುಕೆಜಿ ಪ್ರವೇಶಾತಿಗೆ ಲಕ್ಷಾಂತರ ಶುಲ್ಕ ಪಾವತಿ ಮಾಡುವ ಸನ್ನಿವೇಶವಿದೆ. ಹಾಗಾದರೆ ಉಳ್ಳವರಿಗೆ ಮಾತ್ರವೇ ದೇಶದಲ್ಲಿ ಶಿಕ್ಷಣ ದೊರೆಯಬೇಕೇ? ಇಂತಹ ಸನ್ನಿವೇಶ ತಪ್ಪಿಸಲು ಮೋದಿ ಸರ್ಕಾರ ಆಮೂಲಾಗ್ರವಾಗಿ ಬದಲಾವಣೆ ಮಾಡಿ, ಎನ್‌ಇಪಿ–2020 ಅನ್ನು ಜಾರಿಗೊಳಿಸಿತು. ಆದರೆ ಕರ್ನಾಟಕದಲ್ಲಿ ಎನ್‌ಇಪಿ–2020 ಅನ್ನು ರಾಜ್ಯ ಸರ್ಕಾರ ತಿರಸ್ಕರಿಸಿತು ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಅರ್ಜಿ ಸಲ್ಲಿಸುವ ಅವಧಿ ವಿಸ್ತರಣೆ

ಮೈಸೂರು: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ (ವೃತ್ತಿಪರ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸಿನ ವಿದ್ಯಾರ್ಥಿಗಳಿಗೆ ಮಾತ್ರ) ಪ್ರವೇಶಕ್ಕೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಅವಧಿಯನ್ನು ವಿಸ್ತರಿಸಲಾಗಿದೆ. ಪ್ರವರ್ಗ–1, ಎಸ್.ಸಿ. ಮತ್ತು ಎಸ್.ಟಿ. ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ಆದಾಯ ರೂ. 2.50 ಲಕ್ಷ ಹಾಗೂ ಪ್ರವರ್ಗ–2ಎ, 2ಬಿ, 3ಎ, 3ಬಿ, ಇತರೆ ಹಿಂದುಳಿದ ವರ್ಗ ಹಾಗೂ ಇತರೆ ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ಆದಾಯ ರೂ. 1.00 ಲಕ್ಷ ಇರಬೇಕು.

ಆಸಕ್ತ ವಿದ್ಯಾರ್ಥಿಗಳು https://shp.karnataka.gov.in/bcwd ವೆಬ್‌ಸೈಟ್ ಮೂಲಕ ಡಿಸೆಂಬರ್ 20ರೊಳಗೆ ಅರ್ಜಿಯನ್ನು ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ bcwdhelpline@ gmail.com ಇ–ಮೇಲ್ ಮುಖಾಂತರ ಅಥವಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ/ತಾಲೂಕು ಅಧಿಕಾರಿಗಳನ್ನು ಅಗತ್ಯ ದಾಖಲೆ ಗಳೊಂದಿಗೆ ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗಾಗಿ ಸಹಾಯ ವಾಣಿ ಸಂ:8050770004 ಮತ್ತು 8050770005 ಅನ್ನು ಸಂಪರ್ಕಿಸಬಹುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷರಾಗಿ ಎಂ.ನರಸಿಂಹಲು ಆಯ್ಕೆ



ಬೆಂಗಳೂರು, ಡಿ.15– ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ (ಕೆಎಫ್‌ಸಿಸಿ) ಅಧ್ಯಕ್ಷರಾಗಿ ವೈಭವಿ ಚಿತ್ರಮಂದಿರದ ಮಾಲೀಕ ಎಂ.ನರಸಿಂಹಲು ಆಯ್ಕೆಯಾಗಿದ್ದಾರೆ.

ಬೆಂಗಳೂರಿನ ಗುರುರಾಜ ಕಲ್ಯಾಣ ಮಂಟಪದಲ್ಲಿ ಶನಿವಾರ ನಡೆದ ಚುನಾವಣೆಯಲ್ಲಿ ನರಸಿಂಹಲು ಜಯಭೇರಿ ಬಾರಿಸಿದ್ದು, ನಿರ್ಮಾಪಕರ ವಲಯದಿಂದ ಸಫೈರ್ ವೆಂಕಟೇಶ್ ಉಪಾಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ನಿರ್ಮಾಪಕ ಕ್ಷೇತ್ರದ ಕಾರ್ಯದರ್ಶಿ ಸ್ಥಾನಕ್ಕೆ ಪ್ರವೀಣ್ ಕುಮಾರ್, ವಿತರಕ ವಲಯದ ಉಪಾಧ್ಯಕ್ಷರಾಗಿ ಹೆಚ್.ಸಿ.ಶ್ರೀನಿವಾಸ್, ಗೌರವ ಕಾರ್ಯದರ್ಶಿಯಾಗಿ ಕೆಸಿಎನ್ ಕುಮಾರ್ ಆಯ್ಕೆಯಾಗಿದ್ದಾರೆ. ಪ್ರದರ್ಶಕ ವಲಯ ಉಪಾಧ್ಯಕ್ಷ ಸ್ಥಾನಕ್ಕೆ ರಂಗಪ್ಪ, ಪ್ರದರ್ಶಕ ವಲಯ ಕಾರ್ಯದರ್ಶಿ ಸ್ಥಾನಕ್ಕೆ ಕುಶಾಲ್.ಎಲ್ ಮತ್ತು ಖಜಾಂಚಿ ಸ್ಥಾನಕ್ಕೆ ಚಿಂಗಾರಿ ಮಹದೇವ್ ಆಯ್ಕೆಯಾಗಿದ್ದಾರೆ.

ಇದೇ ಮೊದಲ ಬಾರಿ ಇವಿಎಂನಲ್ಲಿ ಮತ ಚಲಾವಣೆ ನಡೆದಿದ್ದು ವಿಶೇಷ. ಈ ಬಾರಿಯ ವಾಣಿಜ್ಯ ಮಂಡಳಿ ಅಧ್ಯಕ್ಷ ಸ್ಥಾನಕ್ಕೆ ಪ್ರದರ್ಶಕರ ವಲಯ ಮೀಸಲಾಗಿತ್ತು. ಅದರಂತೆ, ನಿರ್ಮಾಪಕ, ವಿತರಕ ಮತ್ತು ಪ್ರದರ್ಶಕ ವಲಯಗಳಿಂದ ಚಲನಚಿತ್ರ ವಾಣಿಜ್ಯ ಮಂಡಳಿಯ ವಿವಿಧ ಸ್ಥಾನಗಳಿಗೆ ಒಟ್ಟು 104 ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದರು. ಆ ಪೈಕಿ ತುರುಸಿನ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ನರಸಿಂಹಲು ಮತ್ತು ವಜ್ರೇಶ್ವರಿ ಚಿತ್ರಮಂದಿರದ ಮಾಲೀಕ ಆರ್.ಸುಂದರ್‌ರಾಜ್ ನಡುವಿನ ಹಣಾಹಣಿಯಲ್ಲಿ ಅಂತಿಮವಾಗಿ ನರಸಿಂಹಲು ವಿಜೇತರಾದರು. ಈ ಮೂಲಕ ನಿರ್ಮಾಪಕ ಸಾ.ರಾ.ಗೋವಿಂದು ಬೆಂಬಲಿತ ಬಣ ಮೇಲುಗೈ ಸಾಧಿಸಿದರೆ ಬಾ.ಮಾ.ಹರೀಶ್ ಬಣಕ್ಕೆ ಹಿನ್ನಡೆಯಾಯಿತು.

ಮೈಸೂರಿನ ಸಿದ್ದೇಗೌಡ ಆಯ್ಕೆ



ಕೆಎಫ್‌ಸಿಸಿಯ ನಿರ್ಮಾಪಕ ವಲಯ ಸಮಿತಿಯ 10 ಸದಸ್ಯ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಮೈಸೂರಿನ ಜೀವಿತ ಕ್ರಿಯೇಷನ್ಸ್‌ನ ಬಿ.ಸಿದ್ದೇಗೌಡ ಆಯ್ಕೆಯಾಗಿದ್ದಾರೆ. ಇವರೊಂದಿಗೆ ವಿವಿಧ ಚಿತ್ರ ನಿರ್ಮಾಣ ಸಂಸ್ಥೆಗಳ ಕೆ.ಗಿರೀಶ್ ರೆಡ್ಡಿ, ಜೆ.ಚಂದ್ರಕಲಾ, ಉದಯ್ ಕೆ.ಮೆಹ್ತಾ, ಎಸ್.ಆರ್.ಪ್ರಮೋದ್, ಯು.ಎಸ್.ನಾಗೇಶ್‌ಕುಮಾರ್, ಜೆ.ಜೆ.ಶ್ರೀನಿವಾಸ್, ಎಸ್.ಡಿ.ಸುರೇಶ್, ಡಿ.ಸಿ.ಪ್ರಸನ್ನಕುಮಾರ್, ವೆಂಕಟಸುಬ್ಬು ಆಯ್ಕೆಯಾಗಿದ್ದಾರೆ. ಸಿದ್ದೇಗೌಡರು 'ದಕ್ಷಯಜ್ಞ', 'ತರ್ಲೆ ವಿಲೇಜ್' ಸೇರಿದಂತೆ ಹಲವು ಸಿನಿಮಾಗಳನ್ನು ನಿರ್ದೇಶನ ಮಾಡಿದ್ದಾರೆ. ಮೈಸೂರಿನಲ್ಲಿ ಚಿತ್ರನಗರಿ ನಿರ್ಮಾಣ, ದಸರಾ ಚಲನಚಿತ್ರೋತ್ಸವ, ಪೈರಸಿ ತಡೆ ಸೇರಿದಂತೆ ಚಿತ್ರರಂಗಕ್ಕೆ ಸಂಬಂಧಿಸಿದ ಎಲ್ಲಾ ಕಾರ್ಯಗಳಲ್ಲೂ ಸಕ್ರಿಯವಾಗಿ, ವಿಶ್ವಾಸ ಉಳಿಸಿಕೊಳ್ಳುವುದಾಗಿ ಅವರು ತಿಳಿಸಿದ್ದಾರೆ.

ಗೊಮ್ಮಟಗಿರಿಯಲ್ಲಿ ಮೂರು ದಿನಗಳ ಬಾಹುಬಲಿಯ ಮಹಾಮಸ್ತಕಾಭಿಷೇಕ ಮಹೋತ್ಸವ ಸಂಪನ್ನ



ಮೈಸೂರು, ಡಿ. 15(ಆರ್‌ಕೆ)– ಮೈಸೂರು ತಾಲೂಕು, ಗೊಮ್ಮಟಗಿರಿಯಲ್ಲಿ ನಡೆಯುತ್ತಿದ್ದ ಮೂರು ದಿನಗಳ ಭಗವಾನ್ ಬಾಹುಬಲಿ ಗೊಮ್ಮಟೇಶ್ವರ ಸ್ವಾಮಿಯ 75ನೇ ಮಹಾಮಸ್ತಕಾಭಿಷೇಕ ಮಹೋತ್ಸವ ಸಂಪನ್ನಗೊಂಡಿದೆ.


ಭಗವಾನ್ ಬಾಹುಬಲಿಯ ಪ್ರತಿಮೆಗೆ ವಿಶೇಷ ಪೂಜಾ ವಿಧಿ–ವಿಧಾನಗಳನ್ನು ಪೂರೈಸಿ ಕ್ಷೀರ, ಗಂಧ ಕಷಾಯ, ಎಳನೀರು, ರಕ್ತಚಂದನಗಳ ಮಂಗಳ ದ್ರವಗಳಿಂದ ಮಹಾಮಸ್ತಕಾಭಿಷೇಕ ಕೈಂಕರ್ಯವು ಮೂರನೇ ದಿನವಾದ ಇಂದು ಭಕ್ತಿ–ಭಾವಗಳಿಂದ ಜರುಗಿತು.

ಕನಕಗಿರಿಯ ಶ್ರೀ ಭುವನಕೀರ್ತಿ ಸ್ವಾಮೀಜಿ ಹಾಗೂ ಹೊಂಬುಜದ ಶ್ರೀ ದೇವೇಂದ್ರಕೀರ್ತಿ ಸ್ವಾಮಿಗಳ ಮಾರ್ಗದರ್ಶನದೊಂದಿಗೆ ವಿವಿಧ ಪೂಜಾ ವಿಧಿವಿಧಾನಗಳೊಂದಿಗೆ ಭಗವಾನ್ ಬಾಹುಬಲಿಗೆ ಮಹಾಮಸ್ತಕಾಭಿಷೇಕ ನಡೆಸಲಾಯಿತು. ಈ ಸಂದರ್ಭ ಧಾರ್ಮಿಕ ಕೈಂಕರ್ಯದಲ್ಲಿ ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೆ ಕಾರಣರಾದ ಎಲ್ಲಾ ದಾನಿಗಳು, ಕಾರ್ಯಕರ್ತರು, ಭಕ್ತಾದಿಗಳು ಹಾಗೂ ಸಮುದಾಯದ ಪ್ರಮುಖರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.

ಗೊಮ್ಮಟಗಿರಿ ಸಮಿತಿ ಅಧ್ಯಕ್ಷರಾದ ಶ್ರೀ ಮನ್ಮತರಾಜ ಅವರು ಸಮವಸರಣ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿದರು. ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ ಮತ್ತು ಬೆಂಗಳೂರು ಜಿಲ್ಲೆಗಳಿಂದ ಭಕ್ತರು ಹಾಗೂ ಜೈನ ಸಮುದಾಯದವರು ಈ ಸಂದರ್ಭ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಪಾಲ್ಗೊಂಡ ಭಕ್ತಾದಿಗಳಿಗೆ ಶ್ರೀ ಕ್ಷೇತ್ರದಲ್ಲಿ ಭೋಜನ ಮತ್ತು ಫಲಾಹಾರದ ವ್ಯವಸ್ಥೆ ಮಾಡಲಾಗಿತ್ತು.

ಪಾನಿಪುರಿ, ಗೋಬಿಮಂಚೂರಿ ಮಾರುವವರೇ ನಮಗಿಂತ ಸುಖವಾಗಿದ್ದಾರೆ

● ಸರ್ಕಾರಿ ನೌಕರಿ ಬಗ್ಗೆ ಹೊಳೆನರಸೀಪುರ ತಹಸೀಲ್ದಾರ್ ಬೇಸರ ● ನಮಗೆ ಅವೈಜ್ಞಾನಿಕವಾಗಿ ಟಾರ್ಗೆಟ್ ಕೊಡ್ತಾ ಇದ್ದಾರೆ ● ಇಪ್ಪತ್ತೈದು ಕೆಲಸ ಕೊಟ್ಟು ಕಡಿಮೆ ಅವಧಿ ನೀಡಿ ಮಾನಸಿಕ ಕಿರುಕುಳ ನೀಡುತ್ತಿದ್ದಾರೆ ● ಎಷ್ಟೋ ನೌಕರರು ತಪ್ಪು ಮಾಡದೇ ಬಲಿಪಶು ಆಗುತ್ತಿದ್ದಾರೆ ● ಮೊದಲು ಶಿಕ್ಷಕ ವೃತ್ತಿಗೆ ಭಾರಿ ಗೌರವ ಇತ್ತು, ಈಗ ಶಿಕ್ಷಕ ವೃತ್ತಿ ಮಾಡಲು ಕಷ್ಟ



ಹಾಸನ, ಡಿ.15– ಪಾನಿಪುರಿ, ಗೋಬಿಮಂಚೂರಿ ಅಂಗಡಿ ಇಟ್ಟುಕೊಂಡಿರುವವರು ನಮಗಿಂತ ಸುಖವಾಗಿ ಜೀವನ ಮಾಡ್ತಾರೆ ಎಂದು ಹಾಸನದ ಹೊಳೆನರಸೀಪುರ ತಹಸೀಲ್ದಾರ್ ಕೆ.ಕೆ.ಕೃಷ್ಣಮೂರ್ತಿ ಬೇಸರ ವ್ಯಕ್ತಪಡಿಸಿದ್ದಾರೆ.

ತಾಲೂಕು ಸರ್ಕಾರಿ ನೌಕರರ ಸಂಘದ ನೂತನ ಸದಸ್ಯರ ಪದಗ್ರಹಣ ಸಮಾರಂಭದಲ್ಲಿ ತಹಸೀಲ್ದಾರ್ ಕೆ.ಕೆ.ಕೃಷ್ಣಮೂರ್ತಿ ತಮ್ಮ ಕೆಲಸದ ಒತ್ತಡಗಳ ಬಗ್ಗೆ ಹೇಳಿಕೊಂಡಿದ್ದಾರೆ.

ನಾನು ಒಬ್ಬ ತಹಸೀಲ್ದಾರ್. ಒಂದು ತಾಲೂಕಿನ ಆಡಳಿತದ ಮುಖ್ಯಸ್ಥನಾಗಿದ್ದೇನೆ. ಈಗ ನನಗೆ ಸರ್ಕಾರಿ ನೌಕರಿಯೇ ಬೇಡ ಅನ್ನುವ ಹಾಗಾಗಿದೆ. ನನ್ನ ವೈಯಕ್ತಿಕವಾಗಿ ಹೇಳುವುದಾದರೆ ಪಾನಿಪುರಿ, ಗೋಬಿಮಂಚೂರಿ ಅಂಗಡಿ ಇಟ್ಟುಕೊಂಡಿರುವವರು ನಮಗಿಂತ ಸುಖವಾಗಿ ಜೀವನ ಮಾಡ್ತಾರೆ. ಅವರಿಗೆ ಅಷ್ಟು ಸಮಾಧಾನ, ನೆಮ್ಮದಿ ಇದೆ ಎಂದು ತಿಳಿಸಿದ್ದಾರೆ.

ಪಾನಿಪುರಿ ಮಾರುವವನು ಹೆಂಡ್ತಿ ಮಕ್ಕಳ ಜೊತೆ ಕಾಲ ಕಳೆಯುತ್ತಾನೆ. ಹೆಂಡ್ತಿ, ಮಕ್ಕಳನ್ನು ಊರಿಗೆ, ಎಲ್ಲಿ ಬೇಕಾದರೂ ಕರೆದುಕೊಂಡು ಹೋಗುತ್ತಾನೆ. ದುರದೃಷ್ಟವಶಾತ್ ನಮ್ಮ ಕುಟುಂಬವನ್ನು ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ ದೇವರ ದರ್ಶನ ಮಾಡಿಸೋ ಯೋಗ್ಯತೆಯಿಲ್ಲದಾಗಿದೆ. ನಮಗೆ ಬರೀ ಒತ್ತಡ, ಒತ್ತಡ, ಒತ್ತಡ, ಒತ್ತಡ ಎಂದು ಬೇಸರ ಹೊರಹಾಕಿದ್ದಾರೆ.

ಶಾಸಕಾಂಗ ಏನು ಶಾಸನಗಳನ್ನು ಮಾಡುತ್ತದೆಯೇ ಅವುಗಳನ್ನು ಕಾರ್ಯರೂಪಕ್ಕೆ ತರುವುದು ನಮ್ಮ ಕೆಲಸ. ಎಲ್ಲಾ ಇಲಾಖೆಗಳ ಸವಲತ್ತುಗಳನ್ನು ಎಲ್ಲರಿಗೂ ತಲುಪಿಸಬೇಕು. ಇತ್ತೀಚೆಗೆ ಮೊಬೈಲ್ ಬಂದಿದೆ. ಅದರಲ್ಲಿ ನಮ್ಮ ಪ್ರೋಗ್ರೆಸ್ ವೀಕ್ಷಣೆ ಮಾಡುತ್ತಾರೆ. ಶೋಕಾಸ್ ನೋಟಿಸ್ ಕೊಡುತ್ತಾರೆ, ಒತ್ತಡ ಹೇರುತ್ತಾರೆ. ವರ್ಕ್ ಆಫ್ ಲೋಡ್ ಜಾರಿ ಮಾಡುತ್ತಾರೆ, ಖಂಡನೆ ಮಾಡುತ್ತಾರೆ. ಇಲಾಖೆ ವಿಚಾರಣೆ ನಡೆಸುತ್ತಾರೆ. ವಾಟ್ಸಪ್ ಗ್ರೂಪ್ ಮಾಡುತ್ತಾರೆ, ಸಂಜೆಯೊಳಗೆ ನಾವು ವರದಿ ಕೊಡಬೇಕು. ಎಷ್ಟು ಚಿತ್ರಹಿಂಸೆ ಆಗ್ತಾ ಇದೆ ಎಂದು ನೊಂದು ನುಡಿದಿದ್ದಾರೆ.

ಹದಿನಾಲ್ಕು ಜನ ಸಿಬ್ಬಂದಿ ಉಪಯೋಗಿಸಿಕೊಂಡು ಕೆಲಸ ಮಾಡುತ್ತಿದ್ದೀನಿ. ನಮ್ಮ ವಿಲೇಜ್ ಅಕೌಂಟೆಂಟ್ಸ್ ಅಷ್ಟು ಗೋಳು ಹುಯ್ಕೊತಾ ಇದ್ದೀನಿ. ಇದಕ್ಕೆ ಕಾರಣ ಅವೈಜ್ಞಾನಿಕವಾಗಿ ನಮಗೆ ಟಾರ್ಗೆಟ್ ಕೊಡ್ತಾ ಇದ್ದಾರೆ. ಕಾಲಾವಕಾಶ ಕೊಟ್ಟರೆ ಕೆಲಸ ಮಾಡುತ್ತೇವೆ. ಇಪ್ಪತ್ತೈದು ಕೆಲಸ ಕೊಟ್ಟು ಕಡಿಮೆ ಅವಧಿ ನೀಡಿ ಮಾನಸಿಕ ಕಿರುಕುಳ ನೀಡುತ್ತಿದ್ದಾರೆ. ಇದನ್ನು ಸಮರ್ಥವಾಗಿ ಹೇಳಲು ತಾಕತ್ ಇಲ್ಲ. ಸಮರ್ಪಕವಾಗಿ ಕೆಲಸ ಕೊಡಿ ನಾವು ಮಾಡುತ್ತೇವೆ ಎಂದು ಹೇಳುವ ತಾಕತ್ ಇಲ್ಲ. ಎಷ್ಟೋ ನೌಕರರು ತಪ್ಪು ಮಾಡದೇ ಬಲಿಪಶು ಆಗುತ್ತಿದ್ದಾರೆ ಎಂದು ತಿಳಿಸಿದ್ದಾರೆ.

ಉಗುರಷ್ಟು ಮಾಡಿದ ತಪ್ಪಿಗೆ ಕೊಡಲಿಯಷ್ಟು ಶಿಕ್ಷೆ ನೀಡಿ ಮಟಾಶ್ ಮಾಡುತ್ತಾರೆ. ಏಕಾಏಕಿ ಎಫ್‌ಐಆರ್ ಮಾಡಿ ಅವರ ಮನೆ ಹಾಳು ಮಾಡ್ತಾ ಇದ್ದಾರೆ. ಏನು ತಪ್ಪು ಮಾಡಿದ್ದಾರೆ ಎಂದು ನೋಡಲ್ಲ. ಸರ್ಕಾರಿ ನೌಕರರು ಫಾಸಿ ಆಗ್ತಾರೆ, ಅವರ ಕುಟುಂಬ ಆಘಾತಕ್ಕೆ ಒಳಗಾಗುತ್ತದೆ. ಸಮರ್ಪಕವಾದ ಕಾರಣ ಇಟ್ಟುಕೊಂಡು ಇಲಾಖಾ ವಿಚಾರಣೆ ಮಾಡಲಿ ಎಂದು ಸಲಹೆ ನೀಡಿದ್ದಾರೆ.

ಮೊದಲು ಶಿಕ್ಷಕ ವೃತ್ತಿಗೆ ಭಾರಿ ಗೌರವ ಇತ್ತು, ಈಗ ಶಿಕ್ಷಕ ವೃತ್ತಿ ಮಾಡಲು ಕಷ್ಟ, ಅದಕ್ಕೆ ಕಾರಣ ಆ ಮೊಟ್ಟೆ, ನನ್ನ ಹೆಂಡ್ತಿ, ನಾದಿನಿ, ಕೋಬ್ರದರ್ ಕೂಡ ಶಿಕ್ಷಕ. ಐದು ರೂಪಾಯಿ ಸ್ಪಾನ್ಸರ್ ಮೊಟ್ಟೆಗೆ ಏಳು ರೂಪಾಯಿ ಆದರೂ ಟೀಚರ್ ಕೊಡಬೇಕು. ಮೊಟ್ಟೆ ಸೈಜ್ ನೋಡಬೇಕು, ಚಿಕ್ಕಿ ಬೇರೆ. ಇಷ್ಟು ಒತ್ತಡದಲ್ಲಿ ಬೇಯುತ್ತಿದ್ದೇವೆ. ಆಧುನಿಕತೆ ಜಾಸ್ತಿ ಆದಂತೆ ತಲೆ ನೋವು ಕೂಡ ಜಾಸ್ತಿ ಆಗ್ತಿದೆ. ನಾಳೆಗೆ ಕೆಲಸ ಮಾಡಬೇಕು ಅಂದರೆ ಆಗಲ್ಲ. ಸರ್ಕಾರಿ ನೌಕರರು ಹೈರಾಣಾಗಿ ಹೋಗಿದ್ದಾರೆ. ಬಿಪಿ, ಶುಗರ್, ಕಿಡ್ನಿ, ಲಿವರ್ ಎಲ್ಲಾ ಹೋಗಿದೆ. ಸಮರ್ಥವಾದ ರೀತಿಯಲ್ಲಿ ಹೇಳೋಣ, ಎದೆಯುಬ್ಬಿಸಿ ಮಾತನಾಡಬೇಕು. ಎಷ್ಟೇ ಮೇಲ್ಪಟ್ಟ ಅಧಿಕಾರಿಯಾದರೂ ಗೌರವಕೊಟ್ಟು ಎದೆಕೊಟ್ಟು ಮಾಡಬೇಕು. ನಮ್ಮ ಬೇಡಿಕೆಗಳನ್ನು ಗಮನಕ್ಕೆ ತರಬೇಕು ಎಂದು ಸರ್ಕಾರಿ ನೌಕರರಿಗೆ ಕರೆ ನೀಡಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಗುಂಡ (ಫೋನಿನಲ್ಲಿ): ಅಮ್ಮ ಸಂತಸದ ಸುದ್ದಿ ನಾವು ಈಗ ಮೂವರು!
ಅಮ್ಮ : ಹೌದಾ, ಗಂಡೋ, ಹೆಣ್ಣೋ...
ಗುಂಡ : ಗಂಡೂ ಅಲ್ಲ, ಹೆಣ್ಣು ಅಲ್ಲ,
ನಾನು ಎರಡನೇ ಮದುವೆ ಆದೆ...!

ಮೈಸೂರು ಮಿತ್ರ

ಸೋಮವಾರ, 16 ಡಿಸೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

'ಬೆಳಕಿಲ್ಲದ ದಾರಿಯಲ್ಲಿ ನಡೆಯಬಹುದು, ಆದರೆ ಕನಸುಗಳಿಲ್ಲದ ದಾರಿಯಲ್ಲಿ ನಡೆಯಲಾಗುವುದಿಲ್ಲ' –ಗಿರೀಶ್ ಕಾರ್ನಾಡ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { 'ಅಂಗೈ ತೋರಿಸಿ ಅವಲಕ್ಷಣ ಅನಿಸಿಕೊಂಡಳು'

ನಿಮ್ಮ ಪತ್ರಗಳು

■ ಕನ್ನಡದ ಅಸ್ಮಿತೆಯ ಜೊತೆಗೆ ವೈಚಾರಿಕತೆ, ವೈಜ್ಞಾನಿಕತೆ ಎತ್ತಿ ಹಿಡಿಯಲಿ

ಮಾನ್ಯರೆ,

86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮುಗಿದು 87ನೇ ಸಮ್ಮೇಳನದ ಹೊಸ್ತಿಲಲ್ಲಿ ನಿಂತಿದ್ದೇವೆ, ಈ ಬಾರಿ ಮಂಡ್ಯದಲ್ಲಿ ನಡೆಯುವ ಸಮ್ಮೇಳನದ ಅಧ್ಯಕ್ಷರ ಆಯ್ಕೆಗೂ ಮೊದಲೇ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ನೀಡಿದ ಹೇಳಿಕೆ ಗೊಂದಲಕ್ಕೆ ಕಾರಣವಾಗಿತ್ತು. ಅದು ಸೂಕ್ತ ಅಧ್ಯಕ್ಷರ ಆಯ್ಕೆಯ ಜೊತೆ ಮುಕ್ತಾಯ ಗೊಂಡಿದೆ. ಆದರೆ ಸಮ್ಮೇಳನದಲ್ಲಿ ನೀಡುವ ಊಟದ ವಿಚಾರವಾಗಿ ಮದ್ಯ ಮತ್ತು ತಂಬಾಕಿನ ಜೊತೆ ಮಾಂಸಹಾರವನ್ನು ನಿಷೇಧಿಸಿ ಹೊರಡಿಸಿದ ಆದೇಶ ಅವಿವೇಕ ತನದ ಪರಮಾವಧಿಯಾಗಿದ್ದು, ಇದು ಹೊಸದೊಂದು ಚರ್ಚೆಗೆ ನಾಂದಿ ಹಾಡಿದೆ. ಮಂಡ್ಯದಿಂದ ಮೊದಲುಗೊಂಡು ನಾಡಿನಾದ್ಯಂತ ಸಮ್ಮೇಳನದಲ್ಲಿ ಬಾಡಿಲ್ಲದ ಊಟದ ಜೊತೆ ಬಾಡೂಟವನ್ನು ನೀಡುವಂತೆ ಪ್ರಜ್ಞಾವಂತ ನಾಗರಿಕರು ಒತ್ತಾಯಿಸುತ್ತಿದ್ದಾರೆ. ಸಂಬಂಧಿಸಿದವರು ಕೂಡಲೇ ಬಾಡೂಟವನ್ನು ನೀಡುವ ಬಗ್ಗೆ ಹೇಳಿಕೆ ನೀಡಬೇಕು ಮತ್ತು ಕಡ್ಡಾಯವಾಗಿ ಬಾಡೂಟವನ್ನು ನೀಡಬೇಕಿದೆ.

ಕನ್ನಡ ಸಾಹಿತ್ಯ ಸಮ್ಮೇಳನಗಳು ಕನ್ನಡ ನಾಡಿನ ನುಡಿ, ನೆಲ, ನೀರು ಸೇರಿದಂತೆ ಕನ್ನಡಿಗರ ಬದುಕಿನ ಘನತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕನ್ನಡದ ಅಸ್ಮಿತೆಯ ಜೊತೆಗೆ ವೈಜ್ಞಾನಿಕತೆ ಮತ್ತು ವೈಚಾರಿಕತೆಯ ಕೆಲಸ ಮಾಡಬೇಕಿದೆ. ಈಗ ಊಟದ ಸರದಿ. ನಿತ್ಯ ಸಾಮಾನ್ಯವಾಗಿ ನಾವು ನೀವೆಲ್ಲರೂ ಬಳಸುವ ಆಹಾರದಲ್ಲೂ ಶ್ರೇಷ್ಠ ಕನಿಷ್ಠ, ಮೇಲು–ಕೀಳು ಎಂಬ ತಾರತಮ್ಯದ ಶ್ರೇಣೀಕೃತ ವ್ಯವಸ್ಥೆಯನ್ನು ಕಾಪಾಡಿಕೊಂಡು ಬಂದಿರುವವರು ಬಾಡೂಟವನ್ನು ವಿರೋಧಿಸುತ್ತಿರುವುದು ಅವರ ಅಸಹಿಷ್ಣುತೆ ಮತ್ತು ತಾರತಮ್ಯ ಮನಸ್ಥಿತಿಯನ್ನು ಎತ್ತಿ ತೋರಿಸುತ್ತದೆ. ಇಲ್ಲಿ ನಾವು ಗಮನಿಸ ಬೇಕಾದ ಅಂಶವೆಂದರೆ ಯಾರೂ ಬಾಡೂಟ ಮಾಡದವರನ್ನು ಬಲವಂತವಾಗಿ ಮಾಡಿ ಎನ್ನುತ್ತಿಲ್ಲ. ಕನ್ನಡದ ನುಡಿ ಜಾತ್ರೆ ನಡೆಯುತ್ತಿರುವ ಈ ಸಂದರ್ಭದಲ್ಲಿ ಕನ್ನಡವನ್ನು ಕಟ್ಟುವ ಕೆಲಸಕ್ಕೆ ಪೂರಕವಾಗಿ ಚರ್ಚೆ ನಡೆಯಬೇಕಾಗಿತ್ತು. ಅದನ್ನು ದಾರಿ ತಪ್ಪಿಸಲೋ ಏನೋ ಎಂಬಂತೆ ಅನಗತ್ಯ ಚರ್ಚೆಗೆ ಕೆಲವರು ವ್ಯವಸ್ಥಿತವಾಗಿ ದಾರಿ ಮಾಡಿಕೊಟ್ಟಿದ್ದಾರೆ. ಆ ಮೂಲಕ ಕನ್ನಡವನ್ನು ಕರ್ನಾಟಕದಲ್ಲಿ ಅನ್ನದ ನುಡಿಯಾಗಿ ಮಾಡಬೇಕಿದೆ. ಇದು ಸರ್ಕಾರ ಕನ್ನಡಿಗರಿಗೆ ನೀಡುವ ಕರ್ನಾಟಕ ಸುವರ್ಣ ಸಂಭ್ರಮದ ಕೊಡುಗೆಯಾಗಿ ಆದೇಶ ಹೊರಡಿಸಬೇಕಿದೆ.

ಈ ನಿಟ್ಟಿನಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ತನ್ನ ನಿರ್ಣಯಗಳನ್ನು ಮಂಡಿಸಲಿ ಮತ್ತು ಇದುವರೆಗಿನ ಸಮ್ಮೇಳನಗಳಲ್ಲಿ ಕೈಗೊಂಡಿರುವ ನಿರ್ಣಯಗಳ ಅನುಷ್ಠಾನದ ಬಗ್ಗೆ ಸಮ್ಮೇಳನ ಅಧ್ಯಕ್ಷರು ಕನ್ನಡ ಸಾಹಿತ್ಯ ಪರಿಷತ್ ಮತ್ತು ಸರ್ಕಾರ ನಾಡಿನ ಜನತೆಗೆ ವಾಸ್ತವಾಂಶ ತಿಳಿಸಲಿ.

–ಎಸ್.ಕೆ.ರಾಜೂಗೌಡ, ರಾಜ್ಯಾಧ್ಯಕ್ಷರು, ಕನ್ನಡ ಸಾಂಸ್ಕೃತಿಕ ಪರಿಷತ್, ಮೈಸೂರು.

■ ಪ್ರತಿಷ್ಠೆ ಬದಿಗೊತ್ತಿ ಜನಕೇಂದ್ರಿತ ಚರ್ಚೆಯಾಗಲಿ

ಮಾನ್ಯರೆ,

ರಾಜ್ಯ ವಿಧಾನಮಂಡಲದ ಚಳಿಗಾಲದ ಅಧಿವೇಶನ ಆರಂಭವಾಗಿದ್ದು, ಅಧಿವೇಶನ ಎಂದರೆ ಗದ್ದಲ–ಗಲಾಟೆ, ವೈಯಕ್ತಿಕ ಪ್ರತಿಷ್ಠೆ, ಆರೋಪ ಪ್ರತ್ಯಾರೋಪಗಳು, ಅಧಿವೇಶನದಿಂದ ಬಹಿಷ್ಕಾರಗಳು, ಕೈ ಕೈ ಮಿಲಾಯಿಸುವ ಹಂತಕ್ಕೂ ತಲುಪಿರುವ ಜನಪ್ರತಿನಿಧಿಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ವೀಕ್ಷಿಸಿ. ಎಂತಹವರನ್ನು ಆಯ್ಕೆ ಮಾಡಿ ಕಳಿಸಿದ್ದೇವೆ ಎಂದು ಜನ ಪಶ್ಚಾತ್ತಾಪಪಡುತ್ತಿದ್ದಾರೆ. ಒಂದಷ್ಟು ಜನ ಹಿಡಿಶಾಪ ಹಾಕುತ್ತಿದ್ದಾರೆ. ಇದೆಲ್ಲವೂ ಸಾಮಾನ್ಯ ಎಂಬಂತಾಗಿಬಿಟ್ಟಿದೆ. ಈ ಬಾರಿಯಾದರೂ ಜನರ ಜ್ವಲಂತ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವಂತಹ ನಿಟ್ಟಿನಲ್ಲಿ ಚರ್ಚೆಗಳನ್ನು ಸದಸ್ಯರು ಮಾಡಬೇಕಾಗಿದೆ. ಇದರ ಹೊಣೆ ಪ್ರತಿಯೊಬ್ಬ ಜನಪ್ರತಿನಿಧಿಯದ್ದು. ಪ್ರತಿದಿನವೂ ಅಧಿವೇಶನಕ್ಕೆ ಸಾರ್ವಜನಿಕರ ತೆರಿಗೆದಾರರ ಕೋಟ್ಯಂತರ ರೂ ಹಣವು ನೀರಿನಂತೆ ವೆಚ್ಚವಾಗುತ್ತಿದೆ.

ಮತ್ತೊಂದು ವಿಷಯವೇನೆಂದರೆ ಬೆಳಗಾವಿಯಲ್ಲಿ ವರ್ಷಕ್ಕೊಮ್ಮೆ ಅಧಿವೇಶನ ನಡೆಸುವುದೇ ಉತ್ತರ ಕರ್ನಾಟಕದ ಸಮಸ್ಯೆಗಳನ್ನು ಚರ್ಚಿಸುವುದಕ್ಕಾಗಿ. ಆದರೆ ಅದಕ್ಕೇ ಸಮಯ ಸಿಗದಿದ್ದರೆ ಬೆಳಗಾವಿಯಲ್ಲಿ ಅಧಿವೇಶನ ನಡೆಸಿಯೂ ಪ್ರಯೋಜನವಿಲ್ಲ ದಂತಾಗುತ್ತದೆ. ಆದಷ್ಟು ಉತ್ತರ ಕರ್ನಾಟಕ ಸಮಸ್ಯೆಗಳಿಗೆ ಪರಿಹಾರಗಳು ಸಿಗುವಂತಾಗಬೇಕು. ಹಾಗಾದರೆ ಮಾತ್ರ ಬೆಳಗಾವಿಯಲ್ಲಿ ಅಧಿವೇಶನ ಮಾಡಿದ್ದಕ್ಕೂ ಒಂದು ತಿಂಗಳಿಂದ ಅಧಿಕಾರಿಗಳ ತಂಡ ಪೂರ್ವ ಸಿದ್ಧತೆ ಮಾಡಿಕೊಂಡಿದ್ದಕ್ಕೂ ಸಾರ್ಥಕತೆ ಬರುತ್ತದೆ. ಜನಪ್ರತಿನಿಧಿಗಳು ಅಹಂ ಪ್ರತಿಷ್ಠೆ ಇವೆಲ್ಲವನ್ನು ಬದಿಗೊತ್ತಿ ಹೆಚ್ಚಿನ ಸಂಖ್ಯೆಯಲ್ಲಿ ಅಧಿವೇಶನದಲ್ಲಿ ಭಾಗವಹಿಸಿ ಜನರ ಸಮಸ್ಯೆಗಳಿಗೆ ಸ್ಪಂದಿಸಿ ಅವುಗಳಿಗೆ ಪರಿಹಾರವನ್ನು ಕಂಡುಕೊಳ್ಳುವಂತಹ ಕಲಾಪಗಳು ನಡೆಯಬೇಕು. ಆಗ ಮಾತ್ರ ತೆರಿಗೆದಾರನ ಬೆವರಿನ ಹನಿಗೆ ಮೌಲ್ಯ ಸಿಗುವಂತಾಗುತ್ತದೆ. ಚರ್ಚೆಗಳು ಅತಿರೇಖಕ್ಕೆ ಹೋಗದೆ ಆರೋಗ್ಯಯುತವಾಗಿ ನಡೆಯಲಿ ಎಂಬುದೇ ಜನರ ಆಶಯವಾಗಿದೆ.

–ಪರಶಿವಮೂರ್ತಿ ಎನ್.ಪಿ., ನಂಜೇಪುರ ಸರಗೂರು ತಾಲೂಕು.

■ ತಾಯಿ–ಮಕ್ಕಳ ಆಸ್ಪತ್ರೆಗೆ ವೈದ್ಯರ ನೇಮಿಸಿ

ಮಾನ್ಯರೆ,

ಹೆಚ್.ಡಿ.ಕೋಟೆ ಪಟ್ಟಣದಲ್ಲಿ ಇರುವ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಸಂಜೆ 5 ಗಂಟೆಯ ನಂತರ ಯಾವುದೇ ವೈದ್ಯರು ಸಿಗುವುದಿಲ್ಲ. ಕೋಟ್ಯಾಂತರ ರೂಪಾಯಿ ವ್ಯಹಿಸಿ ಸುಜಜ್ಜಿತ ಆಸ್ಪತ್ರೆ ನಿರ್ಮಾಣ ಮಾಡಿದ್ದೀರಿ ನಿಜ. ಆದರೆ ಸಂಜೆ ವೇಳೆಗೆ ವೈದ್ಯರೇ ಇಲ್ಲ. ಇರುವಂತ ವೈದ್ಯರು ಸಂಜೆ ಆಗುತ್ತಿದ್ದಂತೆ ತಾವುಗಳು ನಡೆಸುವ ಖಾಸಗಿ ಕ್ಲಿನಿಕ್‌ಗಳ ಕಡೆ ಪಲಾಯನ ಮಾಡುತ್ತಾರೆ. ಇದನ್ನು ಕಂಡು ಕೇಳದಂತೆ ನಮ್ಮ ತಾಲೂಕು ಆಡಳಿತ ಕಣ್ಮುಚ್ಚಿ ಕುಳಿತಿದೆ.

ಇನ್ನೂ ಸಂಜೆ ವೇಳೆಗೆ ಹೆರಿಗೆಗೆ ಬರುವ ಮಹಿಳೆಯರ ಮತ್ತು ಸಂಬಂಧಿಕರ ಪಾಡು ಹೇಳತೀರದು, ಮೊದಲೇ ಸಂಜೆ ವೇಳೆಗೆ ವೈದ್ಯರು ಇಲ್ಲದೆ ಇರುವಾಗ ಅಲ್ಲಿರುವ ನರ್ಸ್‌ಗಳು ಬೇಡಿಕೆ ಇಡುವ ಲಂಚದ ಹಣಕ್ಕಾಗಿ ಪರಿತಪಿಸುವ ಸ್ಥಿತಿ ನಿರ್ಮಾಣವಾಗಿದೆ. ಒಂದು ಹೆರಿಗೆಗೆ 3000ರೂ ಹಣವನ್ನು ಪಡೆಯುತ್ತಿದ್ದಾರೆ. ಹಣ ಕೊಟ್ಟವರಿಗೆ ಮಾತ್ರ ಚಿಕಿತ್ಸೆ ಎಂತಾದರೆ ಸಾರ್ವಜನಿಕ ಸೇವೆಯಲ್ಲಿ ಆಸ್ಪತ್ರೆಗಳು ಏಕೆ ಬೇಕು. ತಾಲೂಕು ಆಡಳಿತಕ್ಕೆ ಮತ್ತೊಮ್ಮೆ ಗಮನಕ್ಕೆ ತರಲು ಇಚ್ಛಿಸುವುದೇನೆಂದರೆ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಸಂಜೆ ವೇಳೆಯಲ್ಲಿ ನರ್ಸ್‌ಗಳು ಪಡೆಯುತ್ತಿರುವ ಲಂಚಕ್ಕೆ ಕಡಿವಾಣ ಹಾಕಿ ವೈದ್ಯರನ್ನು ನೇಮಿಸಿ ತಾಯಿ ಮತ್ತು ಮಕ್ಕಳ ಆರೋಗ್ಯವನ್ನು ಕಾಪಾಡಿ ಮತ್ತು ನಿಮ್ಮ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುವ ಎಷ್ಟೋ ವೈದ್ಯರು ಖಾಸಗಿ ಕ್ಲಿನಿಕ್ ನಡೆಸುತ್ತಿರುವುದು ಕಂಡು ಬಂದಿದೆ. ಹಾಗಾಗಿ ಈ ಎಲ್ಲ ಅಕ್ರಮಗಳನ್ನು ತಡೆದು ಉತ್ತಮ ಚಿಕಿತ್ಸೆಯನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇವೆ. **–ಕೆ.ಎಸ್.ಸುರೇಶ್, ಮುಖ್ಯ ಶಿಕ್ಷಕ, ಸರಗೂರು.**

ನಮ್ಮ ಮೈಸೂರಿನ ಅಸಾಮಾನ್ಯರು...



ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಹಿಡಿದು ಯದುವಂಶದ ಕೊನೆಯ ಮಹಾರಾಜರಾದ ಜಯಚಾಮರಾಜ ಒಡೆಯರ್ ಆಡಳಿತದ ಅವಧಿಯವರೆಗೆ ಅನೇಕ ಶ್ರೇಷ್ಠ ಮಹನೀಯರು ಮೈಸೂರು ರಾಜ್ಯದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಅಂತಹ ಕೆಲವರ ಹೆಸರುಗಳನ್ನು ಮೈಸೂರು ಚರಿತ್ರೆಗೆ ಸಂಬಂಧಪಟ್ಟ ಇತಿಹಾಸದ ಪುಸ್ತಕಗಳಲ್ಲಿ ಪ್ರಸ್ತಾಪಿಸಿರುವುದನ್ನು ನಾವು ಕಾಣುತ್ತೇವೆ. ಆಡಳಿತದ ಪ್ರಮುಖ ಹುದ್ದೆಯಲ್ಲಿದ್ದು, ಗಣನೀಯ ಸೇವೆ ಸಲ್ಲಿಸಿದ್ದ ಕೆಲವರ ಹೆಸರುಗಳು ಅವುಗಳಲ್ಲಿ ಕಂಡು ಬಂದರೂ, ಅವರಂತೆಯೇ ಅಪೂರ್ವ ಸೇವೆ ಸಲ್ಲಿಸಿರುವ ಇತರ ನೂರಾರು ಮಂದಿ ಎಲ್ಲಿಯೂ ಪ್ರಸ್ತಾಪಗೊಳ್ಳದೆ ಎಲೆಮರೆಕಾಯಿಯಾಗಿ ಉಳಿದು ಹೋಗಿದ್ದಾರೆ. ನೆನಪಿನ ಅಂಗಳದಿಂದ ಜಾರಿ ಹೋಗಿದ್ದಾರೆ. ಹಾಗೆ ಸೇವೆ ಸಲ್ಲಿಸಿದರಲ್ಲಿ ಹಲವಾರು ಮಂದಿ ಅಂದಿಗೆ ಖ್ಯಾತನಾಮರಾಗಿದ್ದರೂ ಇಂದು ಅವರ ಬಗ್ಗೆ ನಮಗೆ ಹೆಚ್ಚು ತಿಳಿಯದೆ ಹೋಗಿದೆ. ನೆನಪಿನಿಂದ ಅಳಿಸಿಹೋಗಿದ್ದಾರೆ. ಕೆಲವರ ಸೇವೆಯನ್ನಾದರೂ ಇಲ್ಲಿ ಗುರುತಿಸುವ ಪ್ರಯತ್ನ ನನ್ನದು. ಇಂತಹ ಪ್ರಯತ್ನ ಬಹಳ ಹಿಂದೆಯೇ ಪ್ರಾರಂಭಿಸುವ ಉದ್ದೇಶ ಹೊಂದಿದ್ದರೂ, ಅದು ಈಗ ಸಾಧ್ಯವಾಗುತ್ತಿದೆ. ನೆನಪಿನಂಗಳದಿಂದ ಮರೆಯಾದ ಮಹನೀಯರ ಪರಿಚಯ ಒಂದು ಮಾಲಿಕೆಯಾಗಿ ಪ್ರಕಟಗೊಳ್ಳಲಿದೆ. ಅವು 'ಮೈಸೂರು ಮಿತ್ರ' ಓದುಗರಿಗೆ ಮೆಚ್ಚುಗೆಯಾದರೆ, ಅದೇ ನನಗೆ ಬರೆದ ತೃಪ್ತಿ.

48. ಅಭಿನವ ಕಾಳಿದಾಸ ಬಸವಪ್ಪ ಶಾಸ್ತ್ರಿ





ಗೌರಿ ಸತ್ಯ
ಹಿರಿಯ ಪತ್ರಕರ್ತರು
ಮೊ. 87627 88685

ಒಮ್ಮೆ ಮುಮ್ಮಡಿ ಕೃಷ್ಣರಾಜ ಒಡೆಯರು ತಮ್ಮ ರಾಜಸಭೆಯ ವಿದ್ವಾಂಸರ ಪಾಂಡಿತ್ಯವನ್ನು ಮೆಚ್ಚಿ ನಿಮಗೆ ಏನು ಬೇಕು ಕೇಳಿ ಎಂದರಂತೆ. ಅದಕ್ಕೆ ಆ ವಿದ್ವಾಂಸ, 'ಏನೂ ಬೇಡ ಮಹಾಪ್ರಭು, ಒಂದು ಚಿಟಿಕೆ ನಶ್ಯ ಕೊಟ್ಟರೆ ಸಾಕು' ಎಂದರಂತೆ!

ಅಂದಿನ ದಿನಗಳೇ ಅಂತಹದ್ದು. ಜನ ಆಸ್ತಿ ಪಾಸ್ತಿಗೆ ಆಸೆ ಪಟ್ಟವರಲ್ಲ. ಮಹಾರಾಜರು ಕೊಡು ತ್ತೇನೆ ಎಂದರೂ ಸೌಜನ್ಯದಿಂದ 'ಬೇಡ' ಎನ್ನುವ ದೊಡ್ಡತನ ಹೊಂದಿದ್ದವರು. ಮಹಾಪ್ರಭುಗಳ ಆಶ್ರಯವೇ ಸಾಕು ಎಂದು ಅಷ್ಟಕ್ಕೇ ತೃಪ್ತರಾಗಿದ್ದ ಮಹಾನುಭಾವರು. ಈ ವಿದ್ವಾಂಸರೂ ಅಂತಹ ಉದಾತ್ತ ಮನೋಭಾವದವರೇ. ಬಡತನವಿದ್ದರೂ ಮಹಾರಾಜರ ಕೃಪೆ ಇದ್ದರೆ ಸಾಕು ಎನ್ನುವ ತೃಪ್ತ ಬದುಕಿನವರು. ಒಬ್ಬರು 'ಅಭಿನವ ಕಾಳಿದಾಸ'ರಾದರೆ, ಇನ್ನೊಬ್ಬರು 'ಆಧುನಿಕ ಭೋಜರಾಜರು'.

ಈ ಮಹಾವಿದ್ವಾಂಸರು ಇನ್ನಾ್ಯರೂ ಅಲ್ಲ. ಮುಮ್ಮಡಿ ಹಾಗೂ ಅವರ ನಂತರದ ಮಹಾರಾಜ ಚಾಮರಾಜ ಒಡೆಯರ ಆಸ್ಥಾನದಲ್ಲಿ ಗೌರವಸ್ಥಾನ ಪಡೆದಿದ್ದ ಬಸವಪ್ಪ ಶಾಸ್ತ್ರಿಗಳು. ಕನ್ನಡ, ಸಂಸ್ಕೃತ ಭಾಷೆಗಳಲ್ಲಿ ಅಪಾರ ಪಾಂಡಿತ್ಯ ಗಳಿಸಿ ವೇದಾಧ್ಯಯನ ಪಾರಂಗತರಾಗಿ ಶ್ರೇಷ್ಠ ವರ್ಗದ ಕವಿಗಳಾಗಿದ್ದರು, ಅನುವಾದಕರಾಗಿದ್ದರು, ಗಮಕಿಗಳಾಗಿದ್ದರು. ಅವರ ಆಶುಕವಿತ್ವ ಅವರನ್ನು ಆಸ್ಥಾನದ ಅಚ್ಚುಮೆಚ್ಚಿನ ಕವಿಯನ್ನಾಗಿಸಿತ್ತು. ಮಹಾರಾಜ ಚಾಮರಾಜ ಒಡೆಯರ ಆಶಯದಂತೆ ಮೈಸೂರು ಸಂಸ್ಥಾನದ 'ಮೈಸೂರು ರಾಷ್ಟ್ರಗೀತೆ' 'ಕಾಯೌ ಶ್ರೀಗೌರೀ' ರಚಿಸಿ ಕೊಟ್ಟ ಕವಿ ಇವರು. ಸುಮಾರು 30ಕ್ಕೂ ಹೆಚ್ಚಿನ ಗ್ರಂಥಗಳನ್ನು ಬರೆದ ಕೀರ್ತಿ ಇವ ರದು. ಇಂಗ್ಲಿಷ್ ಕೃತಿಗಳನ್ನು ಕನ್ನಡಕ್ಕೆ ತರಬೇ ಕೆಂಬ ಉತ್ಸಾಹ ಅವರಲ್ಲಿದ್ದು ಶೇಕ್ಸ್‌ಪಿಯರನ 'ಒಥೆಲೋ' ನಾಟಕವನ್ನು "ಶೂರಸೇನಚರಿತ್ರೆ' ಎಂದು ಹೆಸರಿಸಿ ಕನ್ನಡಕ್ಕೆ ತಂದಿದ್ದರು.

ಬಸವಪ್ಪಶಾಸ್ತ್ರಿಗಳು (1843–1891) ಮಹದೇವ ಶಾಸ್ತ್ರಿ ಮತ್ತು ಬಸವಾಂಬಿಕೆಯ ಪುತ್ರರಾಗಿ ಮೈಸೂರಿನಲ್ಲಿ ಜನಿಸಿದರು. ಮಹದೇವಶಾಸ್ತ್ರಿಗಳ ತಂದೆ ಮುರುಡು ಸ್ವಾಮಿಗಳು. ಬೆಂಗಳೂರು ಜಿಲ್ಲೆಗೆ ಸೇರಿದ ನಾರುಸಂದ್ರದ ರುದ್ರಾಕ್ಷಿಮಠದ ಮಠಾಧಿಕಾರಿಗಳು. ಮಹದೇವಶಾಸ್ತ್ರಿಗಳಾ ದರೋ ವೈದಿಕ ವಿದ್ಯೆಯಲ್ಲಿ ಪರಿಣತರು. ವಿದ್ವತ್ ಪ್ರೇಮಿಯಾದ ಮುಮ್ಮಡಿಯವರು ಮಠಕ್ಕೆ ಆಗ ಮಿಸಿದ್ದಾಗ ಮಹದೇವಶಾಸ್ತ್ರಿಗಳು ವೇದೋಕ್ತವಾಗಿ ಆಶೀರ್ವಾದ ಮಾಡಿದರು. ಮೆಚ್ಚಿದ ಮುಮ್ಮಡಿಯವರು ಅವರನ್ನು ತಮ್ಮ ಆಸ್ಥಾನಕ್ಕೆ ಕರೆಸಿಕೊಂಡು ಸಂಮುಖದ ಪುರೋಹಿತರನ್ನಾಗಿ ನೇಮಿಸಿದರು. ಇವರ ಪುತ್ರರಾಗಿ ಬಸವಪ್ಪಶಾಸ್ತ್ರಿಗಳು 1843ರಲ್ಲಿ ಜನ್ಮತಾಳಿದರು. ಆದರೆ ಅವರ ಐದನೆಯ ವಯಸ್ಸಿನಲ್ಲಿಯೇ ಪಿತೃ ವಿಯೋಗವಾಯಿತು.

ದಯಾಳು ಮುಮ್ಮಡಿಯವರು ಬಸವಪ್ಪಶಾಸ್ತ್ರಿಗಳ ವಿದ್ಯಾಭ್ಯಾಸಕ್ಕೆ ಅನುಕೂಲವಾದ ವಾತಾವರಣವನ್ನು ಕಲ್ಪಿಸಿಕೊಟ್ಟರು. ಅವರ ಅಪೇಕ್ಷೆಯಂತೆ ಮಹಾರಾಜರ ಅಳಿಯ ಲಿಂಗರಾಜ ಅರಸರ ಆಶ್ರಯ ದೊರಕಿತು. ಬಸವಪ್ಪಶಾಸ್ತ್ರಿಗಳು ಪ್ರಸಿದ್ಧ ವಿದ್ವಾಂಸರ ಮಾರ್ಗದರ್ಶನದಲ್ಲಿ ಸಂಸ್ಕೃತ, ಕನ್ನಡ ಭಾಷೆ, ವೇದಾಂತ, ಸಂಗೀತ ಮುಂತಾದ ಕಲೆಗಳನ್ನು ಅಭ್ಯಾಸ ಮಾಡಿ ಪಾಂಡಿತ್ಯ ಪಡೆದುಕೊಂಡರು. ತಮ್ಮ 18ನೆಯ ವಯಸ್ಸಿನಲ್ಲೇ ಕನ್ನಡದಲ್ಲಿ ಕೃಷ್ಣರಾಜರ ಗುಣಶೀಲಗಳನ್ನು ವರ್ಣಿಸುವ 'ಕೃಷ್ಣರಾಜಾಭ್ಯುದಯ' ಎಂಬ ಚಂಪೂ ಕೃತಿಯನ್ನು ರಚಿಸಿ ಮಹಾರಾಜರಿಗೆ ಅರ್ಪಿಸಿ ಅವರ ಕೃಪೆಗೆ ಪಾತ್ರರಾದರು. ಅವರ ಅಪೇಕ್ಷೆಯಂತೆ ಸಂಸ್ಕೃತದಲ್ಲಿ 'ಬಿಲ್ವವೃಕ್ಷ ಪೂಜಾವಿಧಿ' ಗ್ರಂಥವನ್ನೂ ರಚಿಸಿ ಕೊಟ್ಟರು. ಆಸ್ಥಾನದಲ್ಲಿ ಆಶುಕವಿತ್ವ, ಕಾವ್ಯವಾಚನಗಳನ್ನು ಮಾಡಿ ಪ್ರಭುಗಳ ಪ್ರೀತಿಗೆ ಪಾತ್ರರಾಗಿದ್ದರು.

1868ರಲ್ಲಿ ಮುಮ್ಮಡಿಯವರು ಗತಿಸಲಾಗಿ ಇನ್ನೂ ಬಾಲಕರಾಗಿದ್ದ ಚಾಮರಾಜ ಒಡೆಯರು ಪಟ್ಟಕ್ಕೆ ಬಂದರು. ಇವರು ವಯಸ್ಸಿಗೆ ಬರುವವರೆಗೆ ರಂಗಾಚಾರ್ಲು ಅವರು ಚಾಮರಾಜರ ಮೇಲ್ವಿಚಾರಣೆಯ ಹೊಣೆ ಹೊತ್ತಿದ್ದರು. ಅವರಿಗೆ ಸಂಪೂರ್ಣ ನೆರವಾಗಿ ದುಡಿದವರು ಬಸವಪ್ಪಶಾಸ್ತ್ರಿಗಳು. ಅವರು 1870ರಲ್ಲಿ ಚಾಮರಾಜ ಒಡೆಯರ ವಿದ್ಯಾಭ್ಯಾಸಕ್ಕಾಗಿ ತೆರೆಯಲಾದ 'ರಾಯಲ್ ಸ್ಕೂಲ್'ನಲ್ಲಿ ಅಧ್ಯಾಪಕರಾಗಿ ನೇಮಕಗೊಂಡರು. ಆಗ ಅವರಿಗೆ ಇನ್ನೂ 22 ವರ್ಷ ವಯಸ್ಸು. ಬಸವಪ್ಪಶಾಸ್ತ್ರಿಗಳು ಹನ್ನೊಂದು ವರ್ಷಗಳ ಕಾಲ ಚಾಮರಾಜರಿಗೆ ವಿದ್ಯಾಗುರುಗಳಾಗಿದ್ದರು. ಬಸವಪ್ಪ ಶಾಸ್ತ್ರಿಗಳ ಕವಿಪ್ರತಿಭೆ ಸಂಪೂರ್ಣವಾಗಿ ರೂಪುಗೊಂಡಿದ್ದು ಚಾಮರಾಜರ ಒಡೆಯರ ಆಸ್ಥಾನದಲ್ಲಿ.

ಬಸವಪ್ಪಶಾಸ್ತ್ರಿಗಳನ್ನು ಅಗ್ರಪಂಕ್ತಿಯ ಕವಿಗಳ ಮಟ್ಟಕ್ಕೆ ಕೊಂಡೊಯ್ದಿದ್ದು ಅವರ ಅನುವಾದಿತ ನಾಟಕಗಳಾದರೂ, ಅವರ ಸ್ವಂತ ರಚನೆಗಳು ಕವಿ ಮನೋಧರ್ಮವನ್ನು ಮೆರೆಯುವ ಕೃತಿಗಳಾಗಿವೆ. 'ದಮಯಂತೀ ಸ್ವಯಂವರ', 'ಶ್ರೀಹರ್ಷ ಚರಿತ್ರೆ', 'ರೇಣುಕವಿಜಯಂ' ಅವರ ಕನ್ನಡದ ಚಂಪೂ ಗ್ರಂಥಗಳು. ಇವು ಹಾಗೂ ಅವರ ಭಾಮಿನೀ ಷಟ್ಪದಿಯ 'ಸಾವಿತ್ರೀ ಚರಿತ್ರೆ' ಸ್ವತಂತ್ರ ಕೃತಿಗಳಾ ಗಿವೆ. ಶಾಸ್ತ್ರಿಗಳು ರಚಿಸಿದ ಕಾವ್ಯಗಳೆಂದರೆ 'ಭರ್ತೃಹರಿ ಶುಭಾಷಿತ ಶತಕತ್ರಯಂ', 'ಶೃಂಗಾರ ಶತಕಂ', 'ವೈರಾಗ್ಯ ಶತಕಂ' (ಭಾಷಾಂತರಗಳು), 'ಶಂಕರ ಶತಕ', ಮತ್ತು 'ಸಾವಿತ್ರೀ ಚರಿತ್ರೆ'. ಅವರ 'ನೀತಿಸಾರಸಂಗ್ರಹ' ಅರ್ಥಪೂರ್ಣ ಹಿತೋಕ್ತಿಗಳಿಂದ ಕೂಡಿದೆ. 'ರೇಣುಕ ವಿಜಯಂ' ಹಾಗೂ 'ಶೃಂಗಾರ ಶತಕಂ' ಅಪೂರ್ಣವಾಗಿ ಉಳಿದಿವೆ 'ಶಿವಭಕ್ತಿ ಸುಧಾತರಂಗಿಣಿ', 'ಆರ್ಯಶತಕ', 'ನಕ್ಷತ್ರ ಮಾಲಿಕಾ', 'ಅಂಬಾ ಷೋಡಶ ಮಂಜರೀ', 'ಅಷ್ಟಮೂರ್ತಿ ತನಯಾಷ್ಟಕ', 'ದಕ್ಷಿಣಾ ಮೂರ್ತ್ಯಷ್ಟಕ', 'ಶಿವಾಷ್ಟಕ', 'ಸದಾಶಿವಾ ಷ್ಟಕ' ಅವರ ಸಂಸ್ಕೃತ ಗ್ರಂಥಗಳು.

ಅವರಿಗೆ ವಿಶೇಷವಾಗಿ ಕೀರ್ತಿ ತಂದದ್ದು ಅನುವಾದಿತ ನಾಟಕಗಳು. ಅನೇಕ ಸಂಸ್ಕೃತ ನಾಟಕಗಳನ್ನು ಕನ್ನಡಿಸಿ ಕನ್ನಡ ರಂಗಭೂಮಿಗೆ ನಾಂದಿ ಹಾಡಿದರು. ಸಂಸ್ಕೃತಕ್ಕೆ ವಿಶೇಷ ಅಗ್ರಪೂಜೆ ಸಲ್ಲುತ್ತಿದ್ದ ಆ ಕಾಲದಲ್ಲಿ ಸಂಸ್ಕೃತ ನಾಟಕಗಳನ್ನು ಕನ್ನಡಕ್ಕೆ ಅಳವಡಿಸಿ ಅಭಿನಯಿಸುವುದೇ ಅಂದಿನ ಜನಾಭಿರುಚಿಯಾಗಿತ್ತು. ಇದನ್ನು ಮನಗಂಡ ಶಾಸ್ತ್ರಿಗಳು ಸಂಸ್ಕೃತದ ಉದ್ದಾಮ ಕವಿಶ್ರೇಷ್ಠರಾದ ಕಾಳಿದಾಸ, ಭವಭೂತಿ, ಶ್ರೀಹರ್ಷ, ಆರ್ಯಕ್ಷೇಮೀಶ್ವರ ಹಾಗೂ ಇಂಗ್ಲಿಷಿನ ಮಹಾ ನಾಟಕಕಾರ ಷೇಕ್ಸ್‌ಪಿಯರ್ ಮುಂತಾದ ಮಹಾ ಕವಿಗಳ ಕೃತಿಗಳನ್ನು ಭಾಷಾಂತರಿಸಿ ಯಶಸ್ವಿಯಾದರು. ಶ್ರೇಷ್ಠ ವರ್ಗದ ಅನುವಾದಕರಾದರು. ಕನ್ನಡದಲ್ಲಿ ನಾಟಕಗಳನ್ನು ರಚಿಸುವಂತೆ ಇವರನ್ನು ಪ್ರೋತ್ಸಾಹಿಸಿದವರು ದಿವಾನರಾಗಿದ್ದ ಸಿ.ರಂಗಾಚಾರ್ಯರು ಮತ್ತು ರಾವ್ ಬಹದ್ದೂರ್ ಅಂಬಿಲ್ ನರಸಿಂಹಯ್ಯಂಗಾರ್ಯರು.

ಭಾಷಾಂತರ ಸುಲಭ ಕಾರ್ಯವಲ್ಲ. ನೂತನ ಗ್ರಂಥ ರಚನೆಗಿಂತಲೂ ಹೆಚ್ಚಿನ ಹೊಣೆಗಾರಿಕೆಯುಳ್ಳದ್ದು. ಅದರಲ್ಲಿಯೂ ಕಾಳಿದಾಸನ ನಾಟಕಗಳು ಭಾಷಾಂತರಕ್ಕೆ ಸುಲಭವಲ್ಲ. ಅವನ ಶೈಲಿಯೇ ಭಾಷಾಂತರಕಾರರಿಗೆ ಒಂದು ಪೆಡಂಭೂತ. ಆದರೆ ಬಸವಪ್ಪಶಾಸ್ತ್ರಿಗಳು ಈ ಸಾಹಸಕ್ಕೆ ಕೈಹಾಕಿ ಮೊದಲಿಗೆ ಕಾಳಿದಾಸನ 'ಶಾಕುಂತಲ' ನಾಟಕವನ್ನು 'ಕರ್ನಾಟಕ ಶಾಕುಂತಲ ನಾಟಕಂ' ಹೆಸರಿನಲ್ಲಿ ಕನ್ನಡಿಸಿ ದಿಗ್ವಿಜಯ ಸಾಧಿಸಿದರು. ನಾಟಕವನ್ನು ವಿದ್ವಜ್ಜನ ಮೆಚ್ಚುವಂತೆ ಮಾಡಿದರು. ರಾಜಸಭೆಯಲ್ಲಿ ಚಾಮರಾಜ ಒಡೆಯರಿಂದ 'ಅಭಿನವ ಕಾಳಿದಾಸ' ಎನ್ನಿಸಿಕೊಂಡರು. ಆ ಬಿರುದು ಶಾಶ್ವತವಾಯಿತು. ಈ ಕೃತಿಗೆ ದೊರೆತ ಮಹಾರಾಜರ ಹಾಗೂ ಜನರ ಮೆಚ್ಚಿಗೆ, ಅದರ ಜೊತೆಗೆ ಅಂಬಿಲ್ ನರಸಿಂಹಯ್ಯಂಗಾರ್ಯರ ಪ್ರೋತ್ಸಾಹದಿಂದ ಇನ್ನೂ ಹೆಚ್ಚಿನ ಗ್ರಂಥಗಳನ್ನು ಬರೆಯ ಬೇಕೆಂದೆನಿಸಿ 'ಸಾವಿತ್ರಿ ಚರಿತ್ರೆ' ಕಾವ್ಯ ಕೃತಿಯನ್ನು ಭಾಮಿನೀ ಷಟ್ಪದಿಯಲ್ಲಿ ರಚಿಸಿದರು.

ಬಸವಪ್ಪಶಾಸ್ತ್ರಿಗಳ ಇತರ ಅನುವಾದಿತ ಕೃತಿಗಳೆಂದರೆ 'ಕನ್ನಡ ವಿಕ್ರಮೋರ್ವಶೀಯ ನಾಟಕಂ', 'ಕರ್ನಾಟಕ ಉತ್ತರರಾಮ ಚರಿತ ನಾಟಕಂ', 'ಕರ್ನಾಟಕ ರತ್ನಾವಳೀ ನಾಟಕ', ಕರ್ನಾಟಕ ಚಂಡಕೌಶಿಕ ನಾಟಕಂ', ಮತ್ತು 'ಕರ್ನಾಟಕ ಮಾಲತೀ ಮಾಧವ ನಾಟಕಂ'.

'ವಿಕ್ರಮೋರ್ವಶೀಯ' ಇವರು ಮೊದಲಿಗೆ ಬರೆದ ಕೃತಿಗಳ ಪೈಕಿ ಒಂದು. ರಂಗಪ್ರಯೋಗಕ್ಕೆ ಅನುಕೂಲವಾಗುವ ರೀತಿ ಸಂದರ್ಭಕ್ಕೆ ಸರಿಹೊಂದುವ ಹಾಡುಗಳನ್ನು ಸೇರಿಸಿ ಕನ್ನಡಿಸಿದ ಕೃತಿ 'ಉತ್ತರರಾಮ ಚರಿತೆ'. ಶಾಕುಂತಲ ನಾಟಕದ ನಂತರ ಬಸವಪ್ಪಶಾಸ್ತ್ರಿಗಳು ಸಮರ್ಪಕವಾಗಿ ಅನುವಾದಿಸಿದ ಕೃತಿ 'ರತ್ನಾವಳಿ.' 'ಚಂಡಕೌಶಿಕ' ನಾಟಕದ ನಾಲ್ಕು ಅಂಕಗಳನ್ನು ಸಂಸ್ಕೃತದಿಂದ ಪರಿವರ್ತಿಸಿ ಬರೆದು ಅಷ್ಟರಲ್ಲಿಯೇ ದೈವಾಧೀನರಾದ್ದರಿಂದ ಮೇಲುಕೋಟೆಯ ದೇವಶಿಖಾಮಣಿ ಅಳಸಿಂಗರಾಚಾರ್ಯರಿಂದ ಐದನೆಯ ಅಂಕವನ್ನು ಬರೆಯಿಸಿ ಗ್ರಂಥವನ್ನು ಪೂರ್ತಿಮಾಡಲಾಯಿತು. ಇದನ್ನು ಪ್ರಚುರಪಡಿಸುವ ಕಾರ್ಯದಲ್ಲಿ ಗರಳಪುರಿ ಅಯ್ಯಶಾಸ್ತ್ರಿಗಳು, ನಂಜನಗೂಡು ಸುಬ್ಬಶಾಸ್ತ್ರಿಗಳು ಮತ್ತು ಅವರ ಮಕ್ಕಳು ಅನಂತನಾರಾಯಣಶಾಸ್ತ್ರಿಗಳು ಬಹಳವಾಗಿ ಸಹಾಯ ಮಾಡಿದರು. ಶೇಕ್ಸ್ ಪಿಯರನ 'ಒಥೆಲೋ' ನಾಟಕದ ಅನುವಾದ ಮಾಡಲು ತಮಗೆ ಇಂಗ್ಲಿಷ್ ಭಾಷೆ ತಿಳಿಯದ ಕಾರಣ ಮೈಸೂರಿನ ಮಹಾರಾಣಿ ಶಾಲೆಯಲ್ಲಿ ಬೋಧಕರಾಗಿ ಹಾಗೂ ವಿದ್ಯಾ ಇಲಾಖೆಯಲ್ಲಿ ತರ್ಜುಮೆದಾರರಾಗಿದ್ದ ಸಿ.ಸುಬ್ಬರಾಯರ ನೆರವಿನಿಂದ ಕನ್ನಡಿಸಿ 'ಶೂರಸೇನ ಚರಿತ್ರೆ' ಹೆಸರಿನಲ್ಲಿ ಪ್ರಕಟಿಸಿದರು. 'ಕೃಷ್ಣರಾಜಾಭ್ಯುದಯ' ಸೇರಿದಂತೆ ಸುಮಾರು 11 ಕೃತಿಗಳು ದೊರೆತಿಲ್ಲದೆ ಹೋಗಿವೆ.

ಬಸವಪ್ಪಶಾಸ್ತ್ರಿಗಳದ್ದು ಸ್ಥೂಲಕಾಯ, ತಲೆಯನ್ನು ಅಲಂಕರಿಸುವ ಪೇಟ, ಕಪ್ಪುಮಿಶ್ರಿತ ಎಣ್ಣೆಗೆಂಪಿನ ದೇಹಕಾಂತಿ, ಭಸ್ಮತ್ರಿಪುಂಡ್ರದ ನಡುವೆ ಒಂದು ರೂಪಾಯಿ ಅಗಲದ ಕೇಸರಿಯ ಗಂಧದ ಬಟ್ಟು ಮೂವತ್ತೆರಡು ರುದ್ರಾಕ್ಷಿಯ ಸರ, ಕಣ್ಣುಗಳಲ್ಲಿ ತೇಜಸ್ಸು. ಒಟ್ಟಿನಲ್ಲಿ ಆಕರ್ಷಕ ವ್ಯಕ್ತಿತ್ವ. ಶಿವಕಥಾ ಪಂಡಿತ ಶಿವಪ್ಪಶಾಸ್ತ್ರಿಗಳು, ಕರ್ನಾಟಕಭಾಷಾ ರತ್ನಂ ಆರ್.ಕರಿಬಸವಶಾಸ್ತ್ರಿಗಳು ಮುಂತಾದ ಪ್ರಭಾವಶಾಲೀ ಪಂಡಿತರು ಅವರ ಶಿಷ್ಯರಲ್ಲಿ ಪ್ರಮುಖರು. ಶಾಸ್ತ್ರಿಗಳದು ಕೊಡುಗೈ, ಆಸ್ತಿಯನ್ನೇನೂ ಗಳಿಸಲಿಲ್ಲ. ಮನೆ ಮಠಗಳನ್ನೂ ಮಾಡಲಿಲ್ಲ. ವಿಹಾರಾರ್ಥವಾಗಿ ನೀಲಗಿರಿ ಪಾಪಣ್ಣನವರ ಕುದುರೆಗಾಡಿಯಲ್ಲಿ ಕುಳಿತು ದೊಡ್ಡಕೆರೆ ಏರಿಯ ರಸ್ತೆಯಲ್ಲಿ ಹೋಗುತ್ತಿದ್ದಾಗ ಅಕಸ್ಮಾತ್ ಕುದುರೆ ಬೆದರಿ ಅಪಘಾತಕ್ಕೆ ಸಿಕ್ಕಿದ ಶಾಸ್ತ್ರಿಗಳು ಚೇತರಿಸಿಕೊಳ್ಳಲಿಲ್ಲ. 1891ರಲ್ಲಿ ಕಾಲವಾದಾಗ ಅವರಿಗಿನ್ನೂ 49 ವರ್ಷಗಳು. ಜೀವನಕ್ಕೆ ಮಾರ್ಗವಿಲ್ಲದೆ ಪತ್ನೀ ಪುತ್ರರು ಮೈಸೂರನ್ನು ತೊರೆದರು. ಅವರ ಮಗಳನ್ನು ಕೊಟ್ಟಿದ್ದ ಅರಕಲಗೂಡು ತಾಲೂಕು ಕಾವೇರಿ ತೀರದಲ್ಲಿರುವ ಕೇರಳಾಪುರಕ್ಕೆ ಹೋಗಿ ನೆಲೆಸಿದರು. ಬಸವಪ್ಪ ಶಾಸ್ತ್ರಿಗಳ ಸಂತತಿಯವರು ಇಂದಿಗೂ ಕೇರಳಾಪುರದಲ್ಲಿ ವಾಸಿಸುತ್ತಿದ್ದಾರೆ. ಅವರ ಮೊಮ್ಮಗಳ ಮೊಮ್ಮಗ ಶಾಲಾ ಅಧ್ಯಾಪಕರಾಗಿ ನಿವೃತ್ತರಾಗಿದ್ದಾರೆ.

'ಅಭಿನವ ಕಾಳಿದಾಸ' ಬಸವಪ್ಪಶಾಸ್ತ್ರಿಗಳ ಸಮಾಧಿ ಸೇಂಟ್ ಫಿಲೋಮಿನಾ ಕಾಲೇಜಿನ ಬಳಿ ಹಿಂಭಾಗದಲ್ಲಿ ಇದೆ. ಪಾಳುಬಿದ್ದು ಮರೆತುಹೋಗಿದ್ದ ಅದನ್ನು 1985ರಲ್ಲಿ ಮಹಾನಗರಪಾಲಿಕೆ ಜೀರ್ಣೋದ್ಧಾರ ಮಾಡಿತ್ತು. ಅದಿಂದು ಮತ್ತೆ ನಿರ್ಲಕ್ಷ್ಯಕ್ಕೆ ಒಳಗಾಗಿ ಶಿಥಿಲವಾಗುತ್ತಿದೆ. ವಿಶಾಲವಾಗಿದ್ದ ಅದರ ಸುತ್ತಲಿನ ಜಾಗ ಒತ್ತುವರಿಯಾಗಿ ಹೋಗಿದೆ.

ಜನಪರ ನಾಯಕ ಹೆಚ್.ಡಿ.ಕುಮಾರಸ್ವಾಮಿ



ಕೇಂದ್ರ ಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಜನ್ಮದಿನ. ತನ್ನಿಮಿತ್ತ ಈ ಲೇಖನ.

ಜನಪರ ನಾಯಕ, ಚಲನಚಿತ್ರ ನಿರ್ಮಾಪಕ, ಚಲನಚಿತ್ರ ವಿತರಕ, ಬಹುಮುಖ ಸಮಾಜ ಸೇವಕ ಹೆಚ್.ಡಿ.ಕುಮಾರಸ್ವಾಮಿ ಅವರು ಜನಿಸಿದ್ದು ಭವ್ಯ ಭಾರತದ ದಿವ್ಯ ಭೂಪಟದಲ್ಲಿ ದೇವೇಗೌಡರಂತಹ ಕನ್ನಡಿಗರೊಬ್ಬರು ಪ್ರಧಾನ ಮಂತ್ರಿಗಳಾಗಿದ್ದರೆಂಬುದನ್ನು ದಾಖಲಿಸಿರುವ ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲೂಕಿನ ಹರದನಹಳ್ಳಿ ಎಂಬ ಪುಟ್ಟ ಗ್ರಾಮದಲ್ಲಿ. ತಂದೆ 'ಮಣ್ಣಿನ ಮಗ' ಎಂದೇ ದೇಶದ ಉದ್ದಗಲಕ್ಕೂ ಕರೆಯಲ್ಪಡುವ ಹೆಚ್.ಡಿ. ದೇವೇಗೌಡ. ತಾಯಿ ಜನಪರ ಕಾಳಜಿಯುಳ್ಳ ಸುಸಂಸ್ಕೃತೆ ಚೆನ್ನಮ್ಮ. ಇವರ ಮೂರನೇ ಪುತ್ರನೇ ಹೆಚ್.ಡಿ.ಕುಮಾರಸ್ವಾಮಿ. ಇವರ ಜನ್ಮ ದಿನಾಂಕ 1959 ಡಿಸೆಂಬರ್ 16. ಹುಟ್ಟಿದೂರು ಹರದನಹಳ್ಳಿಯಲ್ಲೇ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಮುಗಿಸಿದ ಕುಮಾರಸ್ವಾಮಿ, ಪ್ರೌಢ ಶಿಕ್ಷಣ ಮತ್ತು ಕಾಲೇಜು ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿನತ್ತ ಪಯಣಿಸಿದರು. ಅಲ್ಲಿ ಪ್ರತಿಷ್ಠಿತ ವಿಜಯ ಕಾಲೇಜಿನಲ್ಲಿ ಪಿಯುಸಿಯನ್ನು ವ್ಯಾಸಂಗ ಮಾಡಿ ಅಷ್ಟೇ ಪ್ರತಿಷ್ಠಿತ ನ್ಯಾಷನಲ್ ಕಾಲೇಜಿನಲ್ಲಿ ಕಲಿತು ಬಿಎಸ್ಸಿ ಪದವಿ ಗಳಿಸಿದರು. ವಿದ್ಯಾರ್ಥಿ ದೆಸೆಯಲ್ಲೇ ಇವರು ನಾಯಕತ್ವ ಗುಣಗಳನ್ನು ಹೊಂದಿದ್ದು ಸಂಘಟನೆ ಮತ್ತು ಜನಮುಖಿ ಕಾರ್ಯಗಳನ್ನು ಮಾಡುತ್ತಿದ್ದರು. ಹಾಗಾಗಿ ಇವರು ಶಾಲಾ–ಕಾಲೇಜುಗಳಲ್ಲಿ ಹಾಗೂ ಇಲ್ಲಿಂದ ಹೊರತಾಗಿಯೂ ಎಲ್ಲರ ಮೆಚ್ಚುಗೆ ಗಳಿಸಿದ್ದರು.

ಬಿಎಸ್ಸಿ ಪದವಿ ಮುಗಿಸಿದ ಇವರು ರಾಜಕೀಯ ಕುಟುಂಬದ ಕುಡಿಯಾದರೂ ಎಂದೂ ರಾಜಕಾರಣಿಯಾಗಬೇಕೆಂದು ಕನಸು ಕಂಡವರಲ್ಲ. ತಂದೆಯ ಅದೇಕೋ ಏನೋ ಕೆಎಎಸ್ ಅಧಿಕಾರಿಯಾದ ಅಣ್ಣ ಬಾಲಕೃಷ್ಣೇಗೌಡರ ಸರಕಾರಿ ನೌಕರಿಯೂ ಇವರಿಗೆ ಸರಿ ಎನಿಸಲಿಲ್ಲ. ಮತ್ತೊಬ್ಬ ಅಣ್ಣ ರೇವಣ್ಣರ ರಾಜಕೀಯ ಪ್ರವೇಶವೂ ಇವರನ್ನು ಸ್ವಲ್ಪವೂ ಪ್ರೇರೇಪಿಸಲಿಲ್ಲ. ಭಿನ್ನ ಚಿಂತನೆ, ವಿಭಿನ್ನ ಆಲೋಚನೆಗಳುಳ್ಳ ಇವರು ಏನಾದರೂ ಸಾಧಿಸಬೇಕೆಂಬ ಹಂಬಲ ಉಳ್ಳವರಾಗಿದ್ದರು. ಹಾಗಾಗಿ ಸಿನಿಮಾಲೋಕದಂತಹ ಬಣ್ಣದ ಲೋಕದತ್ತ ಕುಮಾರಸ್ವಾಮಿ ಆಕರ್ಷಿತರಾದರು. ಹಾಗಾಗಿ ಅವರು ಮೊದಲಿಗೆ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ತಮ್ಮ ತಾಯಿಯ ಹೆಸರಿನಲ್ಲಿ ಚೆನ್ನಾಂಬಿಕಾ ಫಿಲಂಸ್ ಎಂಬ ಚಲನಚಿತ್ರ ವಿತರಣಾ ಸಂಸ್ಥೆ ಸ್ಥಾಪಿಸಿದರು. ಪ್ರಸಿದ್ಧ ಚಲನಚಿತ್ರಗಳನ್ನು ವಿತರಣೆ ಮಾಡುತ್ತಲೇ ತಮ್ಮ ಚೆನ್ನಾಂಬಿಕಾ ಫಿಲಂಸ್ ಬ್ಯಾನರ್‌ನಲ್ಲಿ ಅನೇಕ ಚಿತ್ರಗಳನ್ನು ನಿರ್ಮಿಸಿದರು. ಇವರು ನಿರ್ಮಾಪಕರಾಗಿ ತೆರೆಗೆ ತಂದ ಪ್ರಮುಖ ಚಿತ್ರಗಳೆಂದರೆ ಸೂರ್ಯವಂಶ, ಪ್ರೇಮೋತ್ಸವ, ಗಲಾಟೆ ಅಳಿಯಂದ್ರು, ಜಿತೇಂದ್ರ, ಚಂದ್ರಚಕೋರಿ, ಹಾಗೂ ತಮ್ಮ ಪುತ್ರ ನಿಖಿಲ್ ಕುಮಾರಸ್ವಾಮಿ ಅವರನ್ನೇ ನಾಯಕ ನಟನನ್ನಾಗಿ ಮಾಡಿ ಜಾಗ್ವಾರ್, ಸೀತಾರಾಮ ಕಲ್ಯಾಣ ಮುಂತಾದ ಕನ್ನಡ ಚಿತ್ರಗಳನ್ನು ನಿರ್ಮಿಸಿ ಕನ್ನಡ ಚಿತ್ರಲೋಕದ ಗಮನ ಸೆಳೆದರು. ಬಹಳಷ್ಟು ಕಲಾವಿದರಿಗೆ, ತಂತ್ರಜ್ಞರಿಗೆ ಹಾಗೂ ನಿರ್ದೇಶಕರಿಗೆ ಆಶ್ರಯದಾತರಾದರು. ಅನ್ನದಾತರೂ ಆದರು. ಹೀಗೆ ಸಿನಿಮಾಲೋಕ ಸೇರಿದಂತೆ ಸಾಹಿತ್ಯ–ಸಂಗೀತ, ನಾಟಕ–ನೃತ್ಯ ಮುಂತಾದ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಂಪೂರ್ಣವಾಗಿ ತಮ್ಮನ್ನು ತೊಡಗಿಸಿಕೊಂಡು ನಾಡಿನಲ್ಲಿ ಗುರುತರವಾದ ಸಮಾಜಮುಖಿ ಕಾರ್ಯಗಳನ್ನು ಮಾಡತೊಡಗಿದರು. ತಾವು ಕಂಡುಕೊಂಡಿದ್ದ, ತಮಗೆ ಸರಿಯೆನಿಸಿದ್ದ ಈ ಹಾದಿಯಲ್ಲಿ ಅವರು ನಡೆಯಬಯಸಿದರೂ ಕೂಡ ಬೇರೊಂದು ಲೋಕ ಅವರಿಗರಿವಿಲ್ಲದಂತೆಯೇ ಅವರನ್ನು ಸೆಳೆಯುತ್ತಿತ್ತು.

ಈ ನಡುವೆ 1986 ಮಾರ್ಚ್ 13ರಂದು ಎಲ್ಲಾ ರೀತಿಯಿಂದಲೂ ತಮಗೆ ಸರಿ ಎನಿಸಿದ ಸುಸಂಸ್ಕೃತ ಮನೆತನದ ಅನಿತಾ ಅವರನ್ನು ವಿವಾಹವಾಗಿ ನಿಖಿಲ್ ಎಂಬ ಓರ್ವ ಪುತ್ರನ ತಂದೆ ಆದರು.

1994ರಲ್ಲಿ ತಂದೆ ಹೆಚ್.ಡಿ.ದೇವೇಗೌಡರು ಮುಖ್ಯಮಂತ್ರಿ ಆಗಿದ್ದಾಗಲೂ ಮನೆ ತುಂಬ ಜನ ತುಂಬಿ ತುಳುಕುತ್ತಾ ರಾಜಕಾರಣದ ವೈಭೋಗವೇ ಮೆರೆಯುತ್ತಿದ್ದರೂ ಅತ್ತ ಇವರು ವಾಲಿರಲಿಲ್ಲ. ಆದರೆ ರಕ್ತಗತವಾಗಿ ಇವರಲ್ಲಿದ್ದ ರಾಜಕಾರಣ ಇವರನ್ನು ಮಾತ್ರ ಬಿಡಲಿಲ್ಲ. ತನ್ನತ್ತ ಸದ್ದನೆ ಸೆಳೆದುಕೊಂಡೇ ಬಿಟ್ಟಿತು. ತಂದೆಯ ಜೊತೆಯಲ್ಲಿದ್ದ ಹಿರಿಯರು, ತನ್ನ ಜೊತೆಯಲ್ಲಿದ್ದ ಹಿತೈಷಿಗಳು–ಸ್ನೇಹಿತರು, ಬಂಧು–ಬಳಗ ಇವರೆಲ್ಲರ ಒತ್ತಾಯದ ಮೇರೆಗೆ 1996ರಲ್ಲಿ ಕನಕಪುರ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾಗಿ ಸ್ಪರ್ಧಿಸಿದರು. ಖ್ಯಾತ ಚಲನಚಿತ್ರ ನಟ ರೆಬಲ್ ಸ್ಟಾರ್ ಅಂಬರೀಶ್ ಅವರಂತಹ ಘಟಾನುಘಟಿ ಪ್ರಸಿದ್ಧ ವ್ಯಕ್ತಿಗಳು ಇವರ ಹಿಂದೆ ನಿಂತು ಪ್ರಚಾರ ಕೈಗೊಂಡಿದ್ದರು. ಅವರೆಲ್ಲರ ಆಶಯದಂತೆ ಮೊದಲ ಚುನಾವಣೆಯಲ್ಲೇ ಗೆದ್ದು ಸಂಸದರಾಗುವ ಮೂಲಕ ರಾಜಕಾರಣಿ ಆದರು. ಆಗ ಅವರು ತಾನು ಪರಿಸ್ಥಿತಿಯ ಶಿಶು ಎಂದಿದ್ದರು. ಆದರೂ ಅವರ ಇಷ್ಟದ ಸಿನಿಮಾ ಮತ್ತು ಸಾಂಸ್ಕೃತಿಕ ಲೋಕವನ್ನು ಅವರು ಬಿಡಲಿಲ್ಲ. ಇವರು ಲೋಕಸಭಾ ಸದಸ್ಯರಾಗುತ್ತಿದ್ದಂತೆಯೇ ತಂದೆ ದೇವೇಗೌಡರು ದೇಶದ ಪ್ರಧಾನ ಮಂತ್ರಿಯಾದರು. ನೀರಿಗೆ ಬಿದ್ದ ಮೇಲೆ ಚಳಿಯಾದರೇನು, ಮಳೆಯಾದರೇನು ಎಂಬಂತೆ ಕರ್ನಾಟಕದ ರಾಜಕಾರಣದ ಜೊತೆಗೆ ತಂದೆಯೊಡನೆ ದೇಶದ ರಾಜಕೀಯವನ್ನು ಚೆನ್ನಾಗಿ ಕರಗತ ಮಾಡಿಕೊಂಡ ಇವರು 1998ರಲ್ಲಿ ಮತ್ತೆ ಎದುರಾದ ಕನಕಪುರ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ ಸೋಲುಂಡರು. ಆದರೆ ಇದರಿಂದ ವಿಚಲಿತರಾಗದೆ ಮತ್ತೆ 1999ರಲ್ಲಿ ಸಾತನೂರು ವಿಧಾನಸಭಾ ಚುನಾವಣೆಯಲ್ಲಿ ನಿಂತು ಡಿ.ಕೆ.ಶಿವಕುಮಾರ್ ಎದುರು ಸೋತರು. ಆದರೆ ಇವರು ಎದೆಗುಂದಲಿಲ್ಲ. ರಾಜಕೀಯವೇ ಹಾಗೆ ಸೋಲೇ ಗೆಲುವಿನ ಮೆಟ್ಟಿಲು ಎಂದು ಭಾವಿಸಿ ಇಷ್ಟೊತ್ತಿಗೆ ಪಳಗಿದ ರಾಜಕಾರಣಿಯಾಗಿದ್ದ ಇವರು 2004ರಲ್ಲಿ ರಾಮನಗರ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಅಭೂತಪೂರ್ವ ಯಶಸ್ಸಿನಿಂದ ಪ್ರಥಮ ಬಾರಿಗೆ ವಿಧಾನಸಭೆ ಪ್ರವೇಶಿಸಿದರು. 2006ರಲ್ಲಿ ನಡೆದ ರಾಜಕೀಯ ಬೆಳವಣಿಗೆಯಲ್ಲಿ ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಯಾಗಿ ಇತಿಹಾಸ ಬರೆದರು. ಆಗಲೂ ಕೂಡ ಇವರು ತಾನು ಪರಿಸ್ಥಿತಿಯ ಶಿಶು ಎಂದಿದ್ದರು. ಇನ್ನು ಮುಂದೆ ನಡೆದದ್ದೆಲ್ಲವೂ ಇತಿಹಾಸ.

2006 ಫೆಬ್ರವರಿ 3ರಿಂದ 2008 ಅಕ್ಟೋಬರ್ 8ರವರೆಗೆ 610 ದಿನ ಮುಖ್ಯಮಂತ್ರಿಗಳಾಗಿದ್ದ ಕುಮಾರಸ್ವಾಮಿ, ಅಧಿಕಾರ ಸಿಕ್ಕ ಅಲ್ಪ ಅವಧಿಯಲ್ಲೇ ಹಲವಾರು ಜನಪರ ಕಾರ್ಯಗಳನ್ನು ಮಾಡಿ ಜನಮನ್ನಣೆ ಗಳಿಸಿದ್ದರು. 2008ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ರಾಮನಗರ ಕ್ಷೇತ್ರದಿಂದ ಗೆದ್ದು ಬಂದರು. ಮತ್ತೆ 2013ರಲ್ಲಿ ಇಲ್ಲಿಂದಲೇ ಮರು ಆಯ್ಕೆಯಾದರು.

2018ರಲ್ಲಿ ರಾಮನಗರ ಮತ್ತು ಚನ್ನಪಟ್ಟಣ ಎರಡೂ ವಿಧಾನಸಭಾ ಕ್ಷೇತ್ರಗಳಲ್ಲಿ ಸ್ಪರ್ಧಿಸಿ ಎರಡೂ ಕ್ಷೇತ್ರಗಳಲ್ಲೂ ಗೆದ್ದಿದ್ದರು. ಯಾವ ಪಕ್ಷಗಳಿಗೂ ಬಹುಮತ ಬಾರದ ಕಾರಣ ಜೆಡಿಎಸ್ ಮತ್ತು ಕಾಂಗ್ರೆಸ್‌ನ ಸಮ್ಮಿಶ್ರ ಸರ್ಕಾರದಲ್ಲಿ 2ನೇ ಬಾರಿಗೆ ಕರ್ನಾಟಕ ರಾಜ್ಯದ 25ನೇ ಮುಖ್ಯಮಂತ್ರಿಯಾಗಿ ಮೇ 23ರಂದು ಪ್ರಮಾಣ ವಚನ ಸ್ವೀಕರಿಸಿದರು. ಕಾಂಗ್ರೆಸ್ ಮತ್ತು ಜೆಡಿಎಸ್‌ನ 17 ಶಾಸಕರು ಬಿಜೆಪಿಯತ್ತ ಪಕ್ಷಾಂತರಗೊಂಡ ಕಾರಣದಿಂದ ಬಿಕ್ಕಟ್ಟು ಉದ್ಭವಿಸಿ 2019ರ ಜುಲೈ 23ರಂದು ಮುಖ್ಯಮಂತ್ರಿ ಸ್ಥಾನದಿಂದ ಕುಮಾರಸ್ವಾಮಿ ಅನಿವಾರ್ಯವಾಗಿ ನಿರ್ಗಮಿಸಿದರು. ಬದಲಾದ ರಾಜಕೀಯ ಸನ್ನಿವೇಶದಲ್ಲಿ ಬಿಜೆಪಿ ಪಕ್ಷದ ಜೊತೆ ಮೈತ್ರಿ ಮಾಡಿಕೊಂಡು ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಸ್ವತಃ ತಾವೇ ಅಭ್ಯರ್ಥಿಯಾಗಿ ಸ್ಪರ್ಧಿಸಿ 8,51,881 ಮತಗಳನ್ನು ಪಡೆದು 2,84,620 ಮತಗಳ ದಾಖಲಾರ್ಹ ಅಂತರದ ಗೆಲುವು ಗಳಿಸಿದರು. 3ನೇ ಬಾರಿಗೆ ಲೋಕಸಭೆ ಪ್ರವೇಶಿಸಿದ ಕುಮಾರಸ್ವಾಮಿ, ನರೇಂದ್ರ ಮೋದಿಯವರ ಸಂಪುಟದಲ್ಲಿ ಕೇಂದ್ರ ಸಚಿವ ಸ್ಥಾನ ಪಡೆದಿದ್ದಾರೆ.



ಬನ್ನೂರು ಕೆ.ರಾಜು
ಸಾಹಿತಿ–ಪತ್ರಕರ್ತ
ಮೊ: 94815 33167

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಸಂಗೀತ ಕಲಿಯಲು ಕರೋಕೆ ಸರಳ ಮಾಧ್ಯಮ

ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷ ನಾಗರಾಜ್ ಜೋಯಿಸ್



ಮೈಸೂರಿನ ಪುರಭವನದಲ್ಲಿ ಕರ್ನಾಟಕ ಸಾಂಸ್ಕೃತಿಕ ಹಾಗೂ ಸಾಹಿತ್ಯ ಪರಿಷತ್ ವತಿಯಿಂದ ಏರ್ಪಡಿಸಿದ್ದ ಸ್ವರ ಸಂಭ್ರಮ ಕರೋಕೆ ಗಾಯನ ಕಾರ್ಯಕ್ರಮವನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷ ಡಾ.ನಟರಾಜ್ ಜೋಯಿಸ್ ಉದ್ಘಾಟಿಸಿದರು.

ಮೈಸೂರು: ಸಂಗೀತ ಕಲಿಯಲು ಕರೋಕೆ ಅತಿ ಸರಳ ಮಾಧ್ಯಮವಾಗಿದೆ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷ ಡಾ ನಟರಾಜ್ ಜೋಯಿಸ್ ತಿಳಿಸಿದ್ದಾರೆ.

ಮೈಸೂರಿನ ಪುರಭವನದಲ್ಲಿ ಕರ್ನಾಟಕ ಸಾಂಸ್ಕೃತಿಕ ಹಾಗೂ ಸಾಹಿತ್ಯ ಪರಿಷತ್ ವತಿಯಿಂದ ಏರ್ಪಡಿಸಿದ್ದ ಸ್ವರ ಸಂಭ್ರಮ ಕರೋಕೆ ಗಾಯನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿಯೊಬ್ಬರೂ ಸಂಗೀತಪ್ರಿಯನಾಗಿರುತ್ತಾರೆ. ಆದರೆ, ಎಲ್ಲರಿಗೂ ಅವಕಾಶಗಳು ಸಿಗುವುದಿಲ್ಲ. ಸಮಯವೂ ಸಿಗುವುದಿಲ್ಲ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಕರೋಕೆ ಎಲ್ಲಾ ಅನುಕೂಲಕರ ಮಾಧ್ಯಮವಾಗಿ ಹೊರಹೊಮ್ಮಿದೆ. ಇತ್ತೀಚಿನ ದಿನಗಳಲ್ಲಿ ಕರೋಕೆ ಹೆಚ್ಚು ಪ್ರಚಲಿತವಾಗುತ್ತಿದೆ. ವೃತ್ತಿಪರರು, ಹವ್ಯಾಸಿ ಸಂಗೀತಗಾರರು ತಮ್ಮ ವೃತ್ತಿಯ ಜೊತೆಗೆ ಕರೋಕೆ ಮಾಧ್ಯಮವನ್ನು ಉಪಯೋಗಿಸಿಕೊಂಡು ಸಂಗೀತದಲ್ಲಿ ತಲ್ಲೀನರಾಗಿದ್ದಾರೆ' ಹೇಳಿದರು.

ಮನೋ ವಿಜ್ಞಾನಿ ಡಾ.ರೇಖಾ ಮಾತನಾಡಿ, ಸಂಗೀತಕ್ಕೆ ಎಲ್ಲರ ಮನಸ್ಸನ್ನು ಅರಳಿಸುವ ಶಕ್ತಿ ಹೊಂದಿದೆ. ಕೆಲಸ ಮಾಡಿ ದಣಿದಾಗ ಸಂಗೀತ ಆಲಿಸಿದರೆ, ದೈಹಿಕವಾಗಿ ಮತ್ತು ಮಾನಸಿಕವಾಗಿ ಉಲ್ಲಾಸ ಉಂಟಾಗಲಿದೆ. ಹಿಂದಿನ ಕಾಲದ ಜನರು ಹೆಚ್ಚಿನ ಸಮಯವನ್ನು ಇದಕ್ಕೆ ಮೀಸಲಿಡುತ್ತಿದ್ದ ಕಾರಣ ದೈಹಿಕ ಶ್ರಮ ಗೊತ್ತಾಗುತ್ತಿರಲಿಲ್ಲ ಎಂದರು. ಕರೋಕೆ ಗಾಯನ ಕಾರ್ಯಕ್ರಮದಲ್ಲಿ ಜಿಲ್ಲೆಯ ವಿವಿಧ ಭಾಗದಿಂದ 150ಕ್ಕೂ ಹೆಚ್ಚು ಗಾಯಕರು ಆಗಮಿಸಿ ವಿವಿಧ ಚಿತ್ರಗೀತೆಗಳನ್ನು ಹಾಡಿದರು.

ಈ ಸಂದರ್ಭದಲ್ಲಿ ಕಲಾವಿದರು ಹಾಗೂ ಸಮಾಜ ಸೇವಕರಾದ ಭರತ್ ನಾಯಕ್, ಜಾಯ್, ಸಮಂತ, ಸೈಯದ್ ಗೌಸ್, ಸಚಿನ್ ಎನ್.ವಿ.ಎಸ್, ಕರ್ನಾಟಕ ಸಾಂಸ್ಕೃತಿಕ ಹಾಗೂ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷರಾದ ಕಸ್ತೂರಿ ಚಂದ್ರು, ಕೊಡಗು ಜಿಲ್ಲಾಧ್ಯಕ್ಷರಾದ ಡಾ.ನಯನ ಹರಿಶ್ಚಂದ್ರ, ಮೈಸೂರು ನಗರ ಅಧ್ಯಕ್ಷರಾದ ಡಾ. ಮೌಲ್ಯ ಜೈ ಕುಮಾರ್, ಸಂಸ್ಥಾಪಕ ಕಾರ್ಯದರ್ಶಿ ಡಾ.ತೇಜಸ್ ಪೃಥ್ವಿರಾಜ್, ಜಿಲ್ಲಾಧ್ಯಕ್ಷರಾದ ಅಮೀನಾ ಬೇಗಮ್, ನಟರಾಜ್ ಎಚ್.ಪಿ., ಜಿಲ್ಲಾ ಕಾರ್ಯದರ್ಶಿ ಚೆಲುವರಾಜ್ ಇನ್ನಿತರರು ಹಾಜರಿದ್ದರು.

ಕಾನೂನು ಅರಿವು-ನೆರವು ಕಾರ್ಯಕ್ರಮ...



ಮೈಸೂರಿನ ಪುರಭವನದಲ್ಲಿ ಮಾನವ ಹಕ್ಕುಗಳ ಸೇವಾ ಸಮಿತಿ ಆಯೋಜಿಸಿದ್ದ ಕಾನೂನು ಅರಿವು-ನೆರವು ಕಾರ್ಯಕ್ರಮವನ್ನು ಮಂಡ್ಯದ ಮೇಲುಕೋಟೆಯ ವಂಗೀಪುರ ನಂಬಿಮಠದ ಶ್ರೀ ಇಳೈಆಳ್ವಾರ್ ಸ್ವಾಮೀಜಿ ಉದ್ಘಾಟಿಸಿದರು.

ಕೆ.ಆರ್.ಆಸ್ಪತ್ರೆ ಹಳೇ ಜಯದೇವ ಕಟ್ಟಡದ ಎಂಐಸಿಯು ಸೀಲಿಂಗ್ ಕುಸಿತ

ಮೈಸೂರು, ಡಿ.15(ಎಂಕೆ)- ಮೈಸೂರಿನ ದೊಡ್ಡಾಸ್ಪತ್ರೆ ಎಂದೇ ಕರೆಯಲ್ಪಡುವ ಕೆ.ಆರ್.ಆಸ್ಪತ್ರೆಯ ಹಳೇ ಜಯದೇವ ಕಟ್ಟಡದಲ್ಲಿರುವ ವೈದ್ಯಕೀಯ ತೀವ್ರ ನಿಗಾ ಘಟಕ(ಎಂಐಸಿಯು)ದ ಸೀಲಿಂಗ್ ಕುಸಿದು ಬಿದ್ದು ಆತಂಕ ಸೃಷ್ಟಿಸಿದೆ.

ಮೈಸೂರಿನ ಪಾರಂಪರಿಕ ಕಟ್ಟಡಗಳಲ್ಲಿ ಒಂದಾಗಿರುವ ಕೆ.ಆರ್.ಆಸ್ಪತ್ರೆಯ ನವೀಕರಣ ಕಾರ್ಯ ಒಂದು ಕಡೆ ನಡೆಯುತ್ತಿದ್ದರೆ, ಮತ್ತೊಂದೆಡೆ ಕರ್ತವ್ಯ ನಿರತ ವೈದ್ಯಕೀಯ ಸಿಬ್ಬಂದಿಯಲ್ಲಿ ಯಾವಾಗ ಎಲ್ಲಿ ಸೀಲಿಂಗ್ ಕುಸಿದು ಬೀಳುವುದೋ ಎಂಬ ಆತಂಕ ಎದುರಾಗಿದೆ.

ಹಳೇ ಜಯದೇವ ಆಸ್ಪತ್ರೆ ಕಟ್ಟಡದ ಎಂಐಸಿಯು ಘಟಕ ಹೊರಗೆ ಮತ್ತು ವಾರ್ಡ್‌ನ ಒಳಗೂ ಸೀಲಿಂಗ್ ಕುಸಿದಿದ್ದು, ಸ್ವಲ್ಪದಲ್ಲೇ ಚಿಕಿತ್ಸೆ ಪಡೆಯುತ್ತಿದ್ದ ರೋಗಿಯೊಬ್ಬರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಎರಡು ದಿನದ ಹಿಂದೆ ಘಟಕ ಹೊರಗೆ ಕುಸಿದರೆ, ನಿನ್ನೆ ರಾತ್ರಿ ವಾರ್ಡ್ ಒಳಗೆ ಸೀಲಿಂಗ್ ಕುಸಿದಿದೆ. ಎಂಐಸಿಯು ಘಟಕದ ಹೊರಗೆ ದೊಡ್ಡಮಟ್ಟದಲ್ಲಿ ಸೀಲಿಂಗ್ ಕುಸಿದಿದ್ದು, ಅದೃಷ್ಟವಶಾತ್ ರಾತ್ರಿ ವೇಳೆಯಾಗಿದ್ದರಿಂದ ಯಾವುದೇ ಪ್ರಾಣಹಾನಿಯಾಗಿಲ್ಲ. ಆದರೆ, ಸೀಲಿಂಗ್ ಕುಸಿದು ಬಿದ್ದ ರಭಸಕ್ಕೆ ಕರ್ತವ್ಯ ನಿರ್ವಹಿಸುತ್ತಿದ್ದ ವೈದ್ಯಕೀಯ ಸಿಬ್ಬಂದಿ ಮತ್ತು ರೋಗಿಗಳು ಗಾಬರಿಯಾಗಿದ್ದು, ಆತಂಕ ಸೃಷ್ಟಿಯಾಗಿದೆ.



ಕೆ.ಆರ್.ಆಸ್ಪತ್ರೆ ಹಳೇ ಜಯದೇವ ಕಟ್ಟಡದ ಎಂಐಸಿಯು ಘಟಕದಲ್ಲಿ ಸೀಲಿಂಗ್ ಕುಸಿದಿರುವುದು.

ಭಯದ ಆಸ್ಪತ್ರೆ ಮೈಸೂರು ಸಂಸ್ಥಾನದ ಕೊಡುಗೆಯಾದ ಕೆ.ಆರ್.ಆಸ್ಪತ್ರೆಯಲ್ಲಿ ಅಭಯದ ಬದಲು ಭಯ ಹೆಚ್ಚಾಗುತ್ತಿದೆ. ಕಾಂಕ್ರೀಟ್ ರಾಡ್‌ಗಳು ಕಾಣುವಂತೆ ಸೀಲಿಂಗ್ ಕುಸಿದಿದೆ. ಈ ಹಿಂದೆ ಕುಸಿದಿರುವ ಜಾಗಕ್ಕೆ ಬಣ್ಣ ಬಳಿದಿದ್ದಾರೆಯೇ ಹೊರತು ಸರಿಪಡಿಸುವ ಕೆಲಸ ಮಾಡಿಲ್ಲ. ವಾರ್ಡ್‌ನ ಒಳಗೂ ಸೀಲಿಂಗ್ ಕುಸಿಯುತ್ತಿದ್ದು, ಜೀವ ಉಳಿಸಿಕೊಳ್ಳಲು ಬಂದಿರುವ ರೋಗಿಗಳಲ್ಲಿ ಜೀವ ಭಯ ಇನ್ನೂ ಹೆಚ್ಚಾಗಿದೆ ಎಂದು ಆಸ್ಪತ್ರೆಯ ಕೆಲ ಸಿಬ್ಬಂದಿ 'ಮೈಸೂರು ಮಿತ್ರ'ನಲ್ಲಿ ಅಳಲು ವ್ಯಕ್ತಪಡಿಸಿದರು.

ಕೆ.ಆರ್.ಕ್ಷೇತ್ರದ ನಾನಾ ಬೂತ್‌ಗಳಿಗೆ ಬಿಜೆಪಿ ಅಧ್ಯಕ್ಷರ ಆಯ್ಕೆ



ಮೈಸೂರಿನ ಕೃಷ್ಣರಾಜ ಕ್ಷೇತ್ರದ ವಾರ್ಡ್ ನಂ.57 ಕುವೆಂಪುನಗರ ವ್ಯಾಪ್ತಿಯ ಬೂತ್‌ಗಳಿಗೆ ಬಿಜೆಪಿ ಅಧ್ಯಕ್ಷರನ್ನು ಆಯ್ಕೆ ಮಾಡಲಾಯಿತು. ಸಭೆಯಲ್ಲಿ ಕ್ಷೇತ್ರದ ಅಧ್ಯಕ್ಷ ಯು.ಜಿ.ಗೋಪಾಲ್‌ರಾಜೇ ಅರಸ್, ಪ್ರಧಾನ ಕಾರ್ಯದರ್ಶಿ ಜಯರಾಮ್, ಮೈಸೂರು ನಗರ ಉಪಾಧ್ಯಕ್ಷ ವಿಶ್ವೇಶ್ವರಯ್ಯ, ಮೈಸೂರು ನಗರಪಾಲಿಕೆ ಮಾಜಿ ಸದಸ್ಯ ಕೃಷ್ಣ, ಮೈಸೂರು ನಗರ ಒಬಿಸಿ ಮೋರ್ಚಾ ಉಪಾಧ್ಯಕ್ಷ ಹರೀಶ್ ಅಂಕಿತ್, 57ನೇ ವಾರ್ಡ್ ಅಧ್ಯಕ್ಷ ರವಿಕುಮಾರ್, ಮುಖಂಡರಾದ ವೆಂಕಟೇಶ್ ದಾಸ್, ರಾಜೇಶ್ ಜಾದವ್, ನಾಗಣ್ಣ, ಡಿಪೋ ರವಿ, ಮಂಜುನಾಥ್, ಚಲುವ ಇನ್ನಿತರರಿದ್ದರು.

ಸಿದ್ದಮ್ಮ ನಿಧನ



ಶ್ರೀರಂಗಪಟ್ಟಣ, ಡಿ.15- ತಾಲೂಕಿನ ಚಿಕ್ಕಅಂಕನಹಳ್ಳಿ ಗ್ರಾಮದ ನಿವಾಸಿ ಸಿದ್ದಮ್ಮ(80) ಭಾನುವಾರ ನಿಧನರಾದರು.

ಇವರು ಪುತ್ರಿಯರಾದ ಜಯಮ್ಮ, ಚಿಕ್ಕತಾಯಮ್ಮ, ಪುತ್ರರಾದ ರಾಮೇಗೌಡ, ಸ್ವಾಮಿಗೌಡ, ವೆಂಕಟೇಗೌಡ ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಇಂದು ಸಂಜೆ ತಮ್ಮ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಿದ್ದಮ್ಮ ಅವರ ನಿಧನಕ್ಕೆ ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ, ಸಾಹಿತಿ ಶಂಕರ್ ಸೇರಿದಂತೆ ಹಲವು ಗಣ್ಯರು ಸಂತಾಪ ಸೂಚಿಸಿದ್ದಾರೆ.


ಮನುಷ್ಯನ ದೇಹಕ್ಕೆ ಚರ್ಮ ರಕ್ಷಣೆ ಬಹಳ ಮುಖ್ಯ

ಡಾ.ಹನುಮಂತಪ್ಪನವರ 'ಚರ್ಮದ ಖಾಯಿಲೆಗಳು ಮತ್ತು ಸಂರಕ್ಷಣೆ' ಕೃತಿ ಲೋಕಾರ್ಪಣೆಯಲ್ಲಿ ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ ಸಲಹೆ

ಮೈಸೂರು, ಡಿ.15(ಜಿಎ)-ಮನುಷ್ಯನ ದೇಹದ ಮೇಲೆ ಚರ್ಮವಿಲ್ಲದಿದ್ದರೆ ಕೇವಲ ಮೂಳೆ ಮಾಂಸದ ತಡಿಕೆಯಾಗುತ್ತಾನೆ. ಈ ಹಿನ್ನೆಲೆಯಲ್ಲಿ ಚರ್ಮ ರಕ್ಷಣೆ ಬಹಳ ಮುಖ್ಯ ಎಂದು ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ತಿಳಿಸಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಐಡಿಯಲ್ ಜಾವಾ ರೋಟರಿ ಶಾಲೆ ಆವರಣದಲ್ಲಿ ಚರ್ಮರೋಗ ತಜ್ಞ, ವೈದ್ಯರತ್ನ ಡಾ.ಹೆಚ್.ಹನುಮಂತಪ್ಪ ಅವರ 'ಚರ್ಮದ ಖಾಯಿಲೆಗಳು ಮತ್ತು ಸಂರಕ್ಷಣೆ' ಕೃತಿ ಲೋಕಾರ್ಪಣೆ ಕಾರ್ಯಕ್ರಮ ಉದ್ಘಾಟಿಸಿ, ನಂತರ ಅವರು ಮಾತನಾಡಿದರು.

ಡಾ.ಹೆಚ್.ಹನುಮಂತಪ್ಪ ಅವರು ತಾವು ವಿದ್ಯಾಭ್ಯಾಸ ಮಾಡಿದ ಕಾಲೇಜಿನ ಡೀನ್ ಆಗಿ ಕಾರ್ಯನಿರ್ವಹಿಸಿದ್ದಾರೆ. ಈ ಪುಸ್ತಕದಲ್ಲಿ ಚರ್ಮ ಕಾಯಿಲೆ ಬಗ್ಗೆ ಸಾಕಷ್ಟು ಮಹಿತಿಯನ್ನು ಒದಗಿಸಿದ್ದಾರೆ. ಸಮಾಜಮುಖಿ ಕೆಲಸ ಮಾಡುತ್ತಿದ್ದಾರೆ. ಪುಸ್ತಕಗಳ ಮೂಲಕ ಸೇವೆ ಸಲ್ಲಿಸಿದ್ದು, ಈ ಸೇವೆ ನಿರಂತರವಾಗಿ ನಡೆಯಲಿ ಎಂದು ತಿಳಿಸಿದರು.



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಐಡಿಯಲ್ ಜಾವಾ ರೋಟರಿ ಶಾಲೆ ಆವರಣದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನಿವೃತ್ತ ಪೊಲೀಸ್ ಅಧಿಕಾರಿ ಜೆ.ಬಿ.ರಂಗಸ್ವಾಮಿ, ಚರ್ಮರೋಗ ತಜ್ಞ, ವೈದ್ಯರತ್ನ ಡಾ.ಹೆಚ್.ಹನುಮಂತಪ್ಪ ಅವರ 'ಚರ್ಮದ ಖಾಯಿಲೆಗಳು ಮತ್ತು ಸಂರಕ್ಷಣೆ' ಕೃತಿ ಲೋಕಾರ್ಪಣೆಗೊಳಿಸಿದರು.

ಚರ್ಮ ಮನುಷ್ಯನಿಗೆ ಬಹು ಮುಖ್ಯವಾಗಿದ್ದು, ಚರ್ಮ ತೆಗೆದರೆ ಮೂಳೆ ಮಾಂಸದ ತಡಿಕೆ. ಚರ್ಮವು ದೇಹವನ್ನು ರಕ್ಷಣೆ ಮಾಡುತ್ತಿದೆ. ಚರ್ಮ ಇಲ್ಲ ಎಂದರೆ ಹೇಗಿರುತ್ತಿತ್ತು ಎಂಬುದನ್ನ ಊಹೆ ಮಾಡಿಕೊಳ್ಳುವುದು ಅಸಾಧ್ಯ ಎಂದರು.

ಅಂದ ಚಂದವಾಗಿ ಕಾಣಲು ಚರ್ಮ ಮುಖ್ಯ ಕಾರಣ. ದೇಹದ ಬಣ್ಣ ಕಪ್ಪು, ಬಿಳಿ ಇರುವುದು ಸೃಷ್ಟಿ ನಿಯಮ. ಬಣ್ಣದಲ್ಲಿ ಏನೂ ಇಲ್ಲ. ಬಾಳೆ ಹಣ್ಣಿಗೆ ಸಿಪ್ಪೆ ಹೇಗೆ ರಕ್ಷಣೆ ನೀಡುತ್ತದೆ ಹಾಗೇ ಚರ್ಮ ಸಾಕಷ್ಟು ರಕ್ಷಣೆ ಮಾಡುತ್ತದೆ. ಚರ್ಮವೇ ಇಲ್ಲವಾದರೆ, ಸಾಕಷ್ಟು ಆರೋಗ್ಯ ಸಮಸ್ಯೆ ಎದುರಾಗುತ್ತದೆ. ಆದ್ದರಿಂದ ನೀರು ಚೆನ್ನಾಗಿ ಕುಡಿಯಬೇಕು. ಇದರಿಂದ ಚರ್ಮ ಸಿಕ್ ಆಗುವುದಿಲ್ಲ. ನೀರು ಕುಡಿಯದಿದ್ದರೆ ಕಲೆಗಳು ಹೆಚ್ಚಾಗುತ್ತದೆ. ಆದ್ದರಿಂದ ಉತ್ತಮ ಹವ್ಯಾಸಗಳನ್ನು ರೂಢಿಸಿಕೊಳ್ಳಿ ಎಂದು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ವಿತರಿಸಲಾಯಿತು. ಈ ವೇಳೆ ನಿವೃತ್ತ ಪೊಲೀಸ್ ಅಧಿಕಾರಿ ಜೆ.ಬಿ.ರಂಗಸ್ವಾಮಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮಾಜಿ ನಿರ್ದೇಶಕ ಡಾ.ಜಿ.ಎಂ.ವಾಮದೇವ, ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಚುಟುಕು ಸಾಹಿತ್ಯ ಪರಿಷತ್ ಸಂಸ್ಥಾಪಕ ಡಾ.ಎಂ.ಜಿ.ಆರ್.ಅರಸ್, ಕೃತಿ ಲೇಖಕ ಡಾ.ಹೆಚ್.ಹನುಮಂತಪ್ಪ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ವಿಶೇಷಚೇತನರಿಗೆ ಸರ್ಕಾರ ಹೆಚ್ಚಿನ ಸೌಲಭ್ಯ ಕಲ್ಪಿಸಲಿ

ಮೈಸೂರು ವಕೀಲರ ಸಂಘದ ಮಾಜಿ ಕಾರ್ಯದರ್ಶಿ ಎಸ್.ಉಮೇಶ್ ಅಭಿಮತ



ಮೈಸೂರಿನ ನಮನ ಕಲಾ ಮಂಟಪದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ವಿಶೇಷಚೇತನರಾದ ಮೂರ್ತಿ ಕಳಲೆ ಹಾಗೂ ಕೆ.ಎಂ.ಮಲ್ಲೇಶ್ ಕೆರೆಹುಂಡಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು, ಡಿ.15- ವಿಶೇಷಚೇತನರಿಗೆ ಸರ್ಕಾರ ಇನ್ನೂ ಹೆಚ್ಚಿನ ಸೌಲಭ್ಯ ಕಲ್ಪಿಸಬೇಕು ಎಂದು ಮೈಸೂರು ವಕೀಲರ ಸಂಘದ ಮಾಜಿ ಕಾರ್ಯದರ್ಶಿ ಎಸ್.ಉಮೇಶ್ ಆಗ್ರಹಿಸಿದರು.

ಅಭಿರುಚಿ ಬಳಗ, ಎನ್.ವಿ.ರಮೇಶ್ ಕಲಾ ಬಳಗ, ಆಸಕ್ತಿ ಪ್ರಕಾಶನ, ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತಿನ ವಿಭಾಗವು ಕೃಷ್ಣಮೂರ್ತಿಪುರಂನ ನಮನ ಕಲಾ ಮಂಟಪದಲ್ಲಿ ಭಾನುವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ವಿಶೇಷಚೇತನರಾದ ಆರೋಗ್ಯ ಇಲಾಖೆಯ ಮೂರ್ತಿ ಕಳಲೆ ಹಾಗೂ ನವಿಲೂರು ಪಂಚಾಯ್ತಿ ವಿಆರ್‌ಡಬ್ಲ್ಯೂ ಕೆ.ಎಂ. ಮಲ್ಲೇಶ್ ಕೆರೆಹುಂಡಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

ವಿಶೇಷಚೇತನರು ತುಂಬಾ ಕಷ್ಟದಲ್ಲಿ ಜೀವನಸಾಗಿಸುತ್ತಾರೆ. ಕೆಲವರು ಅಂಗವಿಕಲತೆ ಇದ್ದರೂ ಸ್ವಾವಲಂಬಿಗಳಾಗಿರಲು ಬಯಸಿ ಕೆಲಸ ಮಾಡುತ್ತಾರೆ. ಅಂಥವರ ನೆರವಿಗೆ ಸಮಾಜ ನಿಲ್ಲಬೇಕು ಎಂದರು.

ಮುಂದಿನ ವರ್ಷದಿಂದ ಹತ್ತು ಮಂದಿ ವಿಶೇಷಚೇತನ ಸಾಧಕರನ್ನು ಗುರುತಿಸಿ, ಪ್ರಶಸ್ತಿ ನೀಡಲಾಗುವುದು ಎಂದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ವಿಶೇಷ ಚೇತನರಿಗೆ ಅನುಕಂಪದ ಬದಲು ಅವಕಾಶ ನೀಡಬೇಕು ಎಂದರು.

ಕೆಎಸ್‌ಆರ್‌ಟಿಸಿಯ ನಿವೃತ್ತ ನೌಕರ ಡಿ.ಪುಟ್ಟಸ್ವಾಮಿ ಪ್ರಾಸ್ತಾವಿಕವಾಗಿ ಮಾತನಾಡಿ, ನಾನೇ ಸ್ವತಃ ವಿಶೇಷಚೇತನ. ನಾನು ನೌಕರಿಯಲ್ಲಿದ್ದು, ಸ್ವಯಂ ನಿವೃತ್ತಿ ಪಡೆದೆ. ನನಗಿಂತ ಅನುಕೂಲ ಇಲ್ಲದ ವಿಶೇಷಚೇತರನ್ನು ಪ್ರತಿವರ್ಷ ಗುರುತಿಸಿ, ವಿಶ್ವ ವಿಶೇಷಚೇತನ ದಿನದಂದು ಮನೆ ಬಾಗಿಲಿಗೆ ಹೋಗಿ ಸನ್ಮಾನಿಸುತ್ತಾ ಬರುತ್ತಿದ್ದೇನೆ ಎಂದು ಹೇಳಿದರು.

ನಿವೃತ್ತ ತಹಸೀಲ್ದಾರ್ ಸಾಹಿತಿ ಡಾ.ವಿ.ರಂಗನಾಥ್, ನಿವೃತ್ತ ಡಿಎಚ್‌ಒ, ಸಾಹಿತಿ ಡಾ.ಎಚ್.ಎಸ್.ರುದ್ರೇಶ್, ಅಭಿರುಚಿ ಬಳಗದ ಸಂಸ್ಥಾಪಕ ಎನ್.ವಿ.ರಮೇಶ್, ಸುಮಾ ರಮೇಶ್, ಜಿಲ್ಲಾ ಕಸಾಪ ಕಾರ್ಯದರ್ಶಿ ಮ.ನ.ಲತಾ ಮೋಹನ್, ಶಮಾ, ರಂಗನಾಥ್, ವಿಜಯಕುಮಾರ್, ಪರಮೇಶ್ ಉತ್ತನಹಳ್ಳಿ, ಶಿವಣ್ಣ ಮೊದಲಾದವರು ಇದ್ದರು. ಪ್ರಿಯಾ ನಿರೂಪಿಸಿದರು. ಭಾನುಮತಿ ತಂಡದವರು ಪ್ರಾರ್ಥಿಸಿದರು.

ಇದಕ್ಕೂ ಮೊದಲು ಎನ್.ವಿ.ರಮೇಶ್ ಅವರ ಸಮಗ್ರ ಪ್ರವಾಸ ಸಾಹಿತ್ಯ ಪುಸ್ತಕವನ್ನು ಆಧ್ಯಾತ್ಮಿಕ ಚಿಂತಕಿ ಸುಶೀಲಾ ಶ್ಯಾಮ ಸುಂದರ್ ಬಿಡುಗಡೆ ಮಾಡಿದರು. ಸಾಹಿತಿ ಗುರುದೇವಿ ಹುಲೆಪ್ಪನವರ ಮಠ ಮುಖ್ಯ ಅತಿಥಿಯಾಗಿದ್ದರು. ಜಿಲ್ಲಾ ಕಸಾಪ ಕಾರ್ಯದರ್ಶಿ ಮ.ನ. ಲತಾ ಮೋಹನ್ ಅಧ್ಯಕ್ಷತೆ ವಹಿಸಿದ್ದರು. ಉಷಾ ನರಸಿಂಹನ್, ಪದ್ಮಾ ಆನಂದ್ ಕೃತಿ ಪರಿಚಯಿಸಿದರು. ನಾನೇಕೆ ಬರೆಯುತ್ತೇನೆ ಹಾಗೂ ನಾನೇಕೆ ಬರೆಯುವುದಿಲ್ಲ ವಿಷಯ ಕುರಿತು ವಿಚಾರ ಸಂಕಿರಣ ನಡೆಯಿತು. ಸುನೀತಾ ಬ.ಸೋಲಾಪುರೇ, ಗುರುದೇವಿ ಹುಲೆಪ್ಪನವರಮಠ, ಕೃಷ್ಣಮೂರ್ತಿ ಕುಲಕರ್ಣಿ, ಎಚ್.ಎಸ್.ರುದ್ರೇಶ್, ಹಿರೇಮಗಳೂರು ಪುಟ್ಟಸ್ವಾಮಿ, ರೂಪಾರಾಣಿ ಪಟಗಾರ್, ಕಮಲಾ, ರೇಖಾ ಕಂಪ್ಲಿ, ಚಂದ್ರಶೇಖರ, ಪ್ರತಿಮಾ, ರಾಜೇಂದ್ರಪ್ರಸಾದ್, ಉಷಾ ನರಸಿಂಹನ್, ಲಕ್ಷ್ಮೀ, ಸುಮತಿ ಸುಬ್ರಹ್ಮಣ್ಯ, ಶೋಭಾ, ಸುಜಾತಾ ರವೀಶ್, ಮೀನಾಕ್ಷಿ, ನಾರಾಯಣರಾವ್, ಪದ್ಮಾ ಆನಂದ್, ಇಂದಿರಾ ಪಾಟೀಲ್, ಕೆರೋಡಿ ಲೋಲಾಕ್ಷಿ, ಆರ್.ಮೀನಾಕ್ಷಿ, ಪುಟ್ಟಸ್ವಾಮಿ, ಸುಶೀಲಾ ಶ್ಯಾಮಸುಂದರ್, ಶಮಾ ಅಹಮ್ಮದ್ ಭಾಗವಹಿಸಿದ್ದರು.

'ಕುಹೂ.. ಕುಹೂ... ಮೈಸೂರು ಕೋಗಿಲೆ' ಗ್ರ್ಯಾಂಡ್ ಫಿನಾಲೆ

ಮೈಸೂರು, ಡಿ.15(ಎಂಕೆ)- ಕರ್ನಾಟಕ ಮುಕ್ತ ವಿವಿ ಘಟಿಕೋತ್ಸವ ಭವನದಲ್ಲಿ ಕುಹೂ... ಕುಹೂ.. ಕರ್ನಾಟಕ ವತಿಯಿಂದ ಆಯೋಜಿಸಿದ್ದ 'ಕುಹೂ.. ಕುಹೂ... ಮೈಸೂರು ಕೋಗಿಲೆ' ಗ್ರ್ಯಾಂಡ್ ಫಿನಾಲೆ ಭಾನುವಾರ ನಡೆಯಿತು.

ಕಾರ್ಯಕ್ರಮವನ್ನು ಖ್ಯಾತ ಸಂಗೀತ ನಿರ್ದೇಶಕ ಗುರುಕಿರಣ್ ಉದ್ಘಾಟಿಸಿದರು. ನಂತರ ವಯಸ್ಸಿಗೆ ಅನುಗುಣವಾಗಿ ವಿವಿಧ ವಿಭಾಗಗಳಲ್ಲಿ ನಡೆದ ಗ್ರ್ಯಾಂಡ್ ಫಿನಾಲೆಯಲ್ಲಿ ಭಾಗವಹಿಸಿದ್ದ 30 ಮಂದಿ ಸ್ಪರ್ಧಿಗಳ ಹಾಡುಗಳನ್ನು ಆಲಿಸಿ, ಅಂತಿಮವಾಗಿ ವಿಜೇತರನ್ನು ಘೋಷಿಸಲಾಯಿತು.

8 ವರ್ಷದೊಳಗಿನ ವಿಭಾಗದಲ್ಲಿ ಚಾರ್ಲಿ ಸಿನಿಮಾ ಹಾಡು ಹಾಡಿದ ಜಸ್ಮಿತಾ ಪ್ರಥಮ ಹಾಗೂ ಚಲಿಸುವ ಮೋಡಗಳು ಚಿತ್ರದ 'ಕಾಣದಂತೆ ಮಾಯವಾದನು' ಹಾಡನ್ನು ಹಾಡಿದ ದಿಶೀತಾ ದ್ವಿತೀಯ ಸ್ಥಾನ ಗೆದ್ದರೆ, 16 ವರ್ಷದೊಳಗಿನ ವಿಭಾಗದಲ್ಲಿ ತನ್ಮಯಿ ಪ್ರಥಮ, ಮಯೂರ ದ್ವಿತೀಯ, ಜೆರುಷಾ ತೃತೀಯ ಹಾಗೂ ಆದಿಶ್ರೀ ನಾಲ್ಕನೇ ಸ್ಥಾನ ಪಡೆದರು.

25 ವರ್ಷದೊಳಗಿನ ವಿಭಾಗದಲ್ಲಿ ವಿದ್ಯಾ ಪ್ರಥಮ, ತನಿಷ್ಕ ದ್ವಿತೀಯ, ಸಿಂಚನಾ ತೃತೀಯ ಹಾಗೂ ಅದ್ವೈತ್ ನಾಲ್ಕನೇ ಸ್ಥಾನ ಪಡೆದರೆ, 25 ವರ್ಷ ಮೇಲ್ಪಟ್ಟವರ ವಿಭಾಗದಲ್ಲಿ ರಾಮ್‌ಚಂದ್ರ ಪ್ರಥಮ, ಆಕಾಶ್ ಪ್ಯಾಟ್ರಿಕ್ ದ್ವಿತೀಯ, ರಿಚರ್ಡ್ ತೃತೀಯ ಹಾಗೂ ಅದ್ಬುಲ್ ನಾಲ್ಕನೇ ಸ್ಥಾನ ಪಡೆದು ನೆರೆದಿದ್ದವರಿಗೆ ಸಂಗೀತದ ರಸದೌತಣ ಉಣಬಡಿಸಿದರು.

ಇದಕ್ಕೂ ಮುನ್ನ ಹಾಸ್ಯನಟ ಮಿಮಿಕ್ರಿ ದಯಾನಂದ್ ಮಾತನಾಡಿ, ಮೈಸೂರಿನ ಮಣ್ಣಿನ ಗುಣವೇ ವಿಶೇಷ. ಕಲಾವಿದರನ್ನು ಸೃಷ್ಟಿಸುವ ನೆಲ ಇದಾಗಿದ್ದು, ಇಲ್ಲಿ ಕಲೆ, ಸಾಹಿತ್ಯ, ಸಂಸ್ಕೃತಿಗೆ ಬರ ಎಂಬುದು ಬರುವುದಿಲ್ಲ ಎಂದು ಮೆಚ್ಚುಗೆ ಮಾತುಗಳನ್ನಾಡಿದರು. ಇದಕ್ಕೂ ಮುನ್ನ ಖ್ಯಾತ ನಟ ದಿವಂಗತ ಡಾ.ಪುನೀತ್ ರಾಜ್‌ಕುಮಾರ್ ಹಾಗೂ ನಟಿ ಅಪರ್ಣ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಸ್ಮರಿಸಲಾಯಿತು.

ಯೋಗನರಸಿಂಹಸ್ವಾಮಿ ದೇವಸ್ಥಾನದ ಮುಖ್ಯಸ್ಥ ಶ್ರೀನಿವಾಸ್, ಖ್ಯಾತ ಗಾಯಕಿ ಶಮಿತಾ ಮಲ್ನಾಡ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ನಗರ ಪಾಲಿಕೆ ಮಾಜಿ ಸದಸ್ಯರಾದ ಎಸ್‌ಬಿಎಂ ಮಂಜು, ಪ್ರೇಮಾ ಶಂಕರೇಗೌಡ, ಬಿಜೆಪಿ ಮಹಿಳಾ ಮುಖಂಡರಾದ ಹೇಮಾ ನಂದೀಶ್, ಕಾಂಗ್ರೆಸ್ ಮುಖಂಡ ಎಸ್.ಆರ್.ರವಿಕುಮಾರ್, ಜಯಕರ್ನಾಟಕ ಸಂಘಟನೆ ರಾಜ್ಯ ಸಂಘಟಕಿ ವಿಜಯ ಗೌಡ, ಸಮಾಜ ಸೇವಕರಾದ ಸಿ.ಜೆ. ಪಾಲಾಕ್ಷ ಗೌಡ, ರವಿ ರಾಜಕೀಯ, ಸಿ.ಎಸ್. ರಘು, ವಸಂತ ಮುನೀಶ್, ಕೆ.ಪಿ.ನಾಗಣ್ಣ, ದೀಪಕ್ ಗೌಡ, ನಿರೂಪಕಿ ದಿವ್ಯಾ ಆಲೂರು ಮತ್ತಿತರರಿದ್ದರು.



'ಕುಹೂ.. ಕುಹೂ... ಮೈಸೂರು ಕೋಗಿಲೆ' ಗ್ರ್ಯಾಂಡ್ ಫಿನಾಲೆಯನ್ನು ಖ್ಯಾತ ಸಂಗೀತ ನಿರ್ದೇಶಕ ಗುರುಕಿರಣ್ ಉದ್ಘಾಟಿಸಿದರು.

ಮತ್ತೆ ಡಿ.19ರಂದು 'ಸತ್ಯವನ್ನೇ ಹೇಳುತ್ತೇನೆ'

ಮೈಸೂರು, ಡಿ.15(ಎಂಕೆ)- ಮೈಸೂರು ರಂಗಾಯಣ ಮಾಜಿ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ರಚನೆ, ನಿರ್ದೇಶನದಲ್ಲಿ ಯಶಸ್ವಿ ಪ್ರದರ್ಶನ ಕಾಣುತ್ತಿರುವ 'ಸತ್ಯವನ್ನೇ ಹೇಳುತ್ತೇನೆ' ನಾಟಕ ಪ್ರೇಕ್ಷಕರ ಒತ್ತಾಯದ ಮೇರೆಗೆ ಡಿ.19 ರಂದು ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಪ್ರದರ್ಶನಗೊಳ್ಳಲಿದೆ.

ಭಾರಿ ಪ್ರಶಂಸೆಗೆ ಪಾತ್ರವಾಗಿರುವ 'ಸತ್ಯವನ್ನೇ ಹೇಳುತ್ತೇನೆ' ನಾಟಕವು 'ದಾವಣಗೆರೆ, ಚಿತ್ರದುರ್ಗ, ತುಮಕೂರು, ಬೆಂಗಳೂರು ನಂತರ ಮತ್ತೆ ಮೈಸೂರಿನಲ್ಲಿ ಪ್ರದರ್ಶನಗೊಳ್ಳಲಿದೆ. ಇದುವರೆಗೆ ನಡೆದಿರುವ ಎಲ್ಲಾ ಪ್ರದರ್ಶನಗಳು ಭರ್ತಿಯಾಗಿದ್ದು, ನಾಟಕ ವೀಕ್ಷಿಸಿದ ಹಲವರು ಸಾಮಾಜಿಕ ಜಾಲತಾಣಗಳಲ್ಲಿ ನಾಟಕ ಕುರಿತ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡಿದ್ದಾರೆ. ಬೆಂಗಳೂರಿನಲ್ಲಿ ನಾಟಕ ವೀಕ್ಷಣೆ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಪ್ರತಿಕ್ರಿಯೆ ನೀಡಿರುವ ಹಿಂದೂ ಜನಜಾಗೃತಿ ಸಮಿತಿ ರಾಜ್ಯ ವಕ್ತಾರ ಮೋಹನ್‌ಗೌಡ, 'ಸತ್ಯವನ್ನೇ ಹೇಳುತ್ತೇನೆ' ನಾಟಕವು ಭಾರತದ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಗಾಂಧೀಜಿ, ಸರ್ದಾರ್ ವಲ್ಲಭಭಾಯಿ ಪಟೇಲ್ ಮತ್ತು ನೆಹರು ಎಸಗಿರುವ ಪ್ರಮಾದಗಳು ಹಾಗೂ ಸುಭಾಷ್‌ಚಂದ್ರ ಬೋಸ್, ವೀರ ಸಾವರ್ಕರ್, ಡಾ.ಬಿ.ಆರ್.ಅಂಬೇಡ್ಕರ್ ಅವರ ರಾಷ್ಟ್ರಭಕ್ತಿಯನ್ನು ಅತ್ಯಂತ ಅರ್ಥಪೂರ್ಣವಾಗಿ ಪ್ರಸ್ತುತಪಡಿಸಿದೆ. ಈ ನಾಟಕವು ನಮ್ಮಲ್ಲಿ ರಾಷ್ಟ್ರಭಕ್ತಿಯನ್ನು ಉದ್ದೀಪನಗೊಳಿಸಲಿದೆ. ರಾಜ್ಯದೆಲ್ಲೆಡೆ ಈ ನಾಟಕ ಪ್ರದರ್ಶನವಾಗಬೇಕು. ಅಡ್ಡಂಡ ಕಾರ್ಯಪ್ಪ ಅವರ ಕಾರ್ಯ ಶ್ಲಾಘನೀಯವಾಗಿದ್ದು, ಅವರಿಗೆ ಬೆಂಬಲ ನೀಡಬೇಕು ಎಂದು ಪ್ರಶಂಸಿಸಿದ್ದಾರೆ.



'ಸತ್ಯವನ್ನೇ ಹೇಳುತ್ತೇನೆ' ನಾಟಕದ ದೃಶ್ಯ

ಇಂದು, ಡಿ.18ರಂದು ವಿದ್ಯುತ್ ವ್ಯತ್ಯಯ

ಮೈಸೂರು: ದೊಡ್ಡಕೆರೆ ಮೈದಾನ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಹೊಮ್ಮುವ ಜೆ.ಸಿ ಫೀಡರ್‌ನ ಲಲಿತಾದ್ರಿಪುರ ವ್ಯಾಪ್ತಿಯಲ್ಲಿ ಎ.ಬಿ.ಕೇಬಲ್ ಹಾಗೂ ಕವರ್ಡ್ ಕಂಡಕ್ಟರ್ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಲಲಿತಾದ್ರಿಪುರ ಲಲಿತಾದ್ರಿನಗರ ಬಡಾವಣೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಡಿಸೆಂಬರ್ 16 ಮತ್ತು 18ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6.00 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುವುದರಿಂದ ಸಾರ್ವಜನಿಕರು ಸಹಕರಿಸಬೇಕು ಎಂದು ನ.ರಾ.ಮೊಹಲ್ಲಾದ ಕಾರ್ಯ ಮತ್ತು ಪಾಲನೆ ವಿಭಾಗೀಯ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಚ್ಚಾಗುತ್ತಿದೆ ನಿರಾಭಿಮಾನಿ ಕನ್ನಡಿಗರ ಸಂಖ್ಯೆ; ಸಿಪಿಕೆ

ಮೈಸೂರು, ಡಿ.15(ಜಿಎ)-ಇತ್ತೀಚಿನ ದಿನಗಳಲ್ಲಿ ನಿರಾಭಿಮಾನಿ ಕನ್ನಡಿಗರ ಸಂಖ್ಯೆ ಹೆಚ್ಚುತ್ತಿದೆ ಎಂದು ಹಿರಿಯ ಸಾಹಿತಿ ಸಿ.ಪಿ.ಕೃಷ್ಣಕುಮಾರ್ ಇಂದಿಲ್ಲಿ ಬೇಸರ ವ್ಯಕ್ತಪಡಿಸಿದರು.

ಮೈಸೂರಿನ ರಿಂಗ್ ರಸ್ತೆಯಲ್ಲಿರುವ ಬಂಡಿಪಾಳ್ಯದ ಬಳಿ ಕರುನಾಡ ರಕ್ಷಣಾ ವೇದಿಕೆ ವತಿಯಿಂದ ಆಯೋಜಿಸಿದ್ದ 69ನೇ ಕನ್ನಡ ರಾಜ್ಯೋತ್ಸವ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರಿಗೆ ಸನ್ಮಾನ ಸಮಾರಂಭದಲ್ಲಿ ಮಾತನಾಡಿದ ಅವರು, ಕವಿರಾಜ ಮಾರ್ಗದಲ್ಲಿ ಕನ್ನಡಿಗರನ್ನು ಅಭಿಮಾನಿಗಳು ಎಂಬುದಾಗಿ ಉಲ್ಲೇಖಿಸಲಾಗಿದೆ. ಆದರೆ ಇವತ್ತಿನ ದಿನಮಾನಗಳಲ್ಲಿ ಕನ್ನಡಿಗ ನಿರಾಭಿಮಾನಿಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಕನ್ನಡ, ಇಂಗ್ಲಿಷ್ ಎರಡು ಬೆರೆತು ಕಂಗ್ಲಿಷ್‌ನಿಂದ ಇಂದು ವ್ಯವಸ್ಥೆ ಕಂಗಾಲಾಗಿದೆ ಎಂದರು.

ರಾಷ್ಟ್ರಕವಿ ಕುವೆಂಪು ಸರ್ವೋದಯಕ್ಕಾಗಿ ಕನ್ನಡ, ಅನ್ನಕ್ಕಾಗಿ ಕನ್ನಡ, ಸರ್ವರಿಗಾಗಿ ಕನ್ನಡ, ಬದುಕಿಗಾಗಿ, ಅವರ ಏಳಿಗೆಗಾಗಿ ಕನ್ನಡ, ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ. ಮಿಕ್ಕೆಲ್ಲವೂ ಅತಿಥಿಗಳು ಎಂಬುದಾಗಿ ತಿಳಿಸಿದ್ದಾರೆ. ಕನ್ನಡ ಭಾಷೆ ನಿತ್ಯೋತ್ಸವವಾಗಿರಬೇಕು. ವರ್ಷದ 365 ದಿನಗಳು ಕೂಡ ಕನ್ನಡ ಹಬ್ಬವನ್ನು ಆಚರಿಸುತ್ತಿರಲೇಬೇಕು. ಕೇವಲ ನವೆಂಬರ್ ತಿಂಗಳಿಗೆ ಮಾತ್ರ ಸೀಮಿತವಾಗಿರಬಾರದು ಎಂದು ಸಿಪಿಕೆ ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಕನ್ನಡ ಹೋರಾಟಗಾರ ಬಿ.ಎ.ಶಿವಶಂಕರ್, ಕರುನಾಡ ರಕ್ಷಣಾ ವೇದಿಕೆ ಗೌರವಾಧ್ಯಕ್ಷ ಎಂ.ರಾಮೇಗೌಡ, ಕನ್ನಡ ಪುಸ್ತಕ ಪ್ರೇಮಿ ಸೈಯದ್ ಇಸಾಕ್, ಕಡಕೊಳ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಹೆಚ್.ಆರ್.ದೀಪಾ, ಕ್ರೀಡಾಪಟು ನಿಶ್ಚಿತಾ ಪಿ.ಗೌಡ, ಕನ್ನಡ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಬಸವರಾಜ್, ಪರಿಸರ ಸಂರಕ್ಷಣೆ ಕೆ.ಆರ್.ಗುರುಕರ್ ಅವರುಗಳನ್ನು ಅಭಿನಂದಿಲಾಯಿತು.

ಈ ವೇಳೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ತಾಯಿ ಭುವನೇಶ್ವರಿಗೆ ಪೂಜೆ ಸಲ್ಲಿಸಿ ಕಾರ್ಯಕ್ರಮಕ್ಕೆ ಶುಭಕೋರಿ ಚಾಲನೆ ನೀಡಿದರು.

ಪೌರಕಾರ್ಮಿಕ ಹೆಣ್ಣು ಮಕ್ಕಳಿಗೆ ಸೀರೆಗಳನ್ನು ವಿತರಿಸಲಾಯಿತು. ಜಿಲಾಧ್ಯಕ್ಷ ಕೆ.ವೇಣುಗೋಪಾಲ್, ಉಪಾಧ್ಯಕ್ಷ ಫಿಲಿಪ್ಸ್, ಕಾರ್ಯದರ್ಶಿ ಚಂದ್ರು ಕುಮಾರ್, ದರ್ಶನ್ ಸುನೀಲ್, ಪ್ರಕಾಶ್, ಸಿದ್ದೇಗೌಡ, ಕೆ.ಎಸ್. ಹರ್ಷಿತ್‌ಗೌಡ, ಸವಿತಾ ಎಸ್.ಗೌಡ, ಸಂಜಯ್, ಸತೀಶ್ ಉಪಸ್ಥಿತರಿದ್ದರು.



ಮೈಸೂರಿನ ರಿಂಗ್ ರಸ್ತೆಯಲ್ಲಿರುವ ಬಂಡಿಪಾಳ್ಯದ ಬಳಿ ಕರುನಾಡ ರಕ್ಷಣಾ ವೇದಿಕೆ ವತಿಯಿಂದ ಆಯೋಜಿಸಿದ್ದ 69ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರನ್ನು ಅಭಿನಂದಿಸಲಾಯಿತು.

ಸಾಹಿತ್ಯ ಸಮ್ಮೇಳನಕ್ಕೆ ಮಂಡ್ಯ ಸಕಲ ರೀತಿಯಲ್ಲಿ ಸಜ್ಜು

ಮೂರು ದಿನಗಳಲ್ಲಿ ವೇದಿಕೆ ನಿರ್ಮಾಣ, 120 ಫುಡ್ ಕೌಂಟರ್, 450 ಪುಸ್ತಕ ಮಳಿಗೆ, 250 ಶೌಚಾಲಯಗಳ ನಿರ್ಮಾಣ

ಮಂಡ್ಯ,ಡಿ.15– 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಮಂಡ್ಯ ಸಕಲ ರೀತಿಯಲ್ಲಿ ಸಜ್ಜಾಗಿದೆ. 64 ಎಕರೆ ಪ್ರದೇಶದಲ್ಲಿ ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಂತೆ ವೇದಿಕೆ ನಿರ್ಮಾಣ ಕಾರ್ಯದ ಸಿದ್ಧತೆ ಭರದಿಂದ ಸಾಗುತ್ತಿದೆ. ಇನ್ನೂ 3 ದಿನಗಳಲ್ಲಿ ವೇದಿಕೆ ನಿರ್ಮಾಣ ಕಾರ್ಯ ಪೂರ್ಣಗೊಳ್ಳಲಿದೆ ಎಂದು ಶಾಸಕ ಹಾಗೂ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ವೇದಿಕೆ ನಿರ್ವಹಣಾ ಸಮಿತಿ ಅಧ್ಯಕ್ಷ ಪಿ.ಎಂ.ನರೇಂದ್ರಸ್ವಾಮಿ ತಿಳಿಸಿದರು.

ಭಾನುವಾರ ನಗರದ ಸ್ಯಾಂಜೊ ಆಸ್ಪತ್ರೆ ಹಾಗೂ ಅಮರಾವತಿ ಹೋಟೆಲ್ ಹಿಂಭಾಗದಲ್ಲಿ ವೇದಿಕೆ ನಿರ್ಮಾಣವಾಗುತ್ತಿರುವ ಸ್ಥಳದ ಸಿದ್ಧತೆ ಪರಿಶೀಲನೆ ನಡೆಸಿದ ನಂತರ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಧಾನ ವೇದಿಕೆಯಲ್ಲಿ ಸುಮಾರು 40 ಸಾವಿರ ಜನರಿಗೆ ಆಸನದ ವ್ಯವಸ್ಥೆ ಮಾಡಲಾಗಿದೆ 450 ಪುಸ್ತಕ ಮಳಿಗೆ, 350 ವಾಣಿಜ್ಯ ಮಳಿಗೆ, 55 ಸರ್ಕಾರಿ ಮಳಿಗೆಗಳನ್ನು ನಿರ್ಮಿಸಲಾಗಿದೆ. ಊಟದ ವ್ಯವಸ್ಥೆಗೆ ಸೂಕ್ತ ವ್ಯವಸ್ಥೆ ಕಲ್ಪಿಸಲಾಗಿದೆ. ಜನದಟ್ಟಣೆಯಾಗದಂತೆ ತಡೆಯಲು ಪ್ರತ್ಯೇಕ ಫುಡ್ ಕೌಂಟರ್ ತೆರೆಯಲಾಗಿದೆ. ನೋಂದಾಯಿತ ಪ್ರತಿನಿಧಿಗಳಿಗೆ 40, ಜನಸಾಮಾನ್ಯರಿಗೆ 120 ಫುಡ್ ಕೌಂಟರ್‌ಗಳ ಜೊತೆಗೆ ಮಾಧ್ಯಮದವರಿಗೆ, ವಿಐಪಿಗಳಿಗೆ ಪ್ರತ್ಯೇಕ ಆಹಾರದ ಕೌಂಟರ್ ಮಾಡಲಾಗಿದೆ ಎಂದು ವಿವರಿಸಿದರು.

24 ಎಕರೆ ಜಾಗವನ್ನು ಪಾರ್ಕಿಂಗ್‌ಗೆಂದೇ ನಿಗದಿಗೊಳಿಸಲಾಗಿದೆ. ನಗರದಿಂದ ಉಚಿತ ಬಸ್ ಸಂಚಾರ ಇರಲಿದೆ. ಸಮ್ಮೇಳನಕ್ಕೆ ಆಗಮಿಸುವವರಿಗೆಂದು ತಾಲೂಕು ಕೇಂದ್ರಗಳಿಂದ ಕೂಡ ಬಸ್ ವ್ಯವಸ್ಥೆ ಮಾಡಲಾಗಿದೆ. 6 ಸಾವಿರ ನೋಂದಾಯಿತ ಪ್ರತಿನಿಧಿಗಳಿಗೆ ಅರ್ಧ ಕೆಜಿ ಬೆಲ್ಲ, ಅರ್ಧ ಕೆಜಿ ಸಕ್ಕರೆ, ಬ್ರಶ್, ಪೇಸ್ಟ್, ಸೋಪು, ಬೆಡ್‌ಶಿಟ್ ಒಳಗೊಂಡ ಲೆದರ್ ಬ್ಯಾಗ್‌ನಲ್ಲಿ ವಸತಿ ಮತ್ತು ಸಮ್ಮೇಳನದ ಕಿಟ್ ನೀಡಲಾಗುವುದು


ವೇದಿಕೆ ನಿರ್ಮಾಣದ ಸ್ಥಳವನ್ನು ಪರಿಶೀಲಿಸುತ್ತಿರುವ ಶಾಸಕ ನರೇಂದ್ರ ಸ್ವಾಮಿ.

ಜಿಲ್ಲಾಡಳಿತ ಸಾಕಷ್ಟು ಮುತುವರ್ಜಿಯಿಂದ ಕಾರ್ಯನಿರ್ವಹಿಸುತ್ತಿದೆ. ಸಾರ್ವಜನಿಕರು, ನೋಂದಾಯಿತ ಪ್ರತಿನಿಧಿಗಳು, ಗಣ್ಯರಿಗೆ ತೊಂದರೆಯಾಗದಂತೆ ಕ್ರಮವಹಿಸಲಾಗಿದೆ. ಪೊಲೀಸ್, ಅಗ್ನಿಶಾಮಕ ಸಿಬ್ಬಂದಿಯವರನ್ನು ನೇಮಿಸಲಾಗಿದೆ. ಸಮ್ಮೇಳನದ ಅಂಗವಾಗಿ ಮಳವಳ್ಳಿಯಲ್ಲಿ ಡಿ.18ರಂದು ನಾನಾ ಸಂಘಟನೆಗಳ ವತಿಯಿಂದ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ. ಅತಿಥಿ ಸತ್ಕಾರಕ್ಕೆ ಹೆಸರಾಗಿರುವ ಮಂಡ್ಯ ಜಿಲ್ಲೆಗೆ ಎಲ್ಲೂ ಚ್ಯುತಿ ಬಾರದ ರೀತಿಯಲ್ಲಿ ಮಂಡ್ಯದ ಹಿರಿಮೆ, ಗರಿಮೆ ಎತ್ತಿಯಿಡುವ ನಿಟ್ಟಿನಲ್ಲಿ ಸಾಹಿತ್ಯ ಸಮ್ಮೇಳನ ಆಯೋಜಿಸಿ ಜಿಲ್ಲೆಗೆ ಕೀರ್ತಿ ತರಲಾಗುವುದು. ಇದಕ್ಕೆ ಎಲ್ಲರ ಸಹಕಾರ, ಸಹಭಾಗಿತ್ವ ಕೂಡ ಮುಖ್ಯವಾಗಿದ್ದು ಸಮ್ಮೇಳನದ ಯಶಸ್ವಿಗೆ ಎಲ್ಲರೂ ಕೈಜೋಡಿಸಬೇಕೆಂದು ಮನವಿ ಮಾಡಿದರು.


ಸಹಸ್ರಾರು ಸಂಖ್ಯೆಯಲ್ಲಿ ಜನ ಸೇರುವುದರಿಂದ ಶುಚಿತ್ವ ಮತ್ತು ಶೌಚಾಲಯಕ್ಕೆ ಪ್ರಾಧಾನ್ಯತೆ ನೀಡಲಾಗಿದೆ. 250 ಶೌಚಾಲಯ, ಅಡುಗೆ ಸಿಬ್ಬಂದಿಗಳಿಗೆ 50 ಸ್ನಾನದಗೃಹದ ವ್ಯವಸ್ಥೆ ಮಾಡಲಾಗಿದೆ. ವಿದ್ಯುತ್ ಅಡಚಣೆಯಿಂದ ತೊಂದರೆ ಆಗದಂತೆ ಜನರೇಟರ್ ವ್ಯವಸ್ಥೆ ಕೂಡ ಮಾಡಲಾಗಿದೆ. ಅಗ್ನಿ ದುರಂತ ಸಂಭವಿಸದಂತೆ ಮುಂಜಾಗ್ರತಾ ಕ್ರಮಗಳನ್ನು ಸಹ ಕೈಗೊಂಡಿದ್ದು, ಮಂಡ್ಯದಲ್ಲಿ ನಡೆಯುತ್ತಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಬಹಳ ವಿಜೃಂಭಣೆಯಿಂದ, ವೈಭವೋಪೇತದಿಂದ ಕೂಡಿರಲಿದೆ.

ಆಹಾರದ ಗುಣಮಟ್ಟ, ನೀರಿನ ಶುದ್ಧತೆ ಪರಿಶೀಲನೆ: ಸಾಹಿತ್ಯ ಸಮ್ಮೇಳನದಲ್ಲಿ ಲಕ್ಷಾಂತರ ಜನರು ಊಟ ಮಾಡುವುದರಿಂದ ಹಲವು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಆಹಾರದ ಗುಣಮಟ್ಟ ಪರಿಶೀಲನೆಗಾಗಿ 10 ಜನರ ಆಹಾರ ತಜ್ಞರ ತಂಡವೊಂದನ್ನು ರಚನೆ ಮಾಡಲಾಗಿದೆ. ಮೂರು ದಿನವೂ ಆ ತಂಡ ಆಹಾರದ ಗುಣಮಟ್ಟದ ಪರಿಶೀಲನೆ ನಡೆಸಿ ವರದಿ ನೀಡಲಿದೆ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ಹೇಳಿದರು.

ನೀರಿನ ವ್ಯವಸ್ಥೆಗೆ ಕ್ರಮಕೈಗೊಳ್ಳಲಾಗಿದೆ. ಒಟ್ಟು ಮೂರು ಬೋರ್‌ವೆಲ್‌ಗಳಿದ್ದು ನೀರು ಪೂರೈಕೆಗೆ 5.8 ಕಿ.ಮೀ. ಉದ್ದದ ಪೈಪ್‌ಲೈನ್ ವ್ಯವಸ್ಥೆ ಮಾಡಲಾಗಿದೆ. ಓವರ್ ಹೆಡ್ ಟ್ಯಾಂಕ್‌ನಿಂದ ಆಹಾರ ತಯಾರಿಕಾ ಸ್ಥಳ, ಶೌಚಾಲಯಗಳಿಗೆ ನೀರು ಪೂರೈಕೆ ಆಗಲಿದೆ 3 ಕಡೆ ಆರ್‌ಓ ಪ್ಲಾಂಟ್ ನಿರ್ಮಿಸಲಾಗಿದೆ. ನೀರಿನ ಶುದ್ಧತೆ ಕೂಡ ಪರಿಶೀಲನೆ ನಡೆಸಲಾಗುವುದು ಎಂದು ತಿಳಿಸಿದರು.

ಪ್ಲಾಸ್ಟಿಕ್ ಮುಕ್ತ ಸಮ್ಮೇಳನ ಇದಾಗಿರಲಿದೆ. ಮಹಿಳೆಯರಿಗೆ ಸಕಲ ಸೌಲಭ್ಯ ಕಲ್ಪಿಸಲಾಗಿದೆ. ಆರೋಗ್ಯದ ಹಿತದೃಷ್ಟಿಯಿಂದ ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಉಚಿತ ಸಾರಿಗೆ ವ್ಯವಸ್ಥೆ ಬಗ್ಗೆ ರೂಟ್ ಮ್ಯಾಪ್ ಸಿದ್ಧಪಡಿಸಿ ಹಲವು ಕಡೆಗಳಲ್ಲಿ ಅವುಗಳ ಮಾಹಿತಿಯನ್ನು ಪ್ರದರ್ಶಿಸಲಾಗುವುದು. ಒಟ್ಟಾರೆ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಜಿಲ್ಲಾಡಳಿತ ಸಕಲ ರೀತಿಯಲ್ಲೂ ಸಜ್ಜಾಗಿದ್ದು ನುಡಿಹಬ್ಬವನ್ನು ಮನೆಹಬ್ಬದಂತೆ ಎಲ್ಲರೂ ಆಚರಿಸಬೇಕು ಎಂದು ಹೇಳಿದರು.

ಮೊಮ್ಮಗನಿಂದ ಪಶ್ಚಿಮವಾಹಿನಿಯಲ್ಲಿ ಎಸ್.ಎಂ.ಕೃಷ್ಣ ಅವರ ಚಿತಾಭಸ್ಮ ವಿಸರ್ಜನೆ



ಶ್ರೀರಂಗಪಟ್ಟಣ: ಇತ್ತೀಚೆಗೆ ನಿಧನರಾದ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ಚಿತಾಭಸ್ಮವನ್ನು ಪಟ್ಟಣದ ಹೊರವಲಯದ ಪಶ್ಚಿಮವಾಹಿನಿಯ ಕಾವೇರಿ ನದಿಯಲ್ಲಿ ಎಸ್.ಎಂ.ಕೃಷ್ಣ ಅವರ ಮೊಮ್ಮಗ ಅಮರ್ಥ್ಯ ಹೆಗಡೆ ವಿಸರ್ಜಿಸಿದರು.

ವೇದ ಬ್ರಹ್ಮ ಡಾ.ವಿ.ಭಾನುಪ್ರಕಾಶ್ ಶರ್ಮಾ ನೇತೃತ್ವದಲ್ಲಿ ವೈದಿಕರ ತಂಡದ ನೇತೃತ್ವದಲ್ಲಿ ಹಿಂದೂ ಸಂಪ್ರದಾಯದ ವಿಧಿ–ವಿಧಾನಗಳೊಂದಿಗೆ ಇಲ್ಲಿನ ಪವಿತ್ರ ಕಾವೇರಿ ನದಿಗೆ ಅಸ್ಥಿಯನ್ನು ವಿಸರ್ಜಿಸಲಾಯಿತು.

ಎಸ್.ಎಂ.ಕೃಷ್ಣ ಅವರ ಮೊಮ್ಮಗ ಅಮರ್ಥ್ಯ ಹೆಗಡೆ ಪೂಜಾ ವಿಧಿ–ವಿಧಾನಗಳನ್ನು ನೆರವೇರಿಸಿ, ಬಳಿಕ ಕಾವೇರಿ ನದಿಗೆ ಅಸ್ಥಿಯನ್ನು ವಿಸರ್ಜಿಸಿದರು. ಈ ವೇಳೆ ಅವರ ಕುಟುಂಬ ಸದಸ್ಯರು ಹಾಗೂ ಆಪ್ತ ವಲಯದ ಮುಖ್ಯಸ್ಥರು ಉಪಸ್ಥಿತರಿದ್ದು, ಪೂಜಾ ಕೈಂಕರ್ಯಗಳನ್ನು ನೆರವೇರಿಸಿದರು. ಅರ್ಚಕ ಲಕ್ಷ್ಮೀಶ್ ಸೇರಿದಂತೆ ಇತರ ವೈದಿಕರ ತಂಡ ಪೂಜಾ ವಿಧಿ ವಿಧಾನದ ಕಾರ್ಯವನ್ನು ಶಾಸ್ತ್ರೋಕ್ತವಾಗಿ ನೆರವೇರಿಸಿಕೊಟ್ಟರು.

ಎಸ್.ಎಂ.ಕೃಷ್ಣ ಅವರು ಇತ್ತೀಚೆಗೆ ಬೆಂಗಳೂರಿನ ಸದಾಶಿವನಗರದ ನಿವಾಸದಲ್ಲಿ ನಿಧನರಾಗಿದ್ದರು. ಮರುದಿನ ಅವರ ಸ್ವಗ್ರಾಮವಾದ ಮಂಡ್ಯ ಜಿಲ್ಲೆ ಮದ್ದೂರಿನ ಸೋಮನಹಳ್ಳಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗಿತ್ತು.

ಕಸಾಪದಿಂದ ಬೃಹತ್ ಬೈಕ್ ಜಾಥಾಕ್ಕೆ ಚಾಲನೆ


ದ್ವಿಚಕ್ರ ವಾಹನಗಳ ಜಾಥಕ್ಕೆ ಜಿಲ್ಲಾಧಿಕಾರಿ ಡಾ.ಕುಮಾರ್ ಚಾಲನೆ ನೀಡಿದರು.

ಮಂಡ್ಯ,ಡಿ.15– ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಆವರಣದಲ್ಲಿ ಇಂದು ಕರ್ನಾಟಕ ಸರ್ಕಾರ, ಜಿಲ್ಲಾಡಳಿತ ಮಂಡ್ಯ ಹಾಗೂ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಚಾರದ ಪ್ರಯುಕ್ತ ದ್ವಿಚಕ್ರ ವಾಹನಗಳ ಜಾಥಾಕ್ಕೆ ಜಿಲ್ಲಾಧಿಕಾರಿಗಳಾದ ಡಾ.ಕುಮಾರ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಡಿ.20 ರಿಂದ ಮೂರು ದಿನಗಳ ಕಾಲ ನಮ್ಮ ಮಂಡ್ಯ ಜಿಲ್ಲೆಯಲ್ಲಿ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ನಡೆಯಲಿದ್ದು, ಈ ನಿಟ್ಟಿನಲ್ಲಿ ಬೈಕ್ ಜಾಥಾವನ್ನು ಹಮ್ಮಿಕೊಳ್ಳಲಾಗಿದೆ. ಎಲ್ಲಾ ಕನ್ನಡಿಗ ಮನಸ್ಸುಗಳು ಒಂದಾಗಿ ಸೇರಿ ಜೊತೆಗೂಡಿ ಸಾಹಿತ್ಯದ ಹಬ್ಬವನ್ನು ಆಚರಿಸುವುದು ಇದರ ಉದ್ದೇಶವಾಗಿದೆ. ಎಲ್ಲಾ ಮಂಡ್ಯ ಜನತೆಯು ಸಹಕಾರದಿಂದ ಕೈಜೋಡಿಸಿ ಸಮ್ಮೇಳನವನ್ನು ಯಶಸ್ವಿಗೊಳಿಸಬೇಕು ಎಂದು ತಿಳಿಸಿದರು.

ಜಿಲ್ಲಾ ಕಸಾಪ ಸಮ್ಮೇಳನ ಸಂಚಾಲಕಿ ಮೀರಾ ಶಿವಲಿಂಗಯ್ಯ ಅವರು ಮಾತನಾಡಿ, ಕರ್ನಾಟಕ ಸರ್ಕಾರ, ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಜಿಲ್ಲಾಡಳಿತ ಸೇರಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಮಂಡ್ಯದಲ್ಲಿ ಹಮ್ಮಿಕೊಳ್ಳಲಾಗಿರುವ ವಿಷಯವು ಈಗಾಗಲೇ ಎಲ್ಲರಿಗೂ ತಿಳಿದಿದೆ. ಕನ್ನಡ ಪ್ರಜ್ಞೆ, ಕನ್ನಡ ಪ್ರೇಮ ಪ್ರತಿಯೊಬ್ಬರಲ್ಲಿಯೂ ಜಾಗೃತವಾಗಿ ಎಲ್ಲರೂ ಸಮ್ಮೇಳನದಲ್ಲಿ ಭಾಗವಹಿಸಬೇಕು. ಮಂಡ್ಯ ಜನತೆಗೆ ಜಾಗೃತಿ ಮೂಡಿಸಲು ಮೋಟಾರ್ ಬೈಕ್ ಜಾಥಾವನ್ನು ಆಯೋಜಿಸಲಾಗಿದೆ. ಎಲ್ಲರೂ ಸೇರಿ ಜಾಥಾವನ್ನು ಯಶಸ್ವಿಗೊಳಿಸಿ ಎಂದರು.

ಕಸಾಪ ನಗರ ಘಟಕದ ಅಧ್ಯಕ್ಷೆ ಸುಜಾತ ಕೃಷ್ಣ ಮಾತನಾಡಿದರು. ಜಾಥಾವು ಜಿಲ್ಲಾಧಿಕಾರಿಗಳ ಕಚೇರಿಯಿಂದ ಹೊರಟು ಬೆಂಗಳೂರು–ಮೈಸೂರು ಹೆದ್ದಾರಿ ಮಾರ್ಗವಾಗಿ ಕಲ್ಲಹಳ್ಳಿಯ ಎಪಿಎಂಸಿ ಮಾರುಕಟ್ಟೆ, ವಿವಿ ನಗರ, ಅನ್ನಪೂರ್ಣೇಶ್ವರಿ ನಗರ, ಕಾರಸವಾಡಿ ರಸ್ತೆಯ ಅರಳಿಮರ ಸರ್ಕಲ್ ಮುಖಾಂತರ ಕಾಲುವೆ ರಸ್ತೆಯಲ್ಲಿ ಸಾಗಿ ಹೊಸಹಳ್ಳಿಯ ಶ್ರೀ ವೆಂಕಟೇಶ್ವರ ದೇವಸ್ಥಾನ, ಬಿಸಿಲು ಮಾರಮ್ಮನ ದೇವಸ್ಥಾನ ಹೊಸಹಳ್ಳಿ ವೃತ್ತ 100 ಅಡಿ ರಸ್ತೆಯಲ್ಲಿ ಕನ್ನಿಕಾ ಪರಮೇಶ್ವರಿ ದೇವಸ್ಥಾನದ ಬಳಿಯಿಂದ ಸುಭಾಷ್ ನಗರದ ವಿನೋಬ ರಸ್ತೆ ಸಂಜಯ ಸರ್ಕಲ್, ಆರ್‌ಪಿ ರಸ್ತೆಯ ಮೂಲಕ ಕರ್ನಾಟಕ ಬಾರ್ ಸರ್ಕಲ್, ಜಾಥಾ ನೂರಡಿ ರಸ್ತೆಯಲ್ಲಿ ಸಂಚರಿಸಿ ವಿವಿ ರಸ್ತೆಯ ಮೂಲಕ ಮಹಾವೀರ ವೃತ್ತ ಸಿಮೆಂಟ್ ಡಬಲ್ ರೋಡ್, ಬೆಸಗರಹಳ್ಳಿ ರಾಮಣ್ಣ ವೃತ್ತ, ಆಸ್ಪತ್ರೆ ರಸ್ತೆ, ನಂದಾ ವೃತ್ತ, ಫ್ಯಾಕ್ಟರಿ ಸರ್ಕಲ್, ಗುತ್ತಲು ರಸ್ತೆ, ಸ್ವರ್ಣಸಂದ್ರ ಈಶ್ವರ ದೇವಸ್ಥಾನದ ಮೂಲಕ ಮತ್ತೆ ಫ್ಯಾಕ್ಟರಿ ವೃತ್ತ ದಾಟಿ ಕಾಳಮ್ಮನ ದೇವಸ್ಥಾನ ಕಾರೆಮನೆ ಗೇಟ್, ಹೊಳಲು ವೃತ್ತದ ಮೂಲಕ ಸಂಚರಿಸಿ ರೈತ ಸಭಾಂಗಣ ತಲುಪಿ ಸಮಾರೋಪ ಸಮಾರಂಭದೊಂದಿಗೆ ಅಂತ್ಯಗೊಂಡಿತು.

ಹುಸ್ಕೂರು ಕೃಷ್ಣೆಗೌಡ, ಅಪ್ಪಾಜಪ್ಪ, ಚಂದ್ರಲಿಂಗು ಪದಾಧಿಕಾರಿಗಳು ಇದ್ದರು.

ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಾಂಸಾಹಾರ ನೀಡಿ



ಭಾರತೀನಗರ,ಡಿ.15– ಮಂಡ್ಯ ಜಿಲ್ಲೆಯಲ್ಲಿ ನಡೆಯಲಿರುವ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಾಂಸಾಹಾರವನ್ನು ನೀಡಬೇಕೆಂದು ಕೃಷಿಕೂಲಿಕಾರರ ಸಂಘದ ಜಿಲ್ಲಾಧ್ಯಕ್ಷ ಎಂ.ಪುಟ್ಟಮಾದು ತಿಳಿಸಿದರು.

ಭಾರತೀನಗರದಲ್ಲಿ ಮಾತನಾಡಿದ ಅವರು, ಈ ನೆಲದ ಸೊಗಡನ್ನು ನಾಶಮಾಡಬಾರದು. ಜಿಲ್ಲಾಡಳಿತ ಮತ್ತು ಮುಖ್ಯಮಂತ್ರಿ ಅವರು ವಿಶೇಷವಾಗಿ ಗಮನ ಹರಿಸಿ ಈ ಬಾಡೂಟವನ್ನು ನೀಡಲು ಜಾರಿ ಮಾಡಬೇಕು. ಸಮ್ಮೇಳನದ ಅಧ್ಯಕ್ಷ ಮಹೇಶ್ ಜೋಶಿ ಅವರು ಒಂದೇ ಆಹಾರವನ್ನು ತಿನ್ನಬೇಕೆಂದು ಒತ್ತಡ ಏರುತ್ತಿರುವುದು ಸರಿಯಲ್ಲ. ಕನ್ನಡ ಸಾಹಿತ್ಯ ಹುಟ್ಟಿರುವುದೇ ಮಾಂಸಾಹಾರಿಗಳಿಂದ ಅನ್ನುವುದನ್ನು ಪ್ರಮುಖವಾಗಿ ತಿಳಿದುಕೊಳ್ಳಬೇಕು. ಆಹಾರ ಪದ್ಧತಿಯಲ್ಲಿ ಬೇಧ ಭಾವ ಬೇಡ ಎಂದು ಆಗ್ರಹಿಸಿದರು.

ರಾಮಾಯಣವನ್ನು ಬರೆದಿರುವ ವಾಲ್ಮೀಕಿ ಒಬ್ಬ ಬೇಡರ ಶೂದ್ರರಾಗಿದ್ದರು. ಹಾಗಾಗಿ ಬಾಡೂಟವನ್ನು ನಾವು ಬೆಂಬಲಿಸುತ್ತೇವೆ. ಅದರ ಜೊತೆಗೆ ಮಂಡ್ಯ ಜಿಲ್ಲೆಯ ಸೊಗಡನ್ನು ನಾಶಮಾಡಬಾರದು. ಜಿಲ್ಲಾಡಳಿತವಾಗಲಿ, ರಾಜ್ಯದ ಮುಖ್ಯಮಂತ್ರಿಗಳಾಗಲಿ ವಿಶೇಷವಾಗಿ ಗಮನ ನೀಡುವ ಮೂಲಕ ಈ ಬಾಡೂಟವನ್ನು ಜಾರಿಮಾಡಬೇಕೆಂದು ಒತ್ತಾಯಿಸಿದರು.

ಆಹಾರ ಸಂಸ್ಕೃತಿಯನ್ನು ನಾಶಮಾಡಲು ಸಮ್ಮೇಳನದ ಅಧ್ಯಕ್ಷ ಮಹೇಶ್ ಜೋಶಿ ಅವರು ತಂತ್ರ ಮಾಡುತ್ತಿರುವುದು ಖಂಡನೀಯ ಘಟನೆ. ಕನ್ನಡ ಸಾಹಿತ್ಯ ಹುಟ್ಟಿರುವುದೇ ಮಾಂಸಾಹಾರಿಗಳಿಂದ ಅನ್ನುವುದನ್ನು ಪ್ರಮುಖವಾಗಿ ತಿಳಿದುಕೊಳ್ಳಬೇಕು.

ಈ ವೇಳೆ ಬಿ.ಎಂ.ಶಿವಮಲ್ಲಯ್ಯ, ಹನುಮೇಶ್ ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಸೂನಗನಹಳ್ಳಿ ಸರ್ಕಾರಿ ಶಾಲೆಯಲ್ಲಿ ಗುರುವಂದನಾ ಕಾರ್ಯಕ್ರಮ


ಸೂನಗನಹಳ್ಳಿ ಶಾಲೆಯಲ್ಲಿ ನಡೆದ ಗುರುವಂದನಾ ಕಾರ್ಯಕ್ರಮ.

ಮಂಡ್ಯ,ಡಿ.15– ತಾಲೂಕಿನ ಸೂನಗನಹಳ್ಳಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಶಾಲೆಯ ಹಿರಿಯ ವಿದ್ಯಾರ್ಥಿಗಳ ಸಾರಥ್ಯದಲ್ಲಿ ಗುರುವಂದನಾ ಕಾರ್ಯಕ್ರಮ ಹಾಗೂ ಹಿರಿಯ ವಿದ್ಯಾರ್ಥಿಗಳ ಸಂಘವನ್ನು ಲೋಕಾರ್ಪಣೆ ಮಾಡಲಾಯಿತು.

ಕಾರ್ಯಕ್ರಮದ ಹಿನ್ನೆಲೆಯಲ್ಲಿ ಶಾಲೆಯಲ್ಲಿ ವ್ಯಾಸಾಂಗ ಮಾಡಿದ ಎಲ್ಲಾ ಹಿರಿಯ ವಿದ್ಯಾರ್ಥಿಗಳು ತಮ್ಮ ವ್ಯಾಸಂಗದ ಅವಧಿಯಲ್ಲಿ ಪಾಠ ಹೇಳಿಕೊಟ್ಟ ಶಿಕ್ಷಕರನ್ನು ಸಾಂಸ್ಕೃತಿಕ ಕಲಾ ತಂಡಗಳೊಂದಿಗೆ ಇಡೀ ಗ್ರಾಮದಾದ್ಯಂತ ತೆರೆದ ವಾಹನದಲ್ಲಿ ಮೆರವಣಿಗೆ ಮಾಡಿ ಬಳಿಕ ಶಾಲಾ ಆವರಣದಲ್ಲಿ ನಡೆದ ಸಾಂಸ್ಕೃತಿಕ ಹಾಗೂ ಸನ್ಮಾನ ಕಾರ್ಯಕ್ರಮದಲ್ಲಿ ಎಲ್ಲಾ ಶಿಕ್ಷಕ ವೃಂದದವರನ್ನು ಅಭಿನಂದಿಸಿದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ನಿವೃತ್ತ ಶಿಕ್ಷಕ ಶಿವಣ್ಣ, ಇದೊಂದು ಸ್ಮರಣೀಯ ದಿನವಾಗಿದ್ದು, ಹಿರಿಯ ವಿದ್ಯಾರ್ಥಿಗಳು ತಮಗೆ ಶಿಕ್ಷಣ ಹೇಳಿಕೊಟ್ಟ ಶಿಕ್ಷಕರನ್ನು ಅಭಿನಂದಿಸಿದ್ದಾರೆ. ಇದು ನಿಜಕ್ಕೂ ಸಂಸತದ ವಿಷಯ. ನಾವು ಪಾಠ ಹೇಳಿಕೊಟ್ಟ ವಿದ್ಯಾರ್ಥಿಗಳು ದೊಡ್ಡ ಮಟ್ಟಕ್ಕೆ ಬೆಳೆದಿದ್ದರೂ ನಮ್ಮನ್ನು ಗುರುತಿಸಿ ಮತ್ತೆ ಶಾಲಾ ಆವರಣಕ್ಕೆ ಕರೆತಂದು ಸನ್ಮಾನಿಸುತ್ತಿರುವುದು ಸಂಸತ ತಂದಿದೆ ಎಂದರು.

ಹಿರಿಯ ವಿದ್ಯಾರ್ಥಿ ಶ್ರೀನಿವಾಸ್ ಮಾತನಾಡಿ, ಶಾಲೆಯ ಹಿರಿಯ ವಿದ್ಯಾರ್ಥಿಗಳ ಸಾರಥ್ಯದಲ್ಲಿ ಇಂದು ಗುರುವಂದನಾ ಕಾರ್ಯಕ್ರಮ ಮಾಡಿದ್ದು, ನಿವೃತ್ತ ಶಿಕ್ಷಕರಿಗೆ ಅಭಿನಂದಿಸಿ, ಅವರಿಂದ ಆಶೀರ್ವಾದ ಪಡೆದಿದ್ದೇವೆ. ಹಿರಿಯ ವಿದ್ಯಾರ್ಥಿ ಸಂಘವನ್ನು ಲೋಕಾರ್ಪಣೆ ಮಾಡಬೇಕೆಂದಾಗ ಶಿಕ್ಷಕರಿಗೆ ಗುರುವಂದನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂದು ಇಚ್ಛಿಸಿ, ಕಾರ್ಯಕ್ರಮ ಮಾಡಿದ್ದೇವೆ. ಈ ಸಂದರ್ಭದಲ್ಲಿ ಶಾಲೆಯ ಮುಖ್ಯೋಪಾಧ್ಯಾಯ ಪುಟ್ಟರಾಮ ರಾಜರಸ್, ನಿವೃತ್ತ ಶಿಕ್ಷಕರಾದ ಶೋಭಾದೇವಿ, ಮಂಜುಳಾ, ಮಣಿ, ಸರೋಜಾ, ಸೌಮ್ಯ ಲತಾ, ಕಾಳಯ್ಯ, ಶ್ರೀನಿವಾಸ್, ಹಿರಿಯ ವಿದ್ಯಾರ್ಥಿಗಳಾದ ದೇವರಾಜು, ಪ್ರಸನ್ನ, ವರದರಾಜು ಸೇರಿದಂತೆ ಹಲವು ಮಂದಿ ಉಪಸ್ಥಿತರಿದ್ದರು.

ಸಾಹಿತ್ಯ ಮಕ್ಕಳ ಮನದಾಳದಲ್ಲಿ ಮೂಡಲಿ



ಕಿಕ್ಕೇರಿ, ಡಿ.15– ಸಾಹಿತ್ಯದ ಅಭಿರುಚಿ ಮಕ್ಕಳ ಮನದಾಳದಲ್ಲಿ ಮೂಡಿದರೆ ಕನ್ನಡ ಭಾಷೆ, ಸಾಹಿತ್ಯ ಗಟ್ಟಿಯಾಗಲಿದೆ ಎಂದು ಅತ್ತಿಗುಪ್ಪೆ ಸಾಹಿತ್ಯ ಬಳಗ ಅಧ್ಯಕ್ಷ ಮಾರೇನಹಳ್ಳಿ ಲೋಕೇಶ್ ತಿಳಿಸಿದರು.

ಸಾಸಲು ಗ್ರಾಮದ ಶಂಭುಲಿಂಗೇಶ್ವರ ಪ್ರೌಢಶಾಲೆಯಲ್ಲಿ ಅತ್ತಿಗುಪ್ಪೆ ಸಾಹಿತ್ಯ ಬಳಗದಿಂದ ಹಮ್ಮಿಕೊಳ್ಳಲಾಗಿದ್ದ ಸುವರ್ಣ ಕರ್ನಾಟಕ ಸಂಭ್ರಮ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಕ್ಕಳು ಹೆಚ್ಚು ಸಾಹಿತ್ಯ ಓದುವ, ಸರಳವಾಗಿ ಕವಿತೆ, ಲೇಖನ ಬರೆಯುವ ಹವ್ಯಾಸ ರೂಢಿಸಿಕೊಳ್ಳಬೇಕು ಎಂದರು.

ಜಿಲ್ಲೆಯಲ್ಲಿ ನಡೆಯುವ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಕಡ್ಡಾಯವಾಗಿ ವಿದ್ಯಾರ್ಥಿಗಳು ಪೋಷಕರೊಂದಿಗೆ ಭಾಗವಹಿಸಿ ಕನ್ನಡತನ ಮೆರೆಯಬೇಕು. ಸಮ್ಮೇಳನದಲ್ಲಿ ಭಾಗವಹಿಸುವಿಕೆಯಿಂದ ಮತ್ತಷ್ಟು ಭಾಷೆಯಲ್ಲಿ ಪ್ರೀತಿ, ಹಿಡಿತವನ್ನು ಸಾಧಿಸಬಹುದಾಗಿದೆ ಎಂದರು. ಉತ್ತಮವಾಗಿ ಪ್ರತಿಭಾ ಪ್ರದರ್ಶನ ನೀಡಿದ ಹಾಗೂ ಉತ್ತಮ ಕಲಿಕಾ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಪುಸ್ತಕ ಬಹುಮಾನ ನೀಡಿ ಪ್ರೋತ್ಸಾಹಿಸಲಾಯಿತು. ಮುಖ್ಯಶಿಕ್ಷಕ ಶಾಂತಪ್ಪಾಜಿ, ಶಿಕ್ಷಕ ವಿ.ಜಿ.ಮಲ್ಲಿಕಾರ್ಜುನಸ್ವಾಮಿ, ತ್ರಿವೇಣಿ, ಪಾಪಣ್ಣ, ಮಧು ಮತ್ತಿತರರಿದ್ದರು.

ಸುಳ್ಳು ಜಾತಿ ನಿಂದನೆ ಪ್ರಕರಣ ಕೈಬಿಡಲು ಆಗ್ರಹಿಸಿ ಪ್ರತಿಭಟನೆ


ಪಾಂಡವಪುರ ಪೊಲೀಸ್ ಠಾಣೆಯಲ್ಲಿ ದಲಿತ ಯುವಕ ಮಂಜುನಾಥ್ ನೀಡಿರುವ ಸುಳ್ಳು ಜಾತಿನಿಂದನೆ ಪ್ರಕರಣ ಕೈಬಿಡುವಂತೆ ಒತ್ತಾಯಿಸಿ ಸಣಬ ಗ್ರಾಮದ ಗ್ರಾಮಸ್ಥರು ಶನಿವಾರ ಸಂಜೆ ಪೊಲೀಸ್ ಠಾಣೆ ಎದುರು ಪ್ರತಿಭಟನೆ ನಡೆಸಿದರು.

ಪಾಂಡವಪುರ,ಡಿ.15– ಸಣಬ ಗ್ರಾಮದ ದಲಿತ ಯುವಕ ಪೊಲೀಸ್ ಠಾಣೆಯಲ್ಲಿ ದಾಖಲಿಸಿರುವ ಸುಳ್ಳು ಜಾತಿನಿಂದನೆ ಪ್ರಕರಣವನ್ನು ಪೊಲೀಸರು ಕೈಬಿಡುವಂತೆ ಒತ್ತಾಯಿಸಿದ ದಲಿತ ಹೋರಾಟಗಾರ್ತಿ ಜಯಲಕ್ಷ್ಮಿ ನೇತೃತ್ವದಲ್ಲಿ ಗ್ರಾಮದ ಸವರ್ಣೀಯರು ಪಟ್ಟಣದ ಪೊಲೀಸ್ ಠಾಣೆಯ ಎದುರು ಶನಿವಾರ ಸಂಜೆ ಪ್ರತಿಭಟನೆ ನಡೆಸಿದರು.

ಪಟ್ಟಣದ ಪೊಲೀಸ್ ಠಾಣೆಯ ಎದುರು ಜಮಾಯಿಸಿದ ಗ್ರಾಮಸ್ಥರು ಠಾಣೆಯಲ್ಲಿ ದಾಖಲಾಗಿರುವ ಸುಳ್ಳು ಜಾತಿನಿಂದನೆ ಪ್ರಕರಣವನ್ನು ಕೈಬಿಡುವಂತೆ ಪೊಲೀಸರಿಗೆ ಒತ್ತಾಯಿಸಿದರು.

ಸಣಬ ಗ್ರಾಮದಲ್ಲಿ ಕಬ್ಬು ಕಟಾವು ಮಾಡಲು ಹೊರಗಡೆಯಿಂದ ಬಂದಿರುವ ಕಾರ್ಮಿಕರು ಗ್ರಾಮದಲ್ಲಿ ಮೋಟರ್‌ವೊಂದನ್ನು ಕಳ್ಳತನ ಮಾಡಿ ಸಿಕ್ಕಿಬಿದ್ದರು. ಈ ವಿಚಾರಕ್ಕೆ ಸಂಬಂಧಿಸಿದಂತೆ ಗ್ರಾಮಸ್ಥರು ಶುಕ್ರವಾರ ರಾತ್ರಿ ಗ್ರಾಮದಲ್ಲಿ ನ್ಯಾಯ ಪಂಚಾಯಿತಿ ನಡೆಸುತ್ತಿದ್ದ ಸ್ಥಳಕ್ಕೆ ಆಟೋ ಮೂಲಕ ಆಗಮಿಸಿದ ದಲಿತ ಯುವಕ ಏಕಾಏಕಿ ಗ್ರಾಮದ ಯಜಮಾನರು, ಯುವಕರಿಗೆ ಬಾಯಿಗೆ ಬಂದಂತೆ ಅಶ್ಲೀಲ ಪದಗಳಿಂದ ಬೈಯಲು ಆರಂಭಿಸಿದ್ದಾನೆ. ಈ ವೇಳೆ ಗ್ರಾಮದ ಯುವಕರು ಹಾಗೂ ಆ ಯುವಕನ ನಡುವೆ ಮಾತಿಗೆ ಮಾತು ಬೆಳೆದು ಗಲಾಟೆ ನಡೆದಿದೆ. ಬಳಿಕ ಗ್ರಾಮದ ಯಜಮಾನರು ಇಬ್ಬರನ್ನು ಸಮಾಧಾನ ಮಾಡಿ ಕಳುಹಿಸಿದ್ದಾರೆ. ಆದರೆ ದಲಿತ ಯುವಕ ಶನಿವಾರ ಪೊಲೀಸ್ ಠಾಣೆಗೆ ತೆರಳಿ ಗ್ರಾಮದ ಯಜಮಾನರು, ಕೆಲವು ಯುವಕರ ಮೇಲೆ ಜಾತಿ ನಿಂದನೆ ಪ್ರಕರಣದಡಿ ಕೇಸು ದಾಖಲಿಸಿದ್ದಾನೆ. ಪೊಲೀಸರು ಸಹ ಯಾವುದನ್ನು ಪರಿಶೀಲಿಸದೆ ಸುಳ್ಳು ಜಾತಿನಿಂದನೆ ಪ್ರಕರಣ ದಾಖಲಿಸಿದ್ದಾರೆ ಎಂದು ಕಿಡಿಕಾರಿದರು.

ಪೊಲೀಸರು ಮಂಜುನಾಥ್ ನೀಡಿರುವ ಸುಳ್ಳು ಜಾತಿನಿಂದನೆ ಪ್ರಕರಣವನ್ನು ಕೈಬಿಡಬೇಕು, ಸ್ಥಳಕ್ಕೆ ಡಿವೈಎಸ್‌ಪಿ ಅವರು ಆಗಮಿಸಿ ಪರಿಶೀಲನೆ ನಡೆಸಬೇಕು. ಅಲ್ಲಿವರೆಗೂ ಪ್ರತಿಭಟನೆ ಹಿಂಪಡೆಯುವುದಿಲ್ಲ ಎಂದು ಪಟ್ಟುಹಿಡಿದರು. ಬಳಿಕ ಸರ್ಕಲ್ ಇನ್ಸ್‌ಪೆಕ್ಟರ್ ವಿವೇಕಾನಂದ ಅವರು ಡಿವೈಎಸ್‌ಪಿ ಅವರ ಜತೆಗೆ ಚರ್ಚಿಸಿ ಬಳಿಕ ಸೋಮವಾರ ಗ್ರಾಮಕ್ಕೆ ಬಂದು ಪರಿಶೀಲನೆ ನಡೆಸಲಿದ್ದಾರೆ ಅಲ್ಲಿವರೆಗೆ ಪ್ರತಿಭಟನೆ ಕೈಬಿಡುವಂತೆ ಮನವಿ ಮಾಡಿದರು. ಡಿವೈಎಸ್‌ಪಿ ಅವರು ಸೋಮವಾರ ಗ್ರಾಮಕ್ಕೆ ಬಂದು ಪರಿಶೀಲನೆ ನಡೆಸದಿದ್ದರೆ ಮಂಗಳವಾರ ಇಡೀ ಗ್ರಾಮವೇ ಪೊಲೀಸ್ ಠಾಣೆಗೆ ಬಂದು ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿ ಬಳಿಕ ಪ್ರತಿಭಟನೆ ವಾಪಸ್ಸು ಪಡೆದರು.

ಪ್ರತಿಭಟನೆಯಲ್ಲಿ ದಲಿತ ಹೋರಾಟಗಾರ್ತಿ ಗ್ರಾಪಂ ಸದಸ್ಯರಾದ ಜಯಲಕ್ಷ್ಮಿ, ಚನ್ನಕೃಷ್ಣ, ದಲಿತ ಮುಖಂಡರಾದ ಜವರಾಯಿ, ಜಯರಾಮು, ಮುಖಂಡರಾದ ಸಣ್ಣಪಾಪೇಗೌಡ, ಜವರೇಗೌಡ, ಬೆಟ್ಟೇಗೌಡ, ಪ್ರಕಾಶ್, ನರಸಿಂಹೇಗೌಡ, ಸೇರಿದಂತೆ ಅನೇಕ ಮುಖಂಡರು ಇದ್ದರು.

ಸಮ್ಮೇಳನದಲ್ಲಿ ಮಾಂಸಾಹಾರ ನೀಡಲು ಒತ್ತಾಯ

ಮಂಡ್ಯ, ಡಿ.15– ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ನೀಡುವ ಆಹಾರದ ಕುರಿತು ಚರ್ಚೆಗಳು ನಡೆಯುತ್ತಿದ್ದು, ಮಾಂಸಾಹಾರ ನೀಡುವ ಮೂಲಕ ಎಲ್ಲಾ ಸಮಾಜದ ಜನರಿಗೆ ಸಮಾನ ಅವಕಾಶ ಸಮಪಾಲಿನ ಸಾಧ್ಯತೆ ವಿಸ್ತರಿಸಬೇಕು ಎಂದು ಮಂಟೇಸ್ವಾಮಿ ಪರಂಪರೆ ರಕ್ಷಣಾ ಹೋರಾಟ ಸಮಿತಿ ಅಧ್ಯಕ್ಷ ಉಗ್ರನರಸಿಂಹೇಗೌಡ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮ್ಮೇಳನದಲ್ಲಿ ಭಾಷೆ ಮುಖ್ಯವೋ ಆಹಾರ ಮುಖ್ಯವೋ ಎಂಬ ಪ್ರಶ್ನೆಗಳು ಮೂಡುತ್ತಿದ್ದು, ಭಾಷೆಗೂ ಮೊದಲೇ ಆಹಾರದ ಅನ್ವೇಷಣೆಯಾಗಿದೆ. ಮನುಷ್ಯ ಹುಟ್ಟಿನಿಂದ ಸಸ್ಯಾಹಾರಿಯೂ, ಮಾಂಸಾಹಾರಿಯೂ ಆಗಿದ್ದು, ಎರಡನ್ನೂ ಸಮನಾಗಿ ನೋಡಬೇಕಾದದ್ದು ಸಾಹಿತ್ಯದ ಮನೋಧರ್ಮವಾಗಿದೆ ಎಂದರು.

ಕಳೆದ 86 ಸಾಹಿತ್ಯ ಸಮ್ಮೇಳನದಲ್ಲಿಯೂ ಮಾಂಸಾಹಾರ ಸೇರಿಸದಿರುವುದು ಸಾಹಿತ್ಯ ಪರಿಷತ್ ಮತ್ತು ಸರ್ಕಾರದ ಅವಿವೇಕತನವಾಗಿದ್ದು, ಈ ಹಿಂದೆ ಮಾಡಿದ ತಪ್ಪುಗಳನ್ನು ಸರಿಪಡಿಸಬೇಕಾಗಿದೆ. ಈ ನಿಟ್ಟಿನಲ್ಲಿ ಮುಂದಿನ ಸಮ್ಮೇಳನಗಳಲ್ಲಿ ಸಸ್ಯಾಹಾರ ಮತ್ತು ಮಾಂಸಾಹಾರ ಎರಡನ್ನು ಉಣಬಡಿಸಲು ಮುಂದಾಗಬೇಕು ಎಂದು ಒತ್ತಾಯಿಸಿದರು.

ಪ್ರತಿಯೊಬ್ಬರೂ ಮ್ಯಾರಥಾನ್ ಸ್ಪರ್ಧೆಯಲ್ಲಿ ಭಾಗವಹಿಸಿ


"ಕನ್ನಡಕ್ಕಾಗಿ ಓಟ" ಮ್ಯಾರಥಾನ್ ಟೀ ಶರ್ಟ್ ಬಿಡುಗಡೆ ಮಾಡಿದ ಶಾಸಕ ರವಿಕುಮಾರ್.

ಮಂಡ್ಯ,ಡಿ.15– ಜಿಲ್ಲೆಯಲ್ಲಿ ನಡೆಯುತ್ತಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ "ಕನ್ನಡಕ್ಕಾಗಿ ಓಟ" ಎಂಬ ಘೋಷವಾಕ್ಯದೊಂದಿಗೆ ಮ್ಯಾರಥಾನ್ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿದ್ದು ಪ್ರತಿಯೊಬ್ಬರೂ ಕೂಡ ಇದರಲ್ಲಿ ಭಾಗವಹಿಸಬೇಕು ಎಂದು ಮಂಡ್ಯ ವಿಧಾನಸಭಾ ಕ್ಷೇತ್ರದ ಶಾಸಕ ಪಿ.ರವಿಕುಮಾರ್ ತಿಳಿಸಿದರು.

ಭಾನುವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ 87ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಏರ್ಪಡಿಸಲಾಗಿರುವ "ಕನ್ನಡಕ್ಕಾಗಿ ಓಟ" ಮ್ಯಾರಥಾನ್ ಕಾರ್ಯಕ್ರಮದ ಟೀ ಶರ್ಟ್ ಬಿಡುಗಡೆ ಮಾಡಿ ಮಾತನಾಡಿದ ಅವರು, 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ "ಕನ್ನಡಕ್ಕಾಗಿ ಓಟ" ಮ್ಯಾರಥಾನ್ ಅನ್ನು ಡಿಸೆಂಬರ್ 17ರಂದು ಬೆಳಿಗ್ಗೆ 7 ಗಂಟೆಗೆ ನಗರದ ಸರ್.ಎಂ. ವಿಶ್ವೇಶ್ವರಯ್ಯ ಕ್ರೀಡಾಂಗಣದಿಂದ ಸಮ್ಮೇಳನ ನಡೆಯುವ ಸ್ಥಳ (ಸ್ಯಾಂಜೋ ಆಸ್ಪತ್ರೆ ಹಿಂಭಾಗ)ದವರೆಗೆ ಹಮ್ಮಿಕೊಳ್ಳಲಾಗಿದೆ. ಈ ಸ್ಪರ್ಧೆಯಲ್ಲಿ ಪ್ರತಿಯೊಬ್ಬರೂ ಭಾಗವಹಿಸಿ ಎಂದರು.

ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲರಿಗೂ ಕುಡಿಯುವ ನೀರು, ಬಿಸ್ಕೆಟ್ ವ್ಯವಸ್ಥೆ ಮಾಡಲಾಗಿದೆ. ಪೊಲೀಸ್ ಬಂದೋಬಸ್ತ್ ವ್ಯವಸ್ಥೆ, ವೈದ್ಯರ ತಂಡ ಸೇರಿದಂತೆ ಎಲ್ಲಾ ಸಕಲ ಸಿದ್ಧತೆಗಳನ್ನು ಜಿಲ್ಲಾಡಳಿತ ಮಾಡಿಕೊಂಡಿದೆ ಆರೋಗ್ಯಕ್ಕಾಗಿ ಓಡಿ ನಿಮ್ಮ ಆರೋಗ್ಯವನ್ನು ನೀವೇ ವೃದ್ಧಿಸಿಕೊಳ್ಳಬೇಕು, ಅದಕ್ಕಾಗಿಯಾದರೂ ಓಡಬೇಕು. ಸಾರ್ವಜನಿಕರು ಸಂತೋಷದಿಂದ ಈ ಸ್ಪರ್ಧೆಯಲ್ಲಿ ಭಾಗಿಯಾಗಬೇಕು ಎಂದರು.

ಜಿಲ್ಲಾಧಿಕಾರಿ ಡಾ.ಕುಮಾರ ಮಾತನಾಡಿ, 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು 2024 ಡಿಸೆಂಬರ್ 20, 21 ಮತ್ತು 22 ರಂದು ಮಂಡ್ಯ ಜಿಲ್ಲೆಯಲ್ಲಿ ಸಂಘಟಿಸಲಾಗುತ್ತಿದ್ದು ಸಮ್ಮೇಳನವನ್ನು ಬಹಳ ಅರ್ಥಪೂರ್ಣವಾಗಿ, ವಿಜೃಂಭಣೆಯಿಂದ ಎಲ್ಲರೂ ಒಟ್ಟಾಗಿ ಸೇರಿ ಆಚರಣೆ ಮಾಡಬೇಕು ಎಂದು ಹೇಳಿದರು.

ಈ ಸಮ್ಮೇಳನವು ಯಾವುದೇ ಅಡೆತಡೆ ಇಲ್ಲದೆ ನಡೆಯಬೇಕೆಂದು ಕಳೆದ 4,5 ತಿಂಗಳಿಂದಲೂ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಹಾಗೂ ಮಂಡ್ಯ ಜಿಲ್ಲೆಯ ಉಸ್ತುವಾರಿ ಸಚಿವರು, ಜಿಲ್ಲೆಯ ಎಲ್ಲಾ ಶಾಸಕರು ಒಟ್ಟಾಗಿ ಸೇರಿ ನಿಭಾಯಿಸಿಕೊಂಡು ಹೋಗುತ್ತಿದ್ದಾರೆ. ಅದರಂತೆ ಜನರ ಸಹಕಾರವೂ ನಮಗೆ ಬಹಳ ಮುಖ್ಯ, ಆದ್ದರಿಂದ ಎಲ್ಲರೂ ಒಟ್ಟಾಗಿ ಸೇರಿ ಈ ಸಮ್ಮೇಳನದಲ್ಲಿ ಕೈ ಜೋಡಿಸಬೇಕು ಎಂದು ತಿಳಿಸಿದರು.

ಕನ್ನಡ ಸಾಹಿತ್ಯ ಸಮ್ಮೇಳನವನ್ನು ಯಶಸ್ವಿಯಾಗಿ ಅರ್ಥಪೂರ್ಣವಾಗಿ ಜಿಲ್ಲೆಯಲ್ಲಿ ಆಯೋಜಿಸುವ ಸಲುವಾಗಿ ಹಾಗೂ ಮಂಡ್ಯ ಜಿಲ್ಲೆಯ ಜನರು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ತೊಡಗಿಸಿಕೊಳ್ಳುವ ನಿಟ್ಟಿನಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನದ ಅರಿವು ಮೂಡಿಸುವ ಸಲುವಾಗಿ "ಕನ್ನಡಕ್ಕಾಗಿ ಓಟ" ಎಂಬ ಘೋಷವಾಕ್ಯದಡಿ ಡಿಸೆಂಬರ್ 17 ರಂದು ಬೆಳಿಗ್ಗೆ 7 ಗಂಟೆಗೆ ಮ್ಯಾರಥಾನ್ ಸ್ಪರ್ಧೆಯನ್ನು ನಗರದ ಸರ್.ಎಂ.ವಿಶ್ವೇಶ್ವರಯ್ಯ ಕ್ರೀಡಾಂಗಣದಿಂದ ಸಮ್ಮೇಳನ ನಡೆಯುವ ಸ್ಥಳ (ಸ್ಯಾಂಜೊ ಆಸ್ಪತ್ರೆ ಹಿಂಭಾಗ) ದವರೆಗೆ ಹಮ್ಮಿಕೊಳ್ಳಲಾಗಿದೆ ಎಂದರು.

ಸ್ಪರ್ಧೆಯಲ್ಲಿ ಸುಮಾರು 35,000 ದಿಂದ 40,000 ಸಾವಿರದವರೆಗೂ ಜನರು ಭಾಗವಹಿಸಬೇಕು. ಕಾರ್ಯಕ್ರಮದ ಉದ್ಘಾಟನೆಗೆ ಶ್ರೀ ಕ್ಷೇತ್ರ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀ ಶ್ರೀ ಶ್ರೀ ನಿರ್ಮಲಾನಂದ ಸ್ವಾಮೀಜಿ ಅವರು ಆಗಮಿಸಲಿದ್ದು ಅವರೊಡನೆ ವಿನಯ್ ಗುರೂಜಿ ಹಾಗೂ ಚಲನಚಿತ್ರದ ನಟ–ನಟಿಯರು ಕೂಡ ಆಗಮಿಸಲಿದ್ದಾರೆ ಎಂದರು.

ಇದೇ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷ ಎಂ.ವಿ.ಪ್ರಕಾಶ್ (ನಾಗೇಶ್), ಮುಡಾ ಅಧ್ಯಕ್ಷ ನಹೀಂ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಮೋಹನ್, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಸಂಚಾಲಕಿ ಮೀರಾ ಶಿವಲಿಂಗಯ್ಯ, ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಗೌರವ ಕಾರ್ಯದರ್ಶಿ ವಿ.ಹರ್ಷ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮಂಡ್ಯದಲ್ಲಿ ಪ್ರತಿಷ್ಠಿತ ಬ್ರ್ಯಾಂಡ್‌ಗಳ ನಕಲಿ ಮದ್ಯ ತಯಾರಿಕಾ ಘಟಕ ಪತ್ತೆ


ಅಪಾರ ಪ್ರಮಾಣದ ಸ್ಪಿರಿಟ್, ನಕಲಿ ಮದ್ಯ ಕಂಪನಿಗಳ ಸ್ಟಿಕರ್‌ಗಳ ವಶ, ಓರ್ವನ ಸೆರೆ

ಮಂಡ್ಯ ಡಿ.15– ಪ್ರತಿಷ್ಠಿತ ಬ್ರ್ಯಾಂಡ್‌ಗಳ ನಕಲಿ ಮದ್ಯ ತಯಾರಿಸುತ್ತಿದ್ದ ಘಟಕದ ಮೇಲೆ ಪೊಲೀಸರು ಮತ್ತು ಅಬಕಾರಿ ಇಲಾಖೆ ಅಧಿಕಾರಿಗಳು ದಾಳಿ ನಡೆಸಿ ಭಾರಿ ಪ್ರಮಾಣದ ಸ್ಪಿರಿಟ್ ಮತ್ತು ನಕಲಿ ಮದ್ಯವನ್ನು ವಶಪಡಿಸಿಕೊಂಡು ಓರ್ವನನ್ನು ವಶಕ್ಕೆ ಪಡೆದಿರುವ ಘಟನೆ ಪಟ್ಟಣದ ಬಿ.ಟಿ.ಲಲಿತಾ ನಾಯಕ್ ಬಡಾವಣೆಯಲ್ಲಿ ಸಂಭವಿಸಿದೆ.

ಆರೋಪಿಗಳು ಬಡಾವಣೆಯಲ್ಲಿ ಬಾಡಿಗೆ ಮನೆಯೊಂದನ್ನು ಪಡೆದು ಸ್ಪಿರಿಟ್ ಮತ್ತು ಕೆಲವು ರಾಸಾಯನಿಕ ಪದಾರ್ಥಗಳನ್ನು ಬಳಸಿ ಪ್ರತಿಷ್ಠಿತ ಕಂಪನಿಯ ನಕಲಿ ಮದ್ಯಗಳನ್ನು ತಯಾರಿಸಿ ಮಾರಾಟ ಮಾಡುತ್ತಿದ್ದರು. ಆರೋಪಿಗಳಿಂದ 590 ಲೀ. ಸ್ಪಿರಿಟ್, 30 ಲೀ. ಮದ್ಯ ಹಾಗೂ ಪ್ರತಿಷ್ಠಿತ ಕಂಪನಿಯ ಸ್ಯಾಚೆಟ್, ಬಾಟಲ್, ಸ್ಟಿಕರ್‌ಗಳನ್ನು ವಶಪಡಿಸಿಕೊಳ್ಳಲಾಗಿದ್ದು, ಪ್ರಮುಖ ಆರೋಪಿಗಳು ಪರಾರಿಯಾಗಿದ್ದಾರೆ.

ಇಂದು ಸಂಜೆ ಇಲ್ಲಿನ ಕಂಫರ್ಟ್ಸ್‌ವೊಂದರ ಮೇಲೆ ದಾಳಿ ನಡೆಸಿ 35 ಲೀ. ನಕಲಿ ಮದ್ಯವನ್ನು ವಶಪಡಿಸಿಕೊಂಡಾಗ ಈ ನಕಲಿ ಮದ್ಯ ತಯಾರಿಕಾ ಘಟಕದ ಮಾಹಿತಿ ಲಭ್ಯವಾಗಿ ಆ ಘಟಕದ ಮೇಲೆ ದಾಳಿ ನಡೆಸಲಾಯಿತು ಎಂದು ಉನ್ನತ ಮೂಲಗಳು ತಿಳಿಸಿವೆ. ದೇಶದಲ್ಲಿ ಸಿಗುವ ಎಲ್ಲಾ ಪ್ರತಿಷ್ಠಿತ ಮತ್ತು ದುಬಾರಿ ಬೆಲೆಯ ಮದ್ಯವನ್ನು ತಯಾರಿಸಿ ಮಾರುಕಟ್ಟೆಗೆ ಸರಬರಾಜು ಮಾಡಲಾಗುತ್ತಿತ್ತು ಎಂದು ಮೂಲಗಳು ತಿಳಿಸಿದ್ದು, ಇದರ ಹಿಂದೆ ಭಾರಿ ಪ್ರಭಾವಿಗಳ ಕೈವಾಡ ಇರುವ ಶಂಖೆಯನ್ನು ವ್ಯಕ್ತಪಡಿಸಲಾಗಿದೆ.

ಪ್ರೊ.ಕೆ.ಬಿ.ಪ್ರಭುಪ್ರಸಾದ್ ಇನ್ನಿಲ್ಲ



ಪ್ರೊ.ಕೆ.ಬಿ.ಪ್ರಭುಪ್ರಸಾದ್

ಮೈಸೂರು, ಡಿ.15– ಮೈಸೂರಿನ ಟೆಂಪಲ್ ರಸ್ತೆಯ ಮನೆ ನಂ.15ರ ನಿವಾಸಿ ಪ್ರೊ. ಕೆ.ಬಿ.ಪ್ರಭುಪ್ರಸಾದ್(95) ಅವರು ಭಾನುವಾರ ಬೆಳಗ್ಗೆ ಅವರ ನಿವಾಸದಲ್ಲಿ ನಿಧನರಾದರು. ಅವರು ಪತ್ನಿ ಪಾರ್ವತಿ, ಪುತ್ರ ಶುಭಾದತ್, ಪುತ್ರಿ ಯಶೋಮಾಲಿನಿ, ಮೊಮ್ಮಕ್ಕಳು, ಬಂಧು ಬಾಂಧವರು ಹಾಗೂ ಅಪಾರ ಸ್ನೇಹಿತರನ್ನು ಅಗಲಿದ್ದಾರೆ. ಮೈಸೂರಿನ ಗೋಕುಲಂ ಚಿರಶಾಂತಿ ಧಾಮದಲ್ಲಿ ಇಂದು ಸಂಜೆ(ಭಾನುವಾರ) ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರಿನ ಯುವರಾಜ ಕಾಲೇಜಿನಲ್ಲಿ ಇಂಗ್ಲೀಷ್ ರೀಡರ್ ಆಗಿ, ತುಮಕೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಹಾಗೂ ಮೈಸೂರಿನ ಮಹಾರಾಣಿ ವಿಜ್ಞಾನ ಕಾಲೇಜಿನಲ್ಲಿ ಸೇವೆ ಸಲ್ಲಿಸಿದ್ದರು.

ಪ್ರೊ ಪ್ರಭುಪ್ರಸಾದ್ ಅವರು ಸಪ್ತಸ್ವರ ಬಳಗದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರಲ್ಲದೆ, ಮೈಸೂರಿನಲ್ಲಿ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ ಸ್ಕೂಲ್ ಸ್ಥಾಪಿಸಿದ್ದರು. ಪ್ರಸ್ತುತ ಅವರು ಮೈಸೂರಿನ ಭಗವಾನ್ ಶ್ರೀ ಸತ್ಯಸಾಯಿ ಬಾಬಾ ಮಹಿಳಾ ಮತ್ತು ಮಕ್ಕಳ ಕೂಟ ಟ್ರಸ್ಟ್ ಅಧ್ಯಕ್ಷರಾಗಿದ್ದರು.

ದೇಗುಲಗಳ ದಾರಿಯಲ್ಲಿ(1961), ರಂಗ ಅಂತರಂಗ (1965) ಮತ್ತು Man- The Maker of His Own Destiny (1965) ಸೇರಿದಂತೆ ಅವರು ಹಲವು ಪುಸ್ತಕಗಳನ್ನು ಬರೆದಿದ್ದರು.

ಮೈಸೂರಲ್ಲಿ 'ವರ್ಲ್ಡ್ ಆಫ್ ಮೈಸೂರು ಪಾಕ್' ಆರಂಭ

ರಾಮಕೃಷ್ಣ ಆಶ್ರಮದ ಮುಕ್ತಿದಾನಂದ ಸ್ವಾಮಿಗಳಿಂದ ಉದ್ಘಾಟನೆ



ಮೈಸೂರಿನ ಚಾಮುಂಡಿಬೆಟ್ಟದ ಮಾರ್ಗದಲ್ಲಿ ನಿರ್ಮಿಸಿರುವ 'ವರ್ಲ್ಡ್ ಆಫ್ ಮೈಸೂರು ಪಾಕ್' ತಯಾರಿಕಾ ಘಟಕವನ್ನು ರಾಮಕೃಷ್ಣ ಆಶ್ರಮದ ಮುಕ್ತಿದಾನಂದ ಸ್ವಾಮೀಜಿ ಉದ್ಘಾಟಿಸಿದರು.

ಮೈಸೂರು, ಡಿ.15(ಜಿಎ)–ಮೈಸೂರಿನ ಚಾಮುಂಡಿ ಬೆಟ್ಟದ ಮಾರ್ಗದಲ್ಲಿ ನಿರ್ಮಾಣಗೊಂಡಿರುವ 'ವರ್ಲ್ಡ್ ಆಫ್ ಮೈಸೂರು ಪಾಕ್' ತಯಾರಿಕಾ ಘಟಕವನ್ನು ರಾಮಕೃಷ್ಣ ಆಶ್ರಮದ ಮುಕ್ತಿದಾನಂದ ಸ್ವಾಮೀಜಿ ಭಾನುವಾರ ಉದ್ಘಾಟಿಸಿದರು.

ನಗರದಲ್ಲಿ ಅನಾವರಣಗೊಂಡಿರುವ ವರ್ಲ್ಡ್ ಆಫ್ ಮೈಸೂರು ಪಾಕ್ ಮೈಸೂರು ಪಾಕ್ ತಿನಿಸಿನ ಇತಿಹಾಸವನ್ನು ಜನರಿಗೆ ತಿಳಿಸುವುದರ ಜೊತೆಗೆ ಮೈಸೂರು ಪಾಕ್ ತಯಾರಿಕೆಯನ್ನು ನೇರವಾಗಿ ವೀಕ್ಷಿಸಲು ಅವಕಾಶ ಕಲ್ಪಿಸಲಾಗಿದೆ.

'ವರ್ಲ್ಡ್ ಆಫ್ ಮೈಸೂರು ಪಾಕ್'ನಲ್ಲಿ 10ಕ್ಕೂ ಹೆಚ್ಚು ಬಗೆಯ ಮೈಸೂರು ಪಾಕ್‌ಗಳು ಲಭ್ಯವಿದ್ದು, ಮೈಸೂರು ಪಾಕ್‌ಗಳನ್ನು ಇಲ್ಲಿ ತಯಾರಿಸುವುದು ವಿಶೇಷವಾಗಿದೆ. ಮೈಸೂರು ಪಾಕ್ ಸವಿಯುವ ಜೊತೆಗೆ ಹೇಗೆ ತಿನಿಸು ತಯಾರಿಸುತ್ತಾರೆ ಎಂಬುದನ್ನು ಖುದ್ದು ನೋಡಲು ಅವಕಾಶವಿದೆ. ಮೈಸೂರು ಪಾಕ್ ಮಾತ್ರವಲ್ಲದೇ ಡ್ರೈಫ್ರೂಟ್, ಚಾಕೊಲೆಟ್, ಬಿಸ್ಕಟ್ ಸೇರಿದಂತೆ ಇತರ ಬಗೆಯ ತಿನಿಸುಗಳನ್ನು ಸವಿಯಬಹುದು.

ಸಂಸ್ಥೆಯ ಮುಖ್ಯಸ್ಥರಲ್ಲಿ ಒಬ್ಬರಾದ ಪವನ್ ಬರ್ಗಿ ಮಾತನಾಡಿ, ಮೈಸೂರು ಪಾಕ್ ಮೈಸೂರಿಗರ ಹೆಮ್ಮೆಯ ತಿನಿಸಾಗಿದ್ದು, ಅದನ್ನು ಮತ್ತಷ್ಟು ಪ್ರವಾಸಿಗರಿಗೆ ಪರಿಚಯಿಸುವ ನಿಟ್ಟಿನಲ್ಲಿ 'ವರ್ಲ್ಡ್ ಆಫ್ ಮೈಸೂರು ಪಾಕ್' ಆರಂಭಿಸಲಾಗಿದೆ. ಮೈಸೂರಿಗೆ ಭೇಟಿ ನೀಡುವ ಪ್ರತಿಯೊಬ್ಬ ಪ್ರವಾಸಿಗರು ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡುವುದು ಸಾಮಾನ್ಯ. ಈ ಹಿನ್ನೆಲೆಯಲ್ಲಿ ಚಾಮುಂಡಿಬೆಟ್ಟದ ಮಾರ್ಗದಲ್ಲಿ ನಮ್ಮ ಸಂಸ್ಥೆ ಅನಾವರಣಗೊಂಡಿದೆ ಎಂದು ಹೇಳಿದರು.

ಇಲ್ಲಿ ಗುಣಮಟ್ಟದ ಮೈಸೂರು ಪಾಕ್ ಲಭ್ಯವಿದ್ದು, ಪ್ರತಿ ತಿನಿಸಿಗೂ ಶುದ್ಧ ತುಪ್ಪ ಬಳಸಲಾಗುತ್ತದೆ. ಜೊತೆಗೆ ಒಮ್ಮೆ ಮೈಸೂರಿಗೆ ಬಂದು 'ವರ್ಲ್ಡ್ ಆಫ್ ಮೈಸೂರು ಪಾಕ್'ನಲ್ಲಿ ಮೈಸೂರು ಪಾಕ್ ಸವಿದ ನಂತರ ಮತ್ತೊಮ್ಮೆ ಸವಿಯಲು ಆನ್‌ಲೈನ್ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ ಎಂದು ತಿಳಿಸಿದರು. ಈ ವೇಳೆ ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ನಿಖಿಲ್ ಮನ್ನಾರ್, ಪವನ್ ಬರ್ಗಿ, ಪವನ್ ಶ್ರಾಫ್, ಸುಷ್ಮಾ, ಶ್ರುತಿ, ಸೌಮ್ಯ ಉಪಸ್ಥಿತರಿದ್ದರು.

ನಾಳೆ 'ಗಾನಾಮೃತ' ವಿನೂತನ ಸಂಗೀತ ಕಾರ್ಯಕ್ರಮ

ಮೈಸೂರು,ಡಿ.15(ಜಿಎ)–ಗಾಯಕಿ ಲಕ್ಷ್ಮಿ ದಿನೇಶ್ ಸಾರಥ್ಯದಲ್ಲಿ ಡಿ.17ರಂದು ಗಾನ ಕೋಗಿಲೆಗಳ ಗಾನಾಮೃತ ಶೀರ್ಷಿಕೆಯಡಿ ವಿನೂತನ ಸಂಗೀತ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಗಾಯಕ ಆರ್.ಲಕ್ಷ್ಮಣ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾದಬ್ರಹ್ಮ ಸಂಗೀತ ಸಭಾದಲ್ಲಿ ಅಂದು ಮಧ್ಯಾಹ್ನ 3ರಿಂದ ರಾತ್ರಿ 9.30 ರವರೆಗೆ ಲಕ್ಷ್ಮಿ ದಿನೇಶ್ ಅವರು ಸತತವಾಗಿ 6 ಗಂಟೆಗಳು, ಒಟ್ಟು 60 ಕನ್ನಡ ಚಲನಚಿತ್ರಗಳ ಆಯ್ದ ಜನಪ್ರಿಯ ಗೀತೆಗಳ ಗಾಯನೋತ್ಸವ ಇದಾಗಿದ್ದು, ಖ್ಯಾತ ಹಿನ್ನೆಲೆ ಗಾಯಕರಾದ ಎಸ್.ಜಾನಕಿ, ವಾಣಿ ಜಯರಾಂ, ಪಿ.ಸುಶೀಲ, ಡಾ.ರಾಜ್‌ಕುಮಾರ್, ಪಿ.ಬಿ.ಶ್ರೀನಿವಾಸ್, ಎಸ್.ಪಿ.ಬಾಲಸುಬ್ರಹ್ಮಣ್ಯಂ ಅವರು ಹಾಡಿರುವ ಸೋಲೋ ಮತ್ತು ಡ್ಯುಯೆಟ್ ಜನಪ್ರಿಯ ಗೀತೆಗಳನ್ನು ಪ್ರಸ್ತುತಪಡಿಸಲಾಗುವುದು ಎಂದರು. ಲಕ್ಷ್ಮಿ ದಿನೇಶ್ ಅವರೊಂದಿಗೆ ಯುಗಳ ಗೀತೆಗಳನ್ನು ಪ್ರೊ.ಹನುಮಂತರಾಜು, ಜಿ.ವೆಂಕಟೇಶ್, ವಕೀಲ ಎಲ್.ಚಂದ್ರಶೇಖರ್, ನಿವೃತ್ತ ಇಂಜಿನಿಯರ್ ಪಿ.ಎಂ.ಸುರೇಶ್, ಉದ್ಯಮಿ ಸಿ.ಎಸ್.ಕುಮಾರ್, ನಿವೃತ್ತ ಪೊಲೀಸ್ ಅಧಿಕಾರಿ ಕೆ.ಪುರುಷೋತ್ತಮ್, ನಾರಾಯಣಸ್ವಾಮಿ, ಮುರುಳಿಧರ್, ಶಿವಶಂಕರ್, ತಾವು ಹಾಡುವುದಾಗಿ ತಿಳಿಸಿದರು.

ವಿಶ್ವವಿಖ್ಯಾತ ತಬಲಾ ವಾದಕ ಜಾಕೀರ್ ಹುಸೇನ್ ನಿಧನ




ನವದೆಹಲಿ, ಡಿ. 15– ಖ್ಯಾತ ತಬಲಾ ವಾದಕ ಜಾಕೀರ್ ಹುಸೇನ್ ಅವರು ಇಂದು ಸಂಜೆ ಅಮೆರಿಕಾದಲ್ಲಿ ನಿಧನರಾಗಿದ್ದಾರೆ.

73 ವರ್ಷದ ಅಮೆರಿಕನ್ ಸಂಗೀತ ಗಾರರಾದ ಅವರನ್ನು ಅನಾರೋಗ್ಯದ ಕಾರಣ ಅಮೆರಿಕಾದ ಸ್ಯಾನ್ ಫ್ರಾನ್ಸಿಸ್ಕೋದಲ್ಲಿ ಆಸ್ಪತ್ರೆಗೆ ದಾಖಲಿಸ ಲಾಗಿತ್ತು. ಆದರೆ ಅಮು ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾರೆ ಎಂದು ಕುಟುಂಬಸ್ಥರು ಮಾಹಿತಿ ನೀಡಿದ್ದಾರೆ.

ಉಸ್ತಾದ್ ಜಾಕಿರ್ ಹುಸೇನ್ ಅವರ ತಂದೆ ಅಲ್ಲಾ ರಖಾ ಕೂಡ ಪ್ರಸಿದ್ಧ ತಬಲಾ ವಾದಕರಾಗಿದ್ದರು. ಪ್ರಸಿದ್ಧ ತಬಲಾ ವಾದಕ ಜಾಕೀರ್ ಹುಸೇನ್ ಅವರು ಪದ್ಮಶ್ರೀ, ಪದ್ಮಭೂಷಣ ಮತ್ತು ಪದ್ಮವಿಭೂಷಣ ಮುಂತಾದ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಅಷ್ಟೇ ಅಲ್ಲ ಆಲ್–ಸ್ಟಾರ್ ಗ್ಲೋಬಲ್ ಕನ್ಸರ್ಟ್‌ನಲ್ಲಿ ಭಾಗವಹಿಸಲು ಅಮೆರಿಕಾ ಮಾಜಿ ಅಧ್ಯಕ್ಷ ಬರಾಕ್ ಒಬಾಮರಿಂದ ಆಹ್ವಾನ ಪಡೆದ ಮೊದಲ ಭಾರತೀಯ ತಬಲಾ ವಾದಕ ಜಾಕಿರ್ ಹುಸೇನ್ ಆಗಿದ್ದಾರೆ.

ಮಹಾರಾಷ್ಟ್ರದ ರಾಜಧಾನಿ ಮುಂಬೈನಲ್ಲಿ 1951ರಲ್ಲಿ ಜನಿಸಿದ ಜಾಕೀರ್ ಹುಸೇನ್ ಕೇವಲ 3 ವರ್ಷ ವಯಸ್ಸಿನಲ್ಲೇ ತಬಲಾವನ್ನು ಅಭ್ಯಾಸ ಮಾಡಲು ಪ್ರಾರಂಭಿಸಿದರು. ಅಷ್ಟೇ ಅಲ್ಲ, 7ನೇ ವಯಸ್ಸಿಗೆ ಪರಿಣತಿ ಪಡೆದಿದ್ದರು.

ಇಂದು ಡಾ.ಬಿ.ಕೆ.ಎಸ್.ಅಯ್ಯಂಗಾರ್ ಜಯಂತಿ



ಮೈಸೂರು: ಕೆಎಂಪಿಕೆ ಟ್ರಸ್ಟ್ ವತಿಯಿಂದ ಯೋಗಭೀಷ್ಮ ಡಾ.ಬಿ.ಕೆ.ಎಸ್. ಅಯ್ಯಂಗಾರ್ 106ನೇ ಜಯಂತ್ಯುತ್ಸವವನ್ನು ಚಾಮರಾಜಪುರಂ ವಿಷ್ಣುವರ್ಧನ ರಸ್ತೆಯಲ್ಲಿ ಡಿ.16ರಂದು ಬೆಳಗ್ಗೆ 11 ಗಂಟೆಗೆ ಹಮ್ಮಿಕೊಳ್ಳಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್ ತಿಳಿಸಿದ್ದಾರೆ. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಮಾಜಿ ಅಧ್ಯಕ್ಷ ಚಂದ್ರಶೇಖರ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಹಿರಿಯ ಸಮಾಜ ಸೇವಕ ಕೆ.ರಘುರಾವ್ ವಾಜಪೇಯಿ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್ ಇತರರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ ಅವರಿಗೆ ಅಭಿನಂದನೆ



ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠದ ನೂತನ ಪೀಠಾಧೀಶರಾದ ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ ಅವರನ್ನು ಎಫ್‌ಸಿ ಉದ್ಯಮಿ ಒಕ್ಕಲಿಗರ ಮೈಸೂರು ಜಿಲ್ಲಾಧ್ಯಕ್ಷ ಪಿ.ಪ್ರಶಾಂತ್ ಗೌಡ ಅಭಿನಂದಿಸಿ, ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ಉದ್ಯಮ ಒಕ್ಕಲಿಗರ ರಾಜ್ಯ ಸಂಯೋಜಕರಾದ ಕುಮಾರ್, ಬೆಂಗಳೂರು ಎಫ್‌ಸಿ ಉದ್ಯಮಿ ಸದಸ್ಯ ಚಂದ್ರಪ್ಪ, ಪಿರಿಯಾಪಟ್ಟಣ ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಆನಂದ್ ಬಸಲಾಪುರ, ಕಾರ್ಯದರ್ಶಿ ಮೋಹನ್, ಸಹ ಕಾರ್ಯದರ್ಶಿ ಗಣೇಶ್, ಖಜಾಂಚಿ ಮನು ಉಪಸ್ಥಿತರಿದ್ದರು.

ಶ್ರೀಮತಿ ಜೆ.ರಕ್ಷಿತಾಗೆ ಪಿಹೆಚ್.ಡಿ ಪದವಿ



ಮೈಸೂರು: ಡಾ.ಆರ್.ಛಾಯಾ ಅವರ ಮಾರ್ಗದರ್ಶನದಲ್ಲಿ ಜೆ.ರಕ್ಷಿತಾ ಅವರು ವಾಣಿಜ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಪಿ.ಎಚ್.ಡಿ ಪದವಿಗೆ ಅಂಗೀಕರಿಸಿದೆ.

ರಾಜ್ಯ ಮಟ್ಟದ ಅಥ್ಲೆಟಿಕ್‌ನ ಪದಕ ವಿಜೇತರಿಗೆ ಸನ್ಮಾನ



ಮೈಸೂರು, ಡಿ.15(ಎಸ್‌ಬಿಡಿ)– ರಾಜ್ಯ ಮಟ್ಟದ ಅಥ್ಲೆಟಿಕ್ಸ್ ಸ್ಪರ್ಧೆಯಲ್ಲಿ ಪದಕಗಳಿಸಿರುವ ಕ್ರೀಡಾಪಟುಗಳನ್ನು ಮೈಸೂರಿನ ನಿವೇದಿತನಗರದ ಸುಬ್ಬರಾವ್ ಉದ್ಯಾನದಲ್ಲಿ ಭಾನುವಾರ ಅಭಿನಂದಿಸಲಾಯಿತು.

ನಗರ ಪಾಲಿಕೆ ಮಾಜಿ ಸದಸ್ಯ ಜೆ.ಎಸ್. ಜಗದೀಶ್ ಸ್ನೇಹಬಳದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ರಾಜ್ಯ ಮಟ್ಟದ ಅಥ್ಲೆಟಿಕ್ಸ್‌ನಲ್ಲಿ ಪದಕ ವಿಜೇತರಾದ ನಿಶ್ಚಿತ ಪಿ.ಗೌಡ, ಹೆಚ್.ಸಹಾ, ಆರ್.ಮಾಧುರ್ಯ ಅವರನ್ನು ಸನ್ಮಾನಿಸಲಾಯಿತು.

ಈ ವೇಳೆ ಹಿರಿಯ ಅಥ್ಲೀಟ್ ಬಸವರಾಜ್ ಮಾತನಾಡಿ, ಪ್ರಸ್ತುತ ಬಹುತೇಕ ಪೋಷಕರು ತಮ್ಮ ಮಕ್ಕಳು ಇಂಜಿನಿಯರ್, ಡಾಕ್ಟರ್, ಐಎಎಸ್, ಐಪಿಎಸ್, ಕೆಎಎಸ್ ಅಧಿಕಾರಿಗಳಾಗಬೇಕೆಂದು ಆಸೆ ಪಡುತ್ತಿದ್ದಾರೆ. ಆದರೆ, ತಮ್ಮ ಮಕ್ಕಳು ಉತ್ತಮ ಕ್ರೀಡಾಪಟುವಾಗಲಿ ಎಂಬ ಆಶಯವುಳ್ಳವರ ಸಂಖ್ಯೆ ತೀರಾ ಕಡಿಮೆ. ಚೀನಾ ಸೇರಿಸಂತೆ ಹಲವು ದೇಶಗಳಲ್ಲಿ ಶಿಕ್ಷಣದ ಜೊತೆಗೆ ಕ್ರೀಡೆಗೂ ಹೆಚ್ಚು ಪ್ರೋತ್ಸಾಹ ಸಿಗುತ್ತದೆ. ಪೋಷಕರೂ ತಮ್ಮ ಮಕ್ಕಳನ್ನು ಪ್ರೋತ್ಸಾಹಿಸುತ್ತಾರೆ. ಅಂತಹ ದೇಶಗಳು ಒಲಿಂಪಿಕ್ಸ್‌ನಲ್ಲಿ ಹೆಚ್ಚು ಪದಕಗಳಿಸುತ್ತಿವೆ. ನಮ್ಮ ದೇಶದಲ್ಲೂ ಕ್ರೀಡೆಗೆ ಪ್ರೋತ್ಸಾಹ ಸಿಗಬೇಕು. ಈ ನಿಟ್ಟಿನಲ್ಲಿ ಸುಬ್ಬರಾವ್ ಉದ್ಯಾನದ ಅಭಿವೃದ್ಧಿಗೆ ಕಾರಣಕರ್ತರಾದ ಜೆ.ಎಸ್.ಜಗದೀಶ್ ಅವರ ಸ್ನೇಹ ಬಳಗ ಕ್ರೀಡಾಪಟುಗಳ ಸಾಧನೆಯನ್ನು ಗೌರವಿಸಿ, ಪ್ರೋತ್ಸಾಹಿಸುತ್ತಿರುವುದು ಶ್ಲಾಘನೀಯ ಎಂದರು.

ಪಾಲಿಕೆ ಮಾಜಿ ಸದಸ್ಯ ಜೆ.ಎಸ್. ಜಗದೀಶ್ ಮಾತನಾಡಿ, ಕ್ರೀಡೆ, ಶಿಕ್ಷಣ ಸೇರಿದಂತೆ ಸಮಾಜದ ಯಾವುದೇ ಕ್ಷೇತ್ರದ ಸಾಧಕರನ್ನು ಗುರುತಿಸಿ, ಪ್ರೋತ್ಸಾಹಿಸಬೇಕಿದೆ. ಮೈಸೂರಿನ ಹಲವು ಸಂಘ–ಸಂಸ್ಥೆಗಳಿಂದ ಈ ಕೆಲಸವಾಗುತ್ತಿದೆ. ಮಕ್ಕಳು ಪಠ್ಯದ ಜತೆಗೆ ಪಠ್ಯೇತರ ಚಟುವಟಿಕೆಗಳಲ್ಲೂ ತೊಡಗಿಸಿಕೊಳ್ಳಬೇಕು. ಕ್ರೀಡೆ ವಿದ್ಯಾರ್ಥಿ ಜೀವನದ ಅವಿಭಾಜ್ಯವಾದರೆ ಭವಿಷ್ಯದಲ್ಲಿ ಅನುಕೂಲ ವಾಗಲಿದೆ. ಪೋಷಕರು ಕೂಡ ಈ ನಿಟ್ಟಿನಲ್ಲಿ ಚಿಂತನೆ ನಡೆಸಬೇಕಿದೆ ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಹಿರಿಯ ನಾಗರಿಕ ವೇದಿಕೆ ಅಧ್ಯಕ್ಷ ಪ್ರೊ.ನಾಗರಾಜು ಮಾತನಾಡಿದರು. ಅಥ್ಲೆಟಿಕ್ಸ್ ತರಬೇತುದಾರ ಪುನೀತ್, ಬಿಜೆಪಿ ಯುವ ಮುಖಂಡ ಅರ್ಜುನ್, ಮುಖಂಡರಾದ ಸತ್ಯಾನಂದ ವಿಟ್ಟು, ಭಾಗ್ಯಶ್ರೀ ಭಟ್, ರಾಕೇಶ್, ದಿನೇಶ್, ಲೋಹಿತ್ ರಾವ್, ಶ್ರೀಕಾಂತ್, ಶ್ರೀನಿವಾಸ್, ಶ್ರೇಯಸ್, ರವಿ, ರಮೇಶ್ ಮತ್ತಿತರರಿದ್ದರು.

ಕ್ರೀಡಾಕೂಟಕ್ಕೆ ಆರ್‌ಐಡಿಇ ಕೆ.ಪಿ.ನಾಗೇಶ್ ಚಾಲನೆ



ರೋಟರಿ ಅಂತಾರಾಷ್ಟ್ರಿಯ ಜಿಲ್ಲೆ 3181 ರೋಮಿನಾ–ಜಿಲ್ಲಾ ಕ್ರೀಡಾಕೂಟಕ್ಕೆ ಆರ್‌ಐಡಿಇ ಕೆ.ಪಿ.ನಾಗೇಶ್ ಬಲೂನನ್ನು ಹಾರಿಸುವುದರ ಮೂಲಕ ಚಾಲನೆ ನೀಡಿದರು. ರೋಟರಿ ಜಿಲ್ಲಾ ಗವರ್ನರ್ ವಿಕ್ರಂದತ್ತ ಕಾರ್ಯದರ್ಶಿ ರಿತೇಶ್ ಬಾಳಿಗ, ನಿಯೋಜಿತ ಗವರ್ನರ್ ಸತೀಷ್ ಬೋಳಾರ್, ರೊಟೇರಿಯನ್‌ಗಳಾದ ರಾಜಶೇಖರ ಕದಂಬ, ಪ್ರಭಾಕರ್, ಎಲ್.ಆರ್.ಮಹದೇವಸ್ವಾಮಿ, ಯಶವಂತ್ ಇನ್ನಿತರರು ಉಪಸ್ಥಿತರಿದ್ದರು.

ನಾಳೆ ಮೆಗಾ ಬ್ರೈಡಲ್ ಮೇಕಪ್ ಸ್ಪರ್ಧೆಯ 2ನೇ ಆವೃತ್ತಿ ಆಯೋಜನೆ

ಮೈಸೂರು, ಡಿ.15(ಜಿಎ)–ಮೈಸೂರು ಬ್ಯೂಟಿಷಿಯನ್ ವೆಲ್‌ಫೇರ್ ಅಸೋಸಿಯೇಷನ್ ವತಿಯಿಂದ ಡಿ.17ರಂದು ನಗರದ ದಿ ಪ್ರೆಸಿಡೆಂಟ್ ಹೋಟೆಲ್‌ನಲ್ಲಿ ಮೆಗಾ ಬ್ರೈಡಲ್ ಮೇಕಪ್ ಸ್ಪರ್ಧೆಯ ಎರಡನೇ ಆವೃತ್ತಿ ಆಯೋಜಿಸಲಾಗುತ್ತಿದೆ ಎಂದು ಸಂಘದ ಅಧ್ಯಕ್ಷೆ ಕೆ.ವೇದಾವತಿ ಎನ್.ರೈ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಫೆಮಿನಾ ಮಿಸ್ ಇಂಡಿಯಾ ಫೈನಲಿಸ್ಟ್ ಅಪೂರ್ವ ರೈ ಮತ್ತು ಏಷ್ಯಾ ಯೂನಿವರ್ಸ್ ಸೌತ್ ಪೆಸಿಫಿಕ್ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ. ನಂತರ ಪ್ರಸಿದ್ಧ ಮೇಕಪ್ ಕಲಾವಿದೆ ಮತ್ತು ಕಾಸ್ಮೆಟಾಲಜಿಸ್ಟ್ ಇಬ್ಬನಿ ಸಲ್ಜು ಅವರು ಮಧ್ಯಾಹ್ನದವರೆಗೆ ಮಾಸ್ಟರ್ ಮೇಕಪ್ ಸೆಮಿನಾರ್ ನಡೆಸಿಕೊಡಲಿದ್ದಾರೆ ಎಂದರು.

ನಂತರ ಮೆಗಾ ಬ್ರೈಡಲ್ ಸ್ಪರ್ಧೆಯು ವಧು ಮೇಕಪ್(ಮುಹೂರ್ತಮ್ ಲುಕ್) ಥೀಮ್ ಆಗಿದ್ದು, ಮೇಕಪ್ ಕಲಾವಿದರಿಗೆ ತಮ್ಮ ಕೌಶಲಗಳನ್ನು ಪ್ರದರ್ಶಿಸಲು ವೇದಿಕೆ ಯಾಗಿದೆ. ಸ್ಪರ್ಧೆ ಹೊರತಾಗಿ ಮೇಕಪ್ ಮತ್ತು ಬ್ರೈಡಲ್ ಫೋಟೋಗ್ರಫಿ ಕುರಿತು ಸೆಮಿನಾರ್‌ಗಳು ನಡೆಯಲಿವೆ. ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಆಕರ್ಷಕ ನಗದು ಬಹು ಮಾನ ನೀಡಲಾಗವುದು ಹೆಚ್ಚಿನ ಮಾಹಿತಿಗೆ 9945517399, 9886608022 ಸಂಪರ್ಕಿಸಿ ಎಂದರು. ಗೋಷ್ಠಿಯಲ್ಲಿ ಸುಜಾತಾ ಸಿಂಗ್, ಮಾಲಿನಿ ಪಾಲಾಕ್ಷ, ವೀಣಾ, ನಿಶಾ, ಸಬೀನಾ ಜಲೀಲ್, ಪ್ರತಿಭಾ ಶೆಟ್ಟಿ, ಅಹಲ್ಯ ಸುರೇಶ್, ನಸ್ರೀನ್ ತಾಜ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಮೂರು ದಿನಗಳ ರಾಷ್ಟ್ರೀಯ ಸಮ್ಮೇಳನ

ಮೈಸೂರು: ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ವತಿಯಿಂದ ``Exploring Nature's Pharmacy: Potential of Medicinal and Aromatic Plants and Their Conservation'' ಎಂಬ ವಿಷಯದ ಮೇಲೆ 07–01–2025ರಿಂದ 09–01–2025ರವರೆಗೆ ಅಕಾಡೆಮಿ ಕಚೇರಿಯಲ್ಲಿ ಮೂರು ದಿನಗಳ ರಾಷ್ಟ್ರೀಯ ಸಮ್ಮೇಳನ ಆಯೋಜಿಸಲಾಗಿದೆ. ಸಮ್ಮೇಳನದಲ್ಲಿ ಔಷಧೀಯ ಮತ್ತು ಸುಗಂಧ ಸಸ್ಯಗಳ ಕುರಿತ ಪ್ರದರ್ಶನದ ಮಳಿಗೆಯನ್ನು (10X10 ಅಡಿ ವಿಸ್ತೀರ್ಣ) ಹಾಕಲು ಅವಕಾಶ ಕಲ್ಪಿಸಲಾಗಿದ್ದು, ಸಮ್ಮೇಳನದಲ್ಲಿ ರಾಜ್ಯ ಹಾಗೂ ಹೊರ ರಾಜ್ಯದ ಪ್ರತಿನಿಧಿಗಳು ಭಾಗವಹಿಸಬಹುದು. ಪ್ರದರ್ಶನದ ಮಳಿಗೆಯನ್ನು ಹಾಕಲು ಇಚ್ಛಿಸುವ ಆಸಕ್ತ ಕಂಪನಿಗಳು ಮತ್ತು ಉದ್ಯಮದಾರರು ಡಿ.31ರೊಳಗಾಗಿ ಮೊ.ಸಂ: 9880405181, 9743084194, 9845258894 ಅನ್ನು ಸಂಪರ್ಕಿಸಬಹುದು

ಶ್ರೀ ಕಲ್ಯಾಣ ಲಕ್ಷ್ಮೀ ವೆಂಕಟರಮಣ ದೇವಸ್ಥಾನದಲ್ಲಿ ಲಕ್ಷ ದೀಪೋತ್ಸವ



ಮೈಸೂರಿನ ಡಾ.ರಾಜ್‌ಕುಮಾರ್ ರಸ್ತೆಯಲ್ಲಿರುವ ಶ್ರೀ ಕಲ್ಯಾಣ ಲಕ್ಷ್ಮೀ ವೆಂಕಟರಮಣ ಸ್ವಾಮಿ ದೇವಸ್ಥಾನದ ಬಳಿ ಭಾನುವಾರ ಸಂಜೆ ಲಕ್ಷ ದೀಪೋತ್ಸವ ನಡೆಯಿತು.

ಮೈಸೂರು, ಡಿ.15(ಎಸ್‌ಬಿಡಿ)– ಮೈಸೂರಿನ ಕಲ್ಯಾಣಗಿರಿನಗರ, ಡಾ.ರಾಜ್‌ಕುಮಾರ್ ರಸ್ತೆಯಲ್ಲಿರುವ ಶ್ರೀ ಕಲ್ಯಾಣ ಲಕ್ಷ್ಮೀ ವೆಂಕಟರಮಣ ಸ್ವಾಮಿ ದೇವಸ್ಥಾನದ ಎದುರು ಭಾನುವಾರ ಸಂಜೆ ಲಕ್ಷ ದೀಪೋತ್ಸವ ನಡೆಯಿತು.

ವಿಷ್ಣು ದೀಪೋತ್ಸವ ಪ್ರಯುಕ್ತ ಆಯೋಜಿಸಿದ್ದ ಲಕ್ಷ ದೀಪೋತ್ಸವದಲ್ಲಿ ನೂರಾರು ಭಕ್ತರು ದೀಪ ಬೆಳಗಿಸಿದರು. ಬೆಂಗಳೂರಿನ ಗವಿ ಗಂಗಾಧರೇಶ್ವರ ದೇವಸ್ಥಾನದ ಪ್ರಧಾನ ಅರ್ಚಕರಾದ ಡಾ.ಎಸ್.ಸೋಮಸುಂದರ ದೀಕ್ಷಿತರು, ಆರ್‌ಎಸ್‌ಎಸ್ ಜೇಷ್ಠ ಪ್ರಚಾರಕರಾದ ಸು.ರಾಮಣ್ಣ, ದೇವಸ್ಥಾನದ ಸಂಸ್ಥಾಪಕ ಹೆಚ್.ಜಿ.ಗಿರಿಧರ, ಯೋಗಾನಂದ, ಅಭಿಸ್ವಾ, ದರ್ಶನ್, ರವಿಚಂದ್ರ, ಶ್ರೀನಿಧಿ, ನಿಕಿತ್, ಪಂಪಾಪತಿ ಮತ್ತಿತರರು ಪಾಲ್ಗೊಂಡಿದ್ದರು.

ಲಕ್ಷ ದೀಪೋತ್ಸವಕ್ಕೂ ಮುನ್ನ ದೇವರಿಗೆ ವಿಶೇಷ ಅಲಂಕಾರದೊಂದಿಗೆ ಬೆಳಗ್ಗೆಯಿಂದಲೇ ವಿಶೇಷ ಪೂಜೆ ಸಲ್ಲಿಸಲಾಯಿತು. ಸಾಮ್ರಾಜ್ಯ ಮಹಾಲಕ್ಷ್ಮೀ ಯಾಗ, ಪೂರ್ಣಾಹುತಿ, ಅನ್ನದಾನ, ಭಜನಾ ಕಾರ್ಯಕ್ರಮ ಸೇರಿದಂತೆ ವಿವಿಧ ಕೈಂಕರ್ಯಗಳು ನೆರವೇರಿದ್ದವು. ದೇವರಿಗೆ ಪೂಜೆ ಸಲ್ಲಿಸಿದ ಭಕ್ತರು, ವಿಶೇಷ ಅಲಂಕಾರ, ಹೋಮದ ಸೇವೆ, ಅಲಂಕಾರ ಸೇವೆ, ಅನ್ನದಾನ, ಪ್ರಸಾದ ಸೇವೆ, ಸುವರ್ಣ ಪುಷ್ಪ ಅಷ್ಟೋತ್ತರ ಸೇವೆ, ಮಹಾಸಂಕಲ್ಪ, ಕಮಲ ಪುಷ್ಪಾರ್ಚನೆ ಸೇವೆ, ತುಪ್ಪದ ದೀಪ, ಕಂಕಣ ಕಟ್ಟುವುದು, ಸಾಲಿಗ್ರಾಮ ಅವಭೃತ ತೀರ್ಥಸ್ನಾನ, ದೀಪೋತ್ಸವಕ್ಕೆ ಎಣ್ಣೆ ಸೇರಿದಂತೆ ವಿವಿಧ ಸೇವೆಗಳ ಮೂಲಕ ಕೃತಾರ್ಥರಾದರು.

ದೇಶ - ವಿದೇಶ

ಬಾಂಗ್ಲಾದೇಶದಲ್ಲಿ ಹಿಂದೂಗಳ ಆಸ್ತಿ ಧ್ವಂಸ: ನಾಲ್ವರ ಬಂಧನ

ಢಾಕಾ: ಉತ್ತರ ಬಾಂಗ್ಲಾದೇಶದ ಸುನಾಮ್‌ಗಂಜ್ ಜಿಲ್ಲೆಯಲ್ಲಿ ಹಿಂದೂಗಳ ಮನೆ, ಅಂಗಡಿ ಮತ್ತು ಸ್ಥಳೀಯ ಲೋಕನಾಥ್ ದೇವಾಲಯ ಧ್ವಂಸ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ವರನ್ನು ಪೊಲೀಸರು ಬಂಧಿಸಿದ್ದು, 150ರಿಂದ 170 ಜನರ ವಿರುದ್ಧ ಕೇಸ್ ದಾಖಲಿಸಲಾಗಿದೆ. ಈ ತಿಂಗಳ ಆರಂಭದಲ್ಲಿ ಸುನಮ್‌ಗಂಜ್ ಜಿಲ್ಲೆಯ ದೋರಬಜಾರ್ ಪ್ರದೇಶದಲ್ಲಿ ಆಸ್ತಿ ಧ್ವಂಸ ಹಿನ್ನೆಲೆಯಲ್ಲಿ ನಾಲ್ವರನ್ನು ಬಂಧಿಸಲಾಗಿದೆ ಎಂದು ಢಾಕಾದ ಮಾಧ್ಯಮ ವಿಭಾಗದ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಡಿ.3ರಂದು ಸುನಮ್‌ಗಂಜ್ ಜಿಲ್ಲೆಯ ನಿವಾಸಿ ಆಕಾಶ್‌ದಾಸ್ ಎಂಬಾತ ಫೇಸ್‌ಬುಕ್‌ನಲ್ಲಿ ಮಾಡಿದ್ದ ಪೋಸ್ಟ್ ಜಿಲ್ಲೆಯಲ್ಲಿ ಉದ್ವಿಗ್ನತೆ ಉಂಟುಮಾಡಿತ್ತು. ಆತ ಪೋಸ್ಟ್‌ನ್ನು ಡಿಲೀಟ್ ಮಾಡಿದ್ದರೂ ಸ್ಕ್ರೀನ್‌ಶಾಟ್‌ಗಳು ವ್ಯಾಪಕವಾಗಿ ಹರಡಿ, ಹಿಂಸಾಚಾರಕ್ಕೆ ಕಾರಣವಾಯಿತು ಎಂದು ಸರ್ಕಾರಿ ಸುದ್ದಿಸಂಸ್ಥೆ ಬಾಂಗ್ಲಾದೇಶ ಸಂಗ್‌ಬಾದ್ ಸಂಸ್ಥಾ (ಬಿಎಸ್‌ಎಸ್) ಹೇಳಿಕೆಯಲ್ಲಿ ತಿಳಿಸಿದೆ.

ಸ್ಥಳೀಯ ಪೊಲೀಸರು ದಾಸ್ ಅವರನ್ನು ತಕ್ಷಣವೇ ಬಂಧಿಸಿದ್ದಾರೆ. ಆದರೆ ಆತನ ಸುರಕ್ಷತೆಯ ಕಳವಳದ ನಡುವೆ ಆತನನ್ನು ಮತ್ತೊಂದು ಠಾಣೆಗೆ ವರ್ಗಾಯಿಸಲಾಗಿದೆ. ಅದೇ ದಿನ ಗುಂಪೊಂದು ಹಿಂದೂ ಸಮುದಾಯದ ಮನೆಗಳು, ಅಂಗಡಿಗಳು, ಸ್ಥಳೀಯ ಲೋಕನಾಥ ದೇವಸ್ಥಾನವನ್ನು ಧ್ವಂಸಗೊಳಿಸಿ, ಹಾನಿಯನ್ನುಂಟು ಮಾಡಿದೆ.

ಅತ್ಯಾಚಾರಕ್ಕೆ ನಿರಾಕರಿಸಿದ ಸೊಸೆಯನ್ನೇ ಕೊಂದು ಹಾಕಿದ ಕಾಮುಕ ಮಾವ



ರಾಯಚೂರು: ಅತ್ಯಾಚಾರಕ್ಕೆ ನಿರಾಕರಿಸಿದ ಸೊಸೆಯನ್ನೇ ಕಾಮುಕ ಮಾವ ಕೊಂದು ಹಾಕಿರುವ ಘಟನೆ ರಾಯಚೂರಿನ ಜುಲಮಗೇರಾ ಗ್ರಾಮದಲ್ಲಿ ನಡೆದಿದ್ದು, 27 ವರ್ಷದ ದುಳಮ್ಮ ಮೃತ ಮಹಿಳೆ. ಆಕೆಯ ಮೇಲೆ ಅತ್ಯಾಚಾರಕ್ಕೆ ಯತ್ನಿಸಿ ಕೊಲೆ ಮಾಡಿದ ಮಾವನನ್ನು ಸಂತುಳ್ಳ ರಾಮಲಿಂಗಯ್ಯ ಕುಂಡಘಾಲಯ್ಯ ಎನ್ನಲಾಗಿದೆ. ಪೊಲೀಸ್ ಮೂಲಗಳ ಪ್ರಕಾರ ಮಾವ ರಾಮಲಿಂಗಯ್ಯನಿಗೆ ಮೊದಲಿನಿಂದಲೂ ಸೊಸೆ ಮೇಲೆ ಕಣ್ಣಿತ್ತು. ಈ ಹಿಂದೆ ಎರಡ್ಮೂರು ಬಾರಿ ಸೊಸೆಯ ಮೇಲೆ ಅತ್ಯಾಚಾರಕ್ಕೆ ಯತ್ನಿಸಿದ್ದ. ಈ ವಿಚಾರ ಕುಟುಂಬಸ್ಥರಿಗೆ ತಿಳಿದು ಗ್ರಾಮದ ಹಿರಿಯರು, ಕುಟುಂಬಸ್ಥರು ರಾಮಲಿಂಗಯ್ಯಗೆ ಬೈದು ಬುದ್ಧಿ ಹೇಳಿದ್ದರು. ಆಗ ಸುಮ್ಮನಿದ್ದ ರಾಮಲಿಂಗಯ್ಯ ಸಮಯಕ್ಕಾಗಿ ಕಾಯುತ್ತಿದ್ದ. ನಿನ್ನೆ ಮನೆಯಲ್ಲಿ ಎಲ್ಲರೂ ಕೆಲಸಕ್ಕೆ ಹೋದ ವೇಳೆ ಧುಳಮ್ಮನ ಮೇಲೆ ಅತ್ಯಾಚಾರಕ್ಕೆ ಯತ್ನಿಸಿದ್ದಾನೆ. ಇದಕ್ಕೆ ವಿರೋಧ ವ್ಯಕ್ತಪಡಿಸಿದ ಸೊಸೆ ಮಾವನಿಂದ ತಪ್ಪಿಸಿಕೊಂಡು ಓಡಿ ಹೋಗುತ್ತಿದ್ದಾಗ ಸಲಾಕೆಯಿಂದ ತಲೆಗೆ ಒಡೆದು ಪರಾರಿಯಾಗಿದ್ದಾನೆ. ಪರಿಣಾಮ ಸೊಸೆ ಧೂಳಮ್ಮ ಸ್ಥಳದಲ್ಲೇ ಸಾವನ್ನಪ್ಪಿದ್ದಾಳೆ. ಯರಗೇರಾ ಠಾಣೆಯ ಪೊಲೀಸರು ಸ್ಥಳ ಪರಿಶೀಲಿಸಿ, ರಾಮಲಿಂಗಯ್ಯ ಪತ್ತೆಗೆ ಬಲೆ ಬೀಸಿದ್ದಾರೆ.

ರಷ್ಯಾಗೆ ಬ್ರಹ್ಮಾಸ್ತ್ರ, ಉಕ್ರೇನ್‌ಗೆ ಸಂಕಷ್ಟ: ಎರಡು ಗಂಟೆಯಲ್ಲಿ ಇಡೀ ಗ್ರಾಮ ಉತ್ತರ ಕೊರಿಯಾ ವಶಕ್ಕೆ



ಉಕ್ರೇನ್: ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧವು ಕೊನೆಗೊಳ್ಳುವ ಬದಲು ಹೆಚ್ಚು ಅಪಾಯಕಾರಿಯಾಗುತ್ತಿದೆ. ಅದನ್ನು ಕೊನೆಗೊಳಿಸುವ ಎಲ್ಲಾ ಪ್ರಯತ್ನಗಳು ಇಲ್ಲಿಯವರೆಗೆ ಅಸಮರ್ಪಕವೆಂದು ಸಾಬೀತಾಗಿದೆ. ಉತ್ತರ ಕೊರಿಯಾದ ಸೈನ್ಯವು ರಷ್ಯಾದ ಬೆಂಬಲಕ್ಕೆ ಬಂದ ನಂತರ ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿದೆ. ಕಿಮ್ ಜಾಂಗ್ ಉನ್ ಸೇನೆಯು ಉಕ್ರೇನ್ ಮೇಲೆ ವಿಧ್ವಂಸಕ ದಾಳಿ ನಡೆಸುತ್ತಿದೆ. ಉತ್ತರ ಕೊರಿಯಾದ ಸೇನೆ ಕುರ್ಸ್ಕ್ ಪ್ರದೇಶದಲ್ಲಿ ನೆಲೆಗೊಂಡಿರುವ ಗ್ರಾಮವನ್ನು ಪ್ರವೇಶಿಸಿತು. ಕೇವಲ ಎರಡು ಗಂಟೆಗಳಲ್ಲಿ ಕಿಮ್ ಜಾಂಗ್ ಉನ್ ಸೇನೆ ಇಡೀ ಗ್ರಾಮವನ್ನು ವಶಪಡಿಸಿಕೊಂಡಿದೆ.

ಕುರ್ಸ್ಕ್ ಪ್ರದೇಶದ ಗ್ರಾಮದಲ್ಲಿ ನಿಯೋಜಿಸಲಾದ ಉಕ್ರೇನಿಯನ್ ಸೈನಿಕರು ಕೊಲ್ಲಲ್ಪಟ್ಟರು ಅಥವಾ ಓಡಿಹೋದರು ಎಂದು ಹೇಳಲಾಗುತ್ತಿದೆ. ಉತ್ತರ ಕೊರಿಯಾದ ಸೈನಿಕರು ನೆಲದ ಮೇಲೆ ಉಕ್ರೇನ್ ವಿರುದ್ಧ ದೊಡ್ಡ ಕಾರ್ಯಾಚರಣೆ ಪ್ರಾರಂಭಿಸಿದ್ದಾರೆ. ಉತ್ತರ ಕೊರಿಯಾ ಸೈನಿಕರು ಕೇವಲ 2 ಗಂಟೆಗಳಲ್ಲಿ 300 ಉಕ್ರೇನಿಯನ್ ಸೈನಿಕರನ್ನು ಕೊಂದರು. ಉತ್ತರ ಕೊರಿಯಾದ ಸೇನೆಯು ಒಬ್ಬ ಉಕ್ರೇನಿಯನ್ ಸೈನಿಕನನ್ನು ಸಹ ಬಂಧಿಸಿಲ್ಲ ಎಂದು ಹೇಳಲಾಗುತ್ತಿದೆ. ಇದರರ್ಥ ಉಕ್ರೇನಿಯನ್ ಸೈನಿಕರು ಕೊಲ್ಲಲ್ಪಟ್ಟರು ಎನ್ನಲಾಗಿದೆ

ಅಕ್ರಮ ಸಂಬಂಧ ನಿರಾಕರಿಸಿದ ಮಹಿಳೆ ಶಿರಚ್ಛೇದ, ದೇಹ ತುಂಡು.. ತುಂಡು...



ಕೋಲ್ಕತಾ: ತನ್ನೊಂದಿಗೆ ಅಕ್ರಮ ಸಂಬಂಧಕ್ಕೆ ಒಪ್ಪಲಿಲ್ಲ ಎಂಬ ಒಂದೇ ಕಾರಣಕ್ಕೆ ದೂರ್ತನೋರ್ವ ಮಹಿಳೆಯ ಶಿರಚ್ಛೇದ ಮಾಡಿ, ಆಕೆಯ ದೇಹವನ್ನು ತುಂಡು ತುಂಡಾಗಿ ಕತ್ತರಿಸಿ ಬಿಸಾಡಿರುವ ದಾರುಣ ಘಟನೆ ಕೋಲ್ಕತಾದಲ್ಲಿ ನಡೆದಿದೆ. ಈ ಹಿಂದೆ ಕೋಲ್ಕತಾದ ಟೋಲಿಗಂಜ್ ಪ್ರದೇಶದಲ್ಲಿ ಸುಮಾರು 30 ವರ್ಷದ ಮಹಿಳೆಯ ಕತ್ತರಿಸಿದ ತಲೆ ಪತ್ತೆಯಾಗಿತ್ತು. ಮಹಿಳೆ ರುಂಡವನ್ನು ವಶಪಡಿಸಿಕೊಂಡಿದ್ದ ಪೊಲೀಸರು ಬಳಿಕ ಆಕೆಯ ಸಂಬಂಧಿಕರು, ಸ್ನೇಹಿತರು ಮತ್ತು ಪರಿಚಿತರನ್ನು ತನಿಖೆಗೆ ಒಳಪಡಿಸಿದಾಗ ಆಕೆಯ ಸೋದರ ಮಾವ 'ಅತಿಉರ್ ರೆಹಮಾನ್ ಲಸ್ಕರ್' ಎಂಬಾತ ಆಕೆ ಹಿಂದೆ ಬಿದ್ದಿದ್ದ ವಿಚಾರ ತಿಳಿದುಬಂದಿದೆ. ಪೊಲೀಸರು ತೀವ್ರ ವಿಚಾರಣೆ ನಡೆಸಿದಾಗ ಆತ ತಾನು ಮಾಡಿದ ಘೋರ ಕೃತ್ಯ ಬಹಿರಂಗಪಡಿಸಿದ್ದಾನೆ. ಒಂದು ದಿನ ಯಾರೂ ಇಲ್ಲದಾಗ ನಿರ್ಮಾಣ ಹಂತದ ಕಟ್ಟಡಕ್ಕೆ ಕರೆದೊಯ್ದು ಆಕೆಯನ್ನು ಬಲವಂತ ಮಾಡಿದೆ. ಆದರೆ ಆಕೆ ನಿರಾಕರಿಸಿದಾಗ ಆಕೆಯನ್ನು ಕತ್ತು ಹಿಸುಕಿ ಕೊಂದು ಹಾಕಿದೆ. ಬಳಿಕ ಪೊಲೀಸರಿಗೆ ಸಿಕ್ಕಿ ಬೀಳುವ ಭಯದಿಂದ ಆಕೆಯ ರುಂಡವನ್ನು ಕತ್ತರಿಸಿ, ಆಕೆಯ ದೇಹವನ್ನು ತುಂಡು ತುಂಡಾಗಿ ಬೇರ್ಪಡಿಸಿ ಪಾಲಿಥಿನ್ ಕವರ್‌ಗೆ ಹಾಕಿಕೊಂಡು ಬೇರೆ ಬೇರೆ ಸ್ಥಳಗಳಲ್ಲಿ ಎಸೆದು ಬಂದಿದ್ದೆ ಎಂದು ಹೇಳಿದ್ದಾನೆ.

ಕಾನ್ಸರ್ಟ್‌ನಲ್ಲಿ ಹಿಜಾಬ್ ಧರಿಸದ ಇರಾನ್ ಗಾಯಕಿ ಬಂಧನ



ಇರಾನ್: ಕಾನ್ಸರ್ಟ್‌ನಲ್ಲಿ ಹಿಜಾಬ್ ಧರಿಸದ ಕಾರಣ ಇರಾನ್ ಗಾಯಕಿ ಪರಸ್ಟೋ ಅಹ್ಮದಿಯನ್ನು ಪೊಲೀಸರು ಬಂಧಿಸಿದ್ದಾರೆ. ಇರಾನ್‌ನಲ್ಲಿ ಹಿಜಾಬ್ ವಿವಾದ ಇನ್ನೂ ಮುಂದುವರೆದಿದೆ. ಇಲ್ಲಿ ಗಾಯಕಿ ಹಿಜಾಬ್ ಇಲ್ಲದೆ ಲೈವ್‌ನಲ್ಲಿ ಹಾಡಿದ್ದರು. ಇರಾನಿನ ವಕೀಲ ಮಿಲಾದ್ ಪನಾಹಿಪೂರ್ ಪ್ರಕಾರ, 27 ವರ್ಷದ ಮಹಿಳಾ ಗಾಯಕಿ ಪರಸ್ಟೋ ಅಹ್ಮದಿ ಅವರನ್ನು ಬಂಧಿಸಲಾಗಿದೆ. ಆಕೆ ತನ್ನ ಸಂಗೀತ ಕಾರ್ಯಕ್ರಮವನ್ನು ಆನ್‌ಲೈನ್‌ನಲ್ಲಿ ಪೋಸ್ಟ್ ಮಾಡಿದ ನಂತರ ಗುರುವಾರ ದಾಖಲಿಸಿದ ಪ್ರಕರಣದ ನಂತರ ಆಕೆಯ ಬಂಧನವಾಗಿದೆ. ಆಕೆ ತೋಳಿಲ್ಲದ ಅಂಗಿ ಧರಿಸಿದ್ದಳು, ಜತೆಗೆ ಹಿಜಾಬ್ ಧರಿಸಿರಲಿಲ್ಲ. ವಿಡಿಯೋದಲ್ಲಿ ನಾಲ್ಕು ಪುರುಷರು ಕೂಡ ಅವಳೊಂದಿಗಿದ್ದರು ಎಂಬ ಕಾರಣಕ್ಕೆ ಆಕೆಯನ್ನು ಬಂಧಿಸಲಾಗಿದೆ. ಇರಾನ್‌ನಲ್ಲಿ ಮಹಿಳೆಯರ ಹಾಡುಗಾರಿಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಯಿತು. ಇದರ ನಂತರ, ಪುರುಷರ ಮುಂದೆ ಹಾಡುವುದು ಮತ್ತು ನೃತ್ಯ ಮಾಡುವುದನ್ನು ನಿಷೇಧಿಸಲಾಯಿತು. ಮಹಿಳೆಯರು ಹಾಡಿನ ಕೆಲವು ಭಾಗಗಳನ್ನು ಮಾತ್ರ ಹಾಡಬಹುದು. ಆದರೆ ಮಹಿಳೆಯರಿಗೆ ಮಾತ್ರ ಇರುವ ಸಭಾಂಗಣದಲ್ಲಿ ಹಾಡಲು ಅವಕಾಶವಿದೆ.

ಅತ್ತೆ, ಸಂಬಂಧಿಕ ಮಹಿಳೆ ಮೇಲೆ ಅಳಿಯನಿಂದ ಮಾರಣಾಂತಿಕ ಹಲ್ಲೆ

ಮಡಿಕೇರಿ: ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ಮನೆ ಹಿಂಬದಿ ಬಾಗಿಲು ಒಡೆದು ಒಳ ನುಗ್ಗಿದ ಅಳಿಯ ತನ್ನ ಅತ್ತೆ ಮತ್ತು ಸಂಬಂಧಿ ಮಹಿಳೆಯ ಮೇಲೆ ಕತ್ತಿಯಿಂದ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ಭಾಗಮಂಡಲ ಸಮೀಪದ ಅಯ್ಯಂಗೇರಿ ಗ್ರಾಮದಲ್ಲಿ ನಡೆದಿದೆ.

ಮಡಿಕೇರಿ ನಿವಾಸಿ ಹ್ಯಾರೀಸ್ ಕೃತ್ಯ ಎಸಗಿದ್ದು, ಆತನ್ನು ಪೊಲೀಸರು ಬಂಧಿಸಿದ್ದಾರೆ. ಹ್ಯಾರೀಸ್‌ಗೆ ತನ್ನ ಪತ್ನಿಯ ಕುಟುಂಬದ ಜೊತೆ ಕಲಹವಿತ್ತು ಎನ್ನಲಾಗಿದೆ. ಈ ಹಿನ್ನೆಲೆಯಲ್ಲಿ ಅಯ್ಯಂಗೇರಿ ಗ್ರಾಮದಲ್ಲಿರುವ ಅತ್ತೆ ಮನೆಗೆ ತೆರಳಿದ ಹ್ಯಾರೀಸ್, ಮನೆಯ ಮುಂಭಾಗದ ಚಿಲುಕ ಹಾಕಿ, ಹಿಂಬದಿ ಬಾಗಿಲು ಒಡೆದು ಮನೆ ಒಳ ನುಗ್ಗಿ ಮಹಿಳೆಯರ ಮೇಲೆ ಏಕಾಏಕಿ ಕತ್ತಿಯಿಂದ ಹಲ್ಲೆ ನಡೆಸಿದ್ದಾನೆ. ಕತ್ತಿ ಪ್ರಹಾರದಿಂದ ಅತ್ತೆ ಐಸಮ್ಮ ಮತ್ತು ಸಂಬಂಧಿ ಕದೀಜ ಅವರಿಗೆ ಗಂಭೀರ ಗಾಯಗಳಾಗಿದ್ದು ಚಿಕಿತ್ಸೆಗಾಗಿ ಮೈಸೂರು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಹ್ಯಾರೀಸ್ ಕೃತ್ಯ ಎಸಗಿದ ಬಳಿಕ ಆಟೋದೊಂದಿಗೆ ಪರಾರಿಯಾಗಲು ಯತ್ನಿಸಿದ್ದ. ಮಾಹಿತಿ ಅರಿತ ತುರ್ತು ಸ್ಪಂದನ ಘಟಕ (112) ಹಾಗೂ ನಾಪೋಕ್ಲು ಪೊಲೀಸರು ಆರೋಪಿಯನ್ನು ಬೆನ್ನಟ್ಟಿ ನಾಪೋಕ್ಲು ಬಳಿಯ ಹೊದ್ದೂರು ಗ್ರಾಮದಲ್ಲಿ ವಶಕ್ಕೆ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಈ ಘಟನೆ ಕುರಿತು ಭಾಗಮಂಡಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಕೋಟೆ ಆವರಣದಲ್ಲಿ ಪುತ್ತರಿ ಕೋಲಾಟ

● ಗಮನ ಸೆಳೆದ ಉಮ್ಮತ್ತಾಟ್, ತಾಲಿಪಾಟ್ ನೃತ್ಯ ಪ್ರದರ್ಶನ ● ಕೊಡಗಿನ ಸಾಂಪ್ರದಾಯಿಕ ವಾಲಗದೊಂದಿಗೆ ಸಂಭ್ರಮಾಚರಣೆ


ಮಡಿಕೇರಿ ಕೋಟೆ ಆವರಣದಲ್ಲಿ ಪುತ್ತರಿ ಕೋಲಾಟ ನಡೆಯಿತು.

ಮಡಿಕೇರಿ, ಡಿ.15(ಪಿಎಸ್)–ಐತಿಹಾಸಿಕ ಹಿನ್ನೆಲೆ ಹೊಂದಿರುವ ನಗರದ ಕೋಟೆ ಆವರಣದಲ್ಲಿ ಮಡಿಕೇರಿ ಕೊಡವ ಸಮಾಜ, ಶ್ರೀ ಓಂಕಾರೇಶ್ವರ ದೇವಾಲಯ ಸಮಿತಿ ಮತ್ತು ಹೆಬ್ಬೆಟ್ಟಗೇರಿಯ ಪಾಂಡೀರ ಕುಟುಂಬಸ್ಥರ ಸಂಯುಕ್ತ ಆಶ್ರಯದಲ್ಲಿ ಪುತ್ತರಿ ಕೋಲಾಟ ಕಾರ್ಯಕ್ರಮ ನಡೆಯಿತು.

ಪಾಂಡೀರ ಕುಟುಂಬಸ್ಥರಿಂದ ಪ್ರಾರಂಭಿಕವಾಗಿ ಪುತ್ತರಿ ಕೋಲಾಟ ನಡೆಯಿತು. ನಂತರ ಪಾಂಡೀರ ಕುಟುಂಬದ ಮಹಿಳಾ ಸದಸ್ಯರಿಂದ ನಡೆದ ಉಮ್ಮತ್ತಾಟ್, ತಾಲಿ ಪಾಟ್ ನೃತ್ಯ ಪ್ರದರ್ಶನ ಗಮನ ಸೆಳೆಯಿತು. ಪುಟ್ಟ ಮಕ್ಕಳಿಂದ ಹಿಡಿದು ವಯೋವೃದ್ಧರಾಗಿ ವಿವಿಧನೃತ್ಯ ಪ್ರಕಾರಗಳಲ್ಲಿ ಪಾಲ್ಗೊಂಡು ಸಂಭ್ರಮಿಸಿದರು. ಮಡಿಕೇರಿ ಕೊಡವ ಸಮಾಜದಿಂದ ಕೋಲಾಟ್, ಉಮ್ಮತ್ತಾಟ್, ಪರೆಯಕಳಿ ಮತ್ತಿತರ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿದವು. ಸಮಾರೋಪದಲ್ಲಿ ಕೊಡಗಿನ ಸಾಂಪ್ರದಾಯಿಕ ವಾಲಗಕ್ಕೆ ನೆರೆದಿದ್ದವರು ಕುಣಿದು ಕುಪ್ಪಳಿಸಿ ಸಂಭ್ರಮಿಸಿದರು.

ಪುತ್ತರಿ ಕೋಲಾಟಕ್ಕೆ ಚಾಲನೆ ನೀಡಿ ಮಾತನಾಡಿದ ಮಾಜಿ ಶಾಸಕ ಕೆ.ಜಿ.ಬೋಪಯ್ಯ, ಕೊಡಗಿನ ಆಚಾರ, ವಿಚಾರ ಸಂಸ್ಕೃತಿ ಕಲೆಗಳು ಶಾಶ್ವತವಾಗಿ ಉಳಿಯಬೇಕು. ಇದಕ್ಕೆ ಎಲ್ಲರೂ ಸಹಕಾರ ನೀಡಬೇಕು. ಮೊದಲು ಗದ್ದುಗೆ ಆವರಣದಲ್ಲಿ ಪಾಂಡೀರ ಕುಟುಂಬಸ್ಥರು ಆಚರಿಸುತ್ತಿದ್ದ ಪುತ್ತರಿ ಕೋಲಾಟವನ್ನು ನಾನು ಮೊದಲ ಬಾರಿಗೆ ಶಾಸಕರಾದ ಸಂದರ್ಭ ಅರಮನೆ ಮೈದಾನಕ್ಕೆ ಸ್ಥಳಾಂತರಿಸಲಾಗಿದೆ ಎಂದರು.

ಪಾಂಡೀರ ಕುಟುಂಬ ಸದಸ್ಯ ಪಾಂಡೀರ ಮುತ್ತಣ್ಣ ಮಾತನಾಡಿ, ಹಾಲೇರಿ ರಾಜರ ಕಾಲದಿಂದಲೇ ಪುತ್ತರಿ ಹಬ್ಬದ ಮರುದಿನ ಪುತ್ತರಿ ಕೋಲಾಟ ನಡೆಸಿಕೊಂಡು ಬರಲಾಗಿತ್ತು. ಈ ಹಿನ್ನೆಲೆಯಲ್ಲಿ ಪುತ್ತರಿ ಕೋಲಾಟಕ್ಕೆ ಐತಿಹಾಸಿಕ ಹಿನ್ನೆಲೆ ಇದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ನಗರಸಭೆ ಮಾಜಿ ಅಧ್ಯಕ್ಷೆ ನೆರವಂಡ ಅನಿತಾ ಪೂವಯ್ಯ, ಓಂಕಾರೇಶ್ವರ ದೇವಾಲಯ ವ್ಯವಸ್ಥಾಪನಾ ಸಮಿತಿ ಮಾಜಿ ಅಧ್ಯಕ್ಷ ರಮೇಶ್ ಹೊಳ್ಳ, ಕಾರ್ಯನಿರ್ವಹಣಾಧಿಕಾರಿ ದೇವರಾಜ್, ಪಾಂಡೀರ ವಿಜಯ, ಪಾಂಡೀರ ಮುತ್ತಣ್ಣ, ಸಜನ್ ಪೂಣಚ್ಚ ಸಂತೋಷ್, ಮಡಿಕೇರಿ ಕೊಡವ ಸಮಾಜ ಆಡಳಿತ ಮಂಡಳಿ ಪದಾಧಿಕಾರಿ ಕನ್ನಂಡ ಸಂಪತ್, ಕೊಡವ ಸಮಾಜದ ಪೊಮ್ಮಕ್ಕಡ ಕೂಟದ ಸದಸ್ಯರು, ವಿವಿಧ ಕೊಡವ ಕೇರಿಗಳ ಅಧ್ಯಕ್ಷರು ಹಾಜರಿದ್ದರು.

ಕುಶಾಲನಗರದಲ್ಲಿ ಗೌಡ ಸಮಾಜದಿಂದ ಕದಿರು ವಿತರಣೆ


ಕುಶಾಲನಗರದಲ್ಲಿ ಗೌಡ ಸಮಾಜದ ವತಿಯಿಂದ ಹುತ್ತರಿ ಅಂಗವಾಗಿ ಕದಿರು ವಿತರಿಸಲಾಯಿತು.

ಕುಶಾಲನಗರ, ಡಿ.15–ಪಟ್ಟಣದ ಗೌಡ ಸಮಾಜದ ವತಿಯಿಂದ ಹುತ್ತರಿ ಹಬ್ಬ ಆಚರಣೆ ಹಾಗೂ ಸಾರ್ವಜನಿಕರಿಗೆ ಕದಿರು ವಿತರಣೆ ಕಾರ್ಯಕ್ರಮ ನಡೆಯಿತು.

ಗೌಡ ಸಮಾಜ, ಗೌಡ ಯುವಕ ಸಂಘ, ಗೌಡ ಮಹಿಳಾ ಸ್ವಸಹಾಯ ಸಂಘ, ನಿವೃತ್ತ ಗೌಡ ಸೈನಿಕರ ಒಕ್ಕೂಟ, ಪದ್ಮಾವತಿ ಗೌಡ ಮಹಿಳಾ ಒಕ್ಕೂಟ, ಗೌಡ ಸಾಂಸ್ಕೃತಿಕ ವೇದಿಕೆ ಸಹಯೋಗದೊಂದಿಗೆ ನಡೆದ ಹುತ್ತರಿ ಆಚರಣೆ ಸಂಪ್ರದಾಯದಂತೆ ಸಮಾಜದ ಪ್ರಮುಖರು, ಸದಸ್ಯರು ಗೌಡ ಸಮಾಜದಲ್ಲಿ ಸೇರಿ ಫಲಹಾರ ಸೇವಿಸಿದರು. ನಂತರ ನೆರೆಕಟ್ಟಿ ಗಣಪತಿ ದೇವಾಲಯಕ್ಕೆ ಮೆರವಣಿಗೆ ಮೂಲಕ ತೆರಳಿ ಪೂಜೆ ಸಲ್ಲಿಸಲಾಯಿತು.

ಬಳಿಕ ಹಾರಂಗಿ ರಸ್ತೆಯಲ್ಲಿರುವ ಗೌಡ ಯುವಕ ಸಂಘ ಕಟ್ಟಡದ ಬಳಿಯ ಹುತ್ತರಿ ಗದ್ದೆಗೆ ಪೂಜೆ ಸಲ್ಲಿಸಿ ಗದ್ದೆಯಿಂದ ಕದಿರು ತೆಗೆದು ಸಾರ್ವಜನಿಕರಿಗೆ ವಿತರಿಸಲಾಯಿತು.

ಈ ಸಂದರ್ಭ ಗೌಡ ಸಮಾಜದ ಅಧ್ಯಕ್ಷ ಚಿಲ್ಲನ ಗಣಿ ಪ್ರಸಾದ್, ಉಪಾಧ್ಯಕ್ಷರಾದ ಸೆಟ್ಟೇಜನ ದೊರೆ ಗಣಪತಿ, ಕುಲ್ಲಚೆಟ್ಟಿರ ಕಾಶಿಪೂವಯ್ಯ, ಗೌಡ ಯುವಕ ಸಂಘದ ಅಧ್ಯಕ್ಷ ಕೊಡಗನ ಹರ್ಷ, ಸಮಾಜದ ಕಾರ್ಯದರ್ಶಿ ಕುಲ್ಲಚನ ಹೇಮಂತ್, ದಬ್ಬಡ್ಕ ಡಾಟಿ ಶಾಂತಕುಮಾರಿ, ಖಜಾಂಚಿ ಬಳ್ಳಡ್ಕ ವಿಜಯಕುಮಾರ್, ಗೌಡ ಮಹಿಳಾ ಸ್ವಸಹಾಯ ಸಂಘದ ಅಧ್ಯಕ್ಷೆ ಚೆರಿಯಮನೆ ಋಷಿ ಹರೀಶ್, ನಿವೃತ್ತ ಗೌಡ ಸೈನಿಕರ ಒಕ್ಕೂಟದ ಅಧ್ಯಕ್ಷ ದೇವಜನ ಚಿನ್ನಪ್ಪ, ವಿವಿಧ ಸಂಸ್ಥೆಗಳ ಅಧ್ಯಕ್ಷರು, ಪದಾಧಿಕಾರಿಗಳು, ಸಮಾಜದ ಸದಸ್ಯರು ಇದ್ದರು.

ಸಿಎನ್‌ಸಿಯಿಂದ ಪುತ್ತರಿ ನಮ್ಮೆ ಆಚರಣೆ

ಮಡಿಕೇರಿ, ಡಿ.15(ಪಿಎಸ್)–ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಆಶ್ರಯದಲ್ಲಿ 31ನೇ ವರ್ಷದ ಪುತ್ತರಿ ನಮ್ಮೆಯನ್ನು ಬಾಳೆಲೆಯಲ್ಲಿ ಆಚರಿಸಲಾಯಿತು.

ಕೊಡವ ಲ್ಯಾಂಡ್‌ನ ಪತ್ತ್‌ಕಟ್ ನಾಡ್‌ನ ಬಾಳೆಲೆ ಬಳಿಯ ಬಿಳೂರು ಗ್ರಾಮದ ಕಾಂಡೆರ ಸುರೇಶ್ ಅವರ ಭತ್ತದ ಗದ್ದೆಯಲ್ಲಿ ಕದಿರು ತೆಗೆಯುವ ಮೂಲಕ ಆಚರಿಸಲಾಯಿತು. ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ನೇತೃತ್ವದಲ್ಲಿ ದುಡಿಕೊಟ್ಟ್–ಪಾಟ್ ಮೂಲಕ ಗದ್ದೆಗೆ ಮೆರವಣಿಗೆಯಲ್ಲಿ ತೆರಳಿ ಗಾಳಿಯಲ್ಲಿ ಗುಂಡು ಹಾರಿಸಿ ಹಬ್ಬದ ಸಂದೇಶ ಸಾರಲಾಯಿತು. ಬಳಿಕ ಕೊಡವ ಆಟ್–ಪಾಟ್ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಇದೇ ಸಂದರ್ಭ ಮಾನವ ಸರಪಳಿ ಮೂಲಕ ಕೊಡವ ಲ್ಯಾಂಡ್, ವಿಶ್ವ ಸಂಸ್ಥೆ ಘೋಷಣೆ ಪ್ರಕಾರ ಅತ್ಯಂತ ಸಣ್ಣ ಪ್ರಾಚೀನ ಬುಡಕಟ್ಟಾದ ಕೊಡವರಿಗೆ ಅಂತಾರಾಷ್ಟ್ರೀಯ ಕಾನೂನಡಿ ಭದ್ರತೆ ಮತ್ತು ರಾಜ್ಯಾಂಗ ಖಾತ್ರಿಗಾಗಿ ಸೂರ್ಯ–ಚಂದ್ರ, ಜಲದೇವಿ ಕಾವೇರಿ, ಸಂವಿಧಾನ ಮತ್ತು ಗುರು–ಕಾರೋಣರ ಹೆಸರಿನಲ್ಲಿ ಪ್ರತಿಜ್ಞಾವಿಧಿ ಸ್ವೀಕರಿಸಲಾಯಿತು. ಕೊಡವ ನ್ಯಾಷನಲ್ ಕೌನ್ಸಿಲ್ ಕೊಡವರು ಸೇರಿದಂತೆ ಎಲ್ಲರ ಯೋಗ ಕ್ಷೇಮ, ಸಮೃದ್ಧಿ ಮತ್ತು ಕೊಡಗಿನಲ್ಲಿ ಸಾಮರಸ್ಯ ನೆಲೆಸಲೆಂದು ಪ್ರಾರ್ಥಿಸಿದರು. ನಂತರ ಕೊಡವ ಸಂಪ್ರದಾಯಿಕ ಭಕ್ಷ್ಯ ಸ್ವೀಕರಿಸಲಾಯಿತು.

ಕಾರ್ಯಕ್ರಮದಲ್ಲಿ ಕಾಂಡೇರ ರಮ್ಮಿ ಉತ್ತಪ್ಪ, ಕಾಂಡೇರ ಜೀನ ಉತ್ತಪ್ಪ, ಕಲಿಯಂಡ ಪ್ರಕಾಶ್, ಕಾಂಡೇರ ಸುರೇಶ್, ಬೇಪಡಿಯಂಡ ದಿನು, ಅರೆಯಡ ಗಿರೀಶ್, ಚಂಬಂಡ ಜನತ್, ಕಿರಿಯಮಾಡ ಶೆರಿನ್, ಅರೆಯಡ ಸಾವನ್, ಕಾಂಡೇರ ಜಿಮ್ಮಿ ಉತ್ತಪ್ಪ, ಕಿರಿಯಮಾಡ ಶಾನ್, ಕಾಂಡೇರ ಸಾಂಚನ್, ನಂದೇಟಿರ ರವಿ ಸುಬ್ಬಯ್ಯ, ಸಾದೇರ ರಮೇಶ್, ಅವರೆಮಾಡಂಡ ರಮೇಶ್, ಪಾರ್ವಂಗಡ ನವೀನ್, ಜಮ್ಮಡ ಮೋಹನ್, ಮದ್ರೀರ ಕರುಂಬಯ್ಯ, ಮಂಡೆಪಂಡ ರಾಜೇಶ್, ಚಾರಿಮಂಡ ಶಿವು, ಶೇಖರ್ ಪಾಲ್ಗೊಂಡಿದ್ದರು.


ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ನೇತೃತ್ವದಲ್ಲಿ ಬಾಳೆಲೆ ಬಳಿಯ ಬಿಳೂರು ಗ್ರಾಮದ ಭತ್ತದ ಗದ್ದೆಯಲ್ಲಿ ಕದಿರು ತೆಗೆಯುವ ಮೂಲಕ ಪುತ್ತರಿ ನಮ್ಮೆ ಆಚರಿಸಲಾಯಿತು.

ಮೃತದೇಹ ಫ್ರೀಝರ್ ಬಾಕ್ಸ್ ಲೋಕಾರ್ಪಣೆ



ಫ್ರೀಝರ್ ಬಾಕ್ಸ್ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮುತ್ತಪ್ಪ ಮಲಯಾಳಿ ಸಮಾಜದ ಅಧ್ಯಕ್ಷ ಪಿ.ಜಿ.ಸುಮೇಶ್ ಮಾತನಾಡಿದರು.

ವಿರಾಜಪೇಟೆ, ಡಿ.15–ಮೀನುಪೇಟೆಯ ಶ್ರೀ ಮುತ್ತಪ್ಪ ಮಲಯಾಳಿ ಸಮಾಜದ ವತಿಯಿಂದ ನಗರದ ಮಲಬಾರ್ ರಸ್ತೆಯ ಶ್ರೀ ಚೈತನ್ಯ ಮಠಪುರ ಮುತ್ತಪ್ಪನ್ ದೇವಾಲಯ ಆವರಣದಲ್ಲಿ ಮೃತದೇಹ ಫ್ರೀಝರ್ ಬಾಕ್ಸ್ ಲೋಕಾರ್ಪಣೆ ಕಾರ್ಯಕ್ರಮ ನಡೆಯಿತು.

ಇದೇ ವೇಳೆ ಮುತ್ತಪ್ಪ ಮಲಯಾಳಿ ಸಮಾಜದ ಅಧ್ಯಕ್ಷ ಪಿ.ಜಿ.ಸುಮೇಶ್ ಮಾತನಾಡಿ, ಸಂಘದಿಂದ ಸಮಾಜದ ಬಾಂಧವರಿಗೆ ಮರಣ ನಿಧಿ, ಮನೆ ನಿರ್ಮಾಣ, ಸಾಂಸ್ಕೃತಿಕ, ಕ್ರೀಡಾ ಕಾರ್ಯಕ್ರಮ ಆಯೋಜನೆ, ಜನಾಂಗ ಕಲ್ಯಾಣ ಹಾಗೂ ಲೋಕ ಕಲ್ಯಾಣದ ಹಿತದೃಷ್ಟಿಯಿಂದ ಜನಪರ ಸೇವೆಗಳನ್ನು 16 ವರ್ಷಗಳಿಂದ ನಡೆಸಿಕೊಂಡು ಬರಲಾಗುತ್ತಿದೆ. ಇದೀಗ ಸಂಘದ ಸದಸ್ಯರಿಂದ ದೇಣಿಗೆ ಪಡೆದು ಮೃತದೇಹ ಫ್ರೀಝರ್ ಬಾಕ್ಸ್ ಖರೀದಿಸಿ, ಸಾರ್ವಜನಿಕರ ಅನುಕೂಲಕ್ಕಾಗಿ ಲೋಕಾರ್ಪಣೆಗೊಳಿಸಲಾಗಿದೆ ಎಂದರು.

ಮುತ್ತಪ್ಪ ಮಲಯಾಳಿ ಸಮಾಜದ ಕಾರ್ಯದರ್ಶಿ ಸಿ.ಆರ್.ಬಾಬು ಮಾತನಾಡಿ, ಸಂಘ ಸತತ 16 ವರ್ಷಗಳಿಂದ ಜನಾಂಗದವರ ಅಭಿವೃದ್ಧಿಗಾಗಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಜನಾಂಗದವರ ಶವ ಸಂಸ್ಕಾರಕ್ಕೆ ವಿವಿಧ ಸಲಕರಣೆ ಖರೀದಿಸಿ, ಸೇವೆ ಸಲ್ಲಿಸುತ್ತಿದೆ. ಸಂಘದ ಸದಸ್ಯರಿಗೆ ಉಚಿತವಾಗಿ ಮೃತದೇಹ ಫ್ರೀಝರ್ ಬಾಕ್ಸ್ ನೀಡಲಾಗುವುದು. ಮಾಹಿತಿಗೆ ಮೊ.ಸಂ: 9035197151, 9448721118 ಅನ್ನು ಸಂಪರ್ಕಿಸಬಹುದು ಎಂದು ತಿಳಿಸಿದರು.

ಇದೇ ವೇಳೆ ಸಮಾಜದ ಗೌರವಾಧ್ಯಕ್ಷ ಪದ್ಮನಾಭ, ಉಪಾಧ್ಯಕ್ಷ ಸಿ.ಆರ್. ಸಂಜೀವ್, ಕಾರ್ಯಕಾರಿ ಸದಸ್ಯರಾದ ಮುರುಳಿ, ಪಿ.ಡಿ.ಸುರೇಶ್ ವಿ.ಬಿ.ಪ್ರಸಾದ್ ಎ.ಎ.ರಾಜನ್, ಕೆ.ಮತ್ತು, ಪಿ.ಎಂ. ಚಂದ್ರಪ್ರಕಾಶ್, ಕಿಶೋರ್ ಕುಮಾರ್‌ಶೆಟ್ಟಿ ಉಪಸ್ಥಿತರಿದ್ದರು.

ಚಾ.ನಗರದಲ್ಲಿ ಆಹಾರ ಮೇಳ, ವಸ್ತುಪ್ರದರ್ಶನ ಯಶಸ್ವಿ

ಮೂಕನಪಾಳ್ಯ ಸರ್ಕಾರಿ ಶಾಲೆ ಅಭಿವೃದ್ಧಿಗಾಗಿ ರೋಟರಿ ಸಿಲ್ಕ್ ಸಿಟಿಯಿಂದ ಆಯೋಜನೆ


ಚಾಮರಾಜನಗರದ ಸಿದ್ದಮಲ್ಲೇಶ್ವರ ವಿರಕ್ತ ಮಠದ ಆವರಣದಲ್ಲಿ ನಡೆದ ಆಹಾರ ಮೇಳ, ವಸ್ತುಪ್ರದರ್ಶನದಲ್ಲಿ ಅಪಾರ ಸಂಖ್ಯೆಯಲ್ಲಿ ಜನರು ಭಾಗವಹಿಸಿದ್ದರು.


ರೋಟರಿ ಸಿಲ್ಕ್ ಸಿಟಿ ವತಿಯಿಂದ ಇದೇ ಪ್ರಥಮ ಬಾರಿಗೆ ಆಯೋಜಿಸಿದ್ದ ಆಹಾರ ಮೇಳ, ವಸ್ತುಪ್ರದರ್ಶನಕ್ಕೆ ನಿರೀಕ್ಷೆಗೂ ಮೀರಿ ಸ್ಪಂದನೆ ದೊರಕಿದೆ. ಇದಕ್ಕಾಗಿ ಜನತೆಗೆ ಧನ್ಯವಾದ ಸಲ್ಲಿಸುತ್ತೇನೆ. ಇದರಿಂದ ಪ್ರೇರಣೆಗೊಂಡು ಪ್ರತಿವರ್ಷ ಡಿಸೆಂಬರ್‌ನಲ್ಲಿ ಈ ಮೇಳ ಆಯೋಜಿಸಲು ತೀರ್ಮಾನಿಸಿದ್ದೇವೆ.
–ಡಿ.ಪಿ.ವಿಶ್ವಾಸ್, ಅಧ್ಯಕ್ಷ, ಆಹಾರ ಸಮಿತಿ


ಚಾಮರಾಜನಗರದಲ್ಲಿ ಪ್ರಥಮ ಬಾರಿಗೆ ಆಯೋಜಿಸಿರುವ ಆಹಾರ ಮೇಳವನ್ನು ಜನರು ನಿರೀಕ್ಷೆ ಮೀರಿ ಯಶಸ್ವಿಗೊಳಿಸಿದ್ದಾರೆ. ನಮ್ಮ ಮಳಿಗೆಗೆ ಅಪಾರ ಜನರು ಭೇಟಿ ನೀಡಿ ತಿಂಡಿ ಸವಿದಿದ್ದಾರೆ.
–ಪ್ರತಾಪ್, ರೋಟಿಘರ್ ಮಾಲೀಕ


ಆಹಾರ ಮೇಳ ಹಾಗೂ ವಸ್ತು ಪ್ರದರ್ಶನ ಬಹಳ ಚೆನ್ನಾಗಿತ್ತು. ಬಗೆ ಬಗೆಯ ತಿಂಡಿ ತಿನಿಸುಗಳನ್ನು ಸವಿದು ಸಂತೋಷ ಪಟ್ಟೆವು.
–ನಿತ್ಯಾ, ರಾಮಸಮುದ್ರ

ಚಾಮರಾಜನಗರ, ಡಿ.15–ಜಿಲ್ಲೆಯ ಕಾಡಂಚಿನ ಗ್ರಾಮವಾದ ಮೂಕನಪಾಳ್ಯ ಸರ್ಕಾರಿ ಶಾಲೆ ಅಭಿವೃದ್ಧಿಗಾಗಿ ರೋಟರಿ ಸಿಲ್ಕ್ ಸಿಟಿಯಿಂದ ನಗರದ ಶ್ರೀ ಸಿದ್ದಮಲ್ಲೇಶ್ವರ ವಿರಕ್ತ ಮಠದ ಆವರಣದ ಸಿದ್ದಬಸವ ರಾಜಸ್ವಾಮೀಜಿ ಅನುಭವ ಮಂಟಪದಲ್ಲಿ ಎರಡು ದಿನ ಆಹಾರ ಮೇಳ, ವಸ್ತು ಪ್ರದರ್ಶನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.

ಎರಡು ದಿನವೂ ಆಹಾರ ಮೇಳದಲ್ಲಿ ನಗರದ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ರೋಟರಿ ಸಿಲ್ಕ್ ಸಿಟಿಯ ಉದ್ದೇಶ ಹಾಗೂ ಕಾರ್ಯಕ್ರಮಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಮೇಳದಲ್ಲಿ ಸುಮಾರು 20ಕ್ಕೂ ಹೆಚ್ಚು ಆಹಾರ ಮಳಿಗೆಗಳನ್ನು ತೆರೆಯಲಾಗಿತ್ತು. ಬೆಣ್ಣೆ ದೋಸೆ, ಪುಳಿಯೋಗರೆ, ರೋಟಿ, ಪಾನಿಪುರಿ, ಚಿರುಮುರಿ, ಬೇಲ್‌ಪುರಿ ಸೇರಿದಂತೆ ವಿವಿಧ ಚಾಟ್ಸ್‌ಗಳ ಮಳಿಗೆಗಳಿಗೆ ಸಾರ್ವಜನಿಕರು ಭೇಟಿ ನೀಡಿ, ಅಲ್ಲಿನ ಆಹಾರ ಸವಿದು ಖುಷಿಪಟ್ಟರು.

ಮೊದಲ ದಿನ ಮಿಮಿಕ್ರಿ ಗೋಪಿಯಿಂದ ಹಾಸ್ಯ ಕಾರ್ಯಕ್ರಮ, ಎರಡನೇ ದಿನ ಮ್ಯಾಜಿಕ್ ಶೋ ಮಕ್ಕಳು, ಯುವಕರು ಸೇರಿದಂತೆ ಸಾರ್ವಜನಿಕರ ಮನಸೆಳೆಯುವಲ್ಲಿ ಮೇಳ ಹಾಗೂ ವಸ್ತುಪ್ರದರ್ಶನ ಯಶಸ್ವಿಯಾಯಿತು.

ಕಾರ್ಯಕ್ರಮ ಉದ್ಘಾಟಿಸಿದ ಶ್ರೀ ಚನ್ನಬಸವಸ್ವಾಮೀಜಿ ಮಾತನಾಡಿ, ಕಾಡಂಚಿನ ಸರ್ಕಾರಿ ಶಾಲೆ ಅಭಿವೃದ್ಧಿಪಡಿಸಲು ರೋಟರಿ ಸಿಲ್ಕ್ ಸಿಟಿ ತಂಡದವರು ಆಹಾರ ಮೇಳ ಮತ್ತು ವಸ್ತುಪ್ರದರ್ಶನ ಆಯೋಜಿಸಿರುವುದು ವಿಶೇಷವಾಗಿದೆ. ಆಹಾರ ಮೇಳದಲ್ಲಿ ಬಗೆಬಗೆಯ ತಿಂಡಿ, ತಿನಿಸುಗಳು, ವಸ್ತುಪ್ರದರ್ಶನದ ಮಳಿಗೆಗಳಲ್ಲಿ ದೈನಂದಿನ ಉಪಯುಕ್ತ ವಸ್ತುಗಳ ಮಾರಾಟ ಮತ್ತು ಪ್ರದರ್ಶಿಸಲಾಗುವುದು. ಸುಮಾರು 40ಕ್ಕೂ ಹೆಚ್ಚು ಮಳಿಗೆಗಳಿದ್ದು, ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ. ಈ ಕಾರ್ಯಕ್ಕೆ ಹೆಚ್ಚಿನ ಪ್ರೋತ್ಸಾಹ ಹಾಗೂ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಆಹಾರ ಮೇಳ, ವಸ್ತುಪ್ರದರ್ಶನ ಬಹಳ ಅಚ್ಚುಕಟ್ಟಾಗಿ ಆಯೋಜಿಸಲಾಗಿದೆ. ಕಡಿಮೆ ದರದಲ್ಲಿ ಶುಚಿ, ರುಚಿಯಾದ ಆಹಾರ ಸವಿದು ಖುಷಿಯಾಯಿತು. ರೋಟರಿ ಸಿಲ್ಕ್‌ಸಿಟಿಯ ಉದ್ದೇಶ ಉತ್ತಮವಾಗಿದ್ದು, ಮುಂದಿನ ದಿನಗಳಲ್ಲಿ ಇಂತಹ ಕಾರ್ಯಕ್ರಮ ನಗರದಲ್ಲಿ ಹೆಚ್ಚು ನಡೆಯಬೇಕು ಎಂದು ಗ್ರಾಹಕಿ ಮೇಘನಾ ತಿಳಿಸಿದರು.

ಸಮೂಹ ದೇವಾಲಯದಲ್ಲಿ ನಟ ಶಿವರಾಜ್‌ಕುಮಾರ್ ಪೂಜೆ

ಕೊಳ್ಳೇಗಾಲ: ತಾಲೂಕಿನ ಶಿವನಸಮುದ್ರ ಸಮೂಹ ದೇವಾಲಯಕ್ಕೆ ನಟ ಡಾ.ಶಿವರಾಜ್ ಕುಮಾರ್ ಪತ್ನಿ ಗೀತಾ ಶಿವರಾಜ್ ಕುಮಾರ್‌ನೊಂದಿಗೆ ಭಾನುವಾರ ಆಗಮಿಸಿ ವಿಶೇಷ ಪೂಜೆ ಸಲ್ಲಿಸಿದರು.

ಪ್ರತಿ ವರ್ಷದಂತೆ ಈ ಬಾರಿಯೂ ಶಿವರಾಜ್ ಕುಮಾರ್, ಪತ್ನಿಯೊಂದಿಗೆ ಶಿವನಸಮುದ್ರ ಸಮೂಹದ ದೇವಾಲಯಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದರು. ಮೊದಲು ವೆಸ್ಲಿ ಸೇತುವೆ ಬಳಿಯ ಕಾವೇರಿ ನದಿಯಲ್ಲಿ ಸ್ನಾನ ಮಾಡಿ, ಬಾಗಿನ ಅರ್ಪಿಸಿದರು. ನಂತರ ಪಕ್ಕದ ಗಣಪತಿ, ಮಧ್ಯರಂಗನಾಥಸ್ವಾಮಿ, ಶ್ರೀ ಮೀನಾಕ್ಷಿ ಸಮೇತ ಸೋಮೇಶ್ವರ, ಶ್ರೀ ಚಕ್ರದರ್ಶನ ದೇಗುಲಗಳಿಗೆ ತೆರಳಿ ದೇವರ ದರ್ಶನ ಪಡೆದರು.

ಇದೇ ವೇಳೆ ಆದಿಶಕ್ತಿ ಮಾರಮ್ಮ ದೇವಿಗೆ ಸೀರೆ ಕಾಣಿಕೆ ನೀಡಿದರು. ಇದೇ ವೇಳೆ ಶಿವನಸಮುದ್ರ ದೇವಾಲಯ ಆಡಳಿತಾಧಿಕಾರಿ ಬಿ.ಆರ್.ಮಹೇಶ್ ಹಾಗೂ ಕಾರ್ಯನಿರ್ವಾಹಕಾಧಿಕಾರಿ ಸುರೇಶ್, ಶಿವರಾಜ್ ಕುಮಾರ್ ದಂಪತಿಯನ್ನು ಸ್ವಾಗತಿಸಿದರು.

ಬಳಿಕ ಶಿವರಾಜ್ ಕುಮಾರ್ ತಮ್ಮ ಅಭಿಮಾನಿಗಳ ಕುಶಲೋಪರಿ ವಿಚಾರಿಸಿದರು. ಈ ವೇಳೆ ಶಿವರಾಜ್ ಕುಮಾರ್ ಅಭಿಮಾನಿ ಸಂಘದ ಅಧ್ಯಕ್ಷ ಲಾಡ್ಜ್ ಪ್ರಭು, ಅಪ್ಪು ಟೀಂ ಅಧ್ಯಕ್ಷ ರಾಜೇಶ್, ರಾಜ್ಯ ಘಟಕದ ಉಮೇಶ್, ಹೊನ್ನೇಗೌಡ, ಮಲ್ಲ, ನಾರಾಯಣ್, ಸತ್ತೇಗಾಲ ದಿವ್ಯಕುಮಾರ್ ಇನ್ನಿತರರಿದ್ದರು.


ಶಿವನಸಮುದ್ರ ಸಮೂಹ ದೇವಾಲಯದ ಆದಿಶಕ್ತಿ ಮಾರಮ್ಮ ದೇವಿಗೆ ನಟ ಡಾ.ಶಿವರಾಜ್ ಕುಮಾರ್, ಪತ್ನಿ ಗೀತಾ ಶಿವರಾಜ್ ಕುಮಾರ್‌ರೊಂದಿಗೆ ಪೂಜೆ ಸಲ್ಲಿಸಿದರು.

ಸೇವಾ ಭಾರತಿ ಶಾಲೆಯಲ್ಲಿ ಸಾಮರಸ್ಯ ದೀಪೋತ್ಸವ

ಚಾಮರಾಜನಗರ, ಡಿ.15–ವಿಶ್ವ ಹಿಂದೂ ಪರಿಷತ್ ಸಂಚಾಲಿತ ನಗರದ ಸೇವಾ ಭಾರತಿ ಶಿಕ್ಷಣ ಸಂಸ್ಥೆ ವತಿಯಿಂದ ಸಾಮರಸ್ಯ ದೀಪೋತ್ಸವ ನಡೆಯಿತು.

ಸಂಸ್ಥೆಯ ಆಂಗ್ಲ ಮಾಧ್ಯಮ ಪ್ರೌಢಶಾಲೆ ಆವರಣದಲ್ಲಿ ಶಿವದೀಪೋತ್ಸವ ಶುಭದಿನದಂದು ಗೋ ಪೂಜೆ, ತುಳಸಿ, ಲಕ್ಷ್ಮೀ ಪೂಜೆ, ಶಿವದೀಪ, ಸಾಮೂಹಿಕ ಶಿವಲಿಂಗಾರ್ಚನೆ, ಕೋಟಿಲಿಂಗ ಕ್ಷೇತ್ರದಿಂದ ಅನುಗ್ರಹಪೂರ್ವಕವಾಗಿ ತಂದ 108 ಶಿವಲಿಂಗಗಳಿಗೆ ಸಾಮೂಹಿಕ ಭಸ್ಮಾರ್ಚನೆ, ಉಪಾಚಾರ ನಡೆಸಿ, ವಿಶೇಷ ಪೂಜೆ ನೆರವೇರಿಸಲಾಯಿತು.

2100ಕ್ಕೂ ಹೆಚ್ಚು ದೀಪಗಳನ್ನು ಬೆಳಗಿಸಿ ಮಕ್ಕಳು, ಪೋಷಕರು, ಶಿಕ್ಷಣ ಸಂಸ್ಥೆ ಸದಸ್ಯರು, ಶಿಕ್ಷಕರು ಸಂಭ್ರಮಿಸಿದರು. ಕಾರ್ಯಕ್ರಮದಲ್ಲಿ ಸಂಸ್ಥೆ ಆಡಳಿತ ಮಂಡಳಿ ಅಧಿಕಾರಿ ರಮೇಶ್ ಹಾಗೂ ಕಾರ್ಯದರ್ಶಿ ವಾಸುದೇವರಾವ್, ಮುಖ್ಯಶಿಕ್ಷಕ ಜಿ.ಎ.ಮಂಜುನಾಥ್, ಸಿಬ್ಬಂದಿ ಇದ್ದರು.


ಸೇವಾ ಭಾರತಿ ಆಂಗ್ಲ ಮಾಧ್ಯಮ ಪ್ರೌಢಶಾಲೆಯಲ್ಲಿ ಸಾಮರಸ್ಯ ದೀಪೋತ್ಸವ ನಡೆಯಿತು.

ರಸ್ತೆ, ವೃತ್ತಗಳಿಗೆ ಕಲಾವಿದರ ಹೆಸರಿಡಲು ಆಗ್ರಹ

ಚಾಮರಾಜನಗರ: ಜಿಲ್ಲೆ ಕಲೆಗಳ ತವರೂರಾಗಿದ್ದು, ಎಲ್ಲಾ ಕಲಾವಿದರ ಹೆಸರು ಅಜರಾಮರವಾಗಿ ಉಳಿಸಲು ನಗರದ ಪ್ರಮುಖ ರಸ್ತೆ ಹಾಗೂ ವೃತ್ತಗಳಿಗೆ ಪ್ರಮುಖ ಕಲಾವಿದರ ಹೆಸರಿಡಬೇಕು ಎಂದು ಶ್ರೀಗಂಧದ ಕನ್ನಡ ಯುವ ವೇದಿಕೆ ಅಧ್ಯಕ್ಷ ರವಿ ಚಂದ್ರಪ್ರಸಾದ್ ಕಹಳೆ ಒತ್ತಾಯಿಸಿದರು. ನಗರದ ಜಿಲ್ಲಾ ಕಸಾಪ ಕಚೇರಿಯಲ್ಲಿ ಅಖಿಲ ಕರ್ನಾಟಕ ಕನ್ನಡ ಮಹಾಸಭಾ, ತಾಲೂಕು ಕಸಾಪ ಆಶ್ರಯದಲ್ಲಿ 50 ದಿನಗಳವರೆಗೆ ಆಯೋಜಿಸಿರುವ ಕನ್ನಡ ರಾಜ್ಯೋತ್ಸವದ 40ನೇ ದಿನದ ಕಾರ್ಯಕ್ರಮದಲ್ಲಿ ಕನ್ನಡ ಚಲನಚಿತ್ರರಂಗ ನಿರ್ದೇಶಕ ಹ.ಸು.ರಾಜಶೇಖರ, ಕೆಸ್ತೂರು ಬಸವರಾಜು, ಸುಂದರಕೃಷ್ಣ ಅರಸ್ ಕುರಿತು ಮಾತನಾಡಿ, ಜಿಲ್ಲೆಯ ಎಲ್ಲಾ ಕಲಾವಿದರು ತಮ್ಮದೇ ಕ್ಷೇತ್ರಗಳಲ್ಲಿ ಕೊಡುಗೆ ನೀಡಿದ್ದಾರೆ. ಇವರು ಸಾಮಾಜಿಕ ಕಳಕಳಿಯುಳ್ಳ ವ್ಯಕ್ತಿಗಳಾಗಿದ್ದರು ಎಂದರು.

ಬಹಿಷ್ಕಾರದಿಂದ ಬಿಡುಗಡೆಗೊಳಿಸುವಂತೆ ಕುಟುಂಬಸ್ಥರ ಅಳಲು



ಸುದ್ದಿಗೋಷ್ಠಿಯಲ್ಲಿ ಪ್ರಜಾ ಪರಿವರ್ತನೆ ವೇದಿಕೆ ರಾಜ್ಯ ಸಂಘಟನಾ ಕಾರ್ಯದರ್ಶಿ ಹೆಚ್.ಎಸ್.ಮುತ್ತಪ್ಪ ಮಾತನಾಡಿದರು.

ಚಾಮರಾಜನಗರ, ಡಿ.15–ತಾಲೂಕಿನ ಲಿಂಗರಾಜಪುರ ಗ್ರಾಮದ ಪ್ರತ್ಯೇಕ ಪ್ರಕರಣಗಳಲ್ಲಿ ಎರಡು ಕುಟುಂಬಗಳಿಗೆ ಸಾಮಾಜಿಕ ಬಹಿಷ್ಕಾರ ಹಾಕಲಾಗಿದೆ ಎಂದು ಪ್ರಜಾ ಪರಿವರ್ತನೆ ವೇದಿಕೆ ರಾಜ್ಯ ಸಂಘಟನಾ ಕಾರ್ಯದರ್ಶಿ ಹೆಚ್.ಎಸ್. ಮುತ್ತಪ್ಪ ದೂರಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮನೆ ಒತ್ತುವರಿ ವಿಚಾರವಾಗಿ ಒಂದು ಕುಟುಂಬ ಹಾಗೂ ಮಗಳು ಅನ್ಯಜಾತಿ ಹುಡುಗನನ್ನು ಪ್ರೀತಿಸಿ ಮದುವೆಯಾಗಿದ್ದಾಳೆ ಎಂದು ಮತ್ತೊಂದು ಕುಟುಂಬವನ್ನು ಗ್ರಾಮದಲ್ಲಿನ ಕಟ್ಟೆಗಡಿ ಯಜಮಾನರು ಬಹಿಷ್ಕಾರ ಹಾಗೂ ದಂಡ ವಿಧಿಸಿದ್ದಾರೆ ಎಂದು ತಿಳಿಸಿದರು.

ಪ್ರಕರಣ ಸಂಬಂಧ ಸಂತ್ರಸ್ತ ಕುಟುಂಬದ ಗೋವಿಂದಶೆಟ್ಟಿ ಮಾತನಾಡಿ, ನನ್ನ ಮನೆ ಒತ್ತುವರಿಯಾಗಿದೆ ಎಂದು ಸಮುದಾಯದ ಯಜಮಾನರು ನನಗೆ ಹಾಗೂ ನನ್ನ ಕುಟುಂಬಕ್ಕೆ ಬಹಿಷ್ಕಾರ ಹಾಕಿದ್ದಾರೆ. ಸಮುದಾಯದ ಹಿರಿಯ ಮುಖಂಡರು ಮನೆ ಒತ್ತುವರಿ ಹಾಗೂ ಗ್ರಾಮದ ವಿಷಯಕ್ಕೆ ಸಂಬಂಧಿಸಿದಂತೆ 5 ಸಾವಿರ ದಂಡ ಪಡೆದಿದ್ದರು. ಅಲ್ಲದೇ, 16 ಹಳ್ಳಿಯ ಕಟ್ಟೆಗಡಿ ಯಜಮಾನರನ್ನು ಕರೆಸಿ ಪಂಚಾಯಿತಿ ಮಾಡಿ, 50 ಸಾವಿರ ರೂ. ದಂಡ ವಿಧಿಸಿದ್ದರು. ಆದರೆ, ನನ್ನ ಮನೆ ಖಾತೆ, ಇ–ಸ್ವತ್ತು ಸರಿಯಾಗಿದೆ. ನಾನು ಯಾವುದೇ ಜಾಗವನ್ನು ಒತ್ತುವರಿ ಮಾಡಿಲ್ಲ. ನಾನು 50 ಸಾವಿರ ರೂ. ದಂಡ ನೀಡಲು ಸಾಧ್ಯವಿಲ್ಲ ಎಂದು ಹೇಳಿದೆ ಎಂದರು.

ಪ್ರಜಾ ಪರಿವರ್ತನೆ ವೇದಿಕೆ ಜಿಲ್ಲಾಧ್ಯಕ್ಷ ಸಿದ್ದರಾಜು ಮಾತನಾಡಿ, ನಾನು ಮೂಲತಃ ಲಿಂಗರಾಜಪುರ ಗ್ರಾಮದವನಾಗಿದ್ದು, ಕೊಡಗಿನ ಸುಂಟಿಕೊಪ್ಪದಲ್ಲಿ ವಾಸವಾಗಿದ್ದೇನೆ. ನನ್ನ ಮಗಳು ಅಂತರ್ ಜಾತಿ ವಿವಾಹವಾದ ಕಾರಣಕ್ಕೆ ಗ್ರಾಮದವರು ನನ್ನನ್ನು ಪಂಚಾಯಿತಿಗೆ ಸೇರಿಸಿ 5 ಸಾವಿರ ದಂಡ ಹಾಗೂ ಹಳ್ಳಿ ಕಟ್ಟೆಗಡಿ ಸೇರಿಸಿ 60 ಸಾವಿರ ರೂ. ದಂಡ ಪಡೆದಿದ್ದಾರೆ. ಗ್ರಾಮದಿಂದ ಬಹಿಷ್ಕಾರ ಬೆದರಿಕೆ ಹಾಕಿದ್ದಾರೆ. ನ್ಯಾಯಕ್ಕಾಗಿ ಕಾನೂನು ಹೋರಾಟ ಮಾಡುತ್ತಿದ್ದೇನೆ ಎಂದರು.

ಸುದ್ದಿಗೋಷ್ಠಿಯಲ್ಲಿ ಪ್ರಜಾ ಪರಿವರ್ತನೆ ವೇದಿಕೆ ತಾಲೂಕು ಅಧ್ಯಕ್ಷ ನಾಗರಾಜು, ರಮೇಶ್, ಲಕ್ಷ್ಮೀ, ರಾಜಮ್ಮ ಹಾಜರಿದ್ದರು.

ಎಸ್.ಚರಣ್ ಬಿಳಿಗಿರಿಗೆ ಪ್ರಥಮ ಸ್ಥಾನ...



ಚಾಮರಾಜನಗರದಲ್ಲಿ ನಡೆದ ಜಿಲ್ಲಾ ಮಟ್ಟದ ಯುವಜನೋತ್ಸವದ ಛಾಯಾಗ್ರಹಣ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಎಸ್.ಚರಣ್ ಬಿಳಿಗಿರಿ ಅವರಿಗೆ ಚಾಮರಾಜನಗರ ವಿವಿ ಉಪನ್ಯಾಸಕ ಶಿವರಾಜ್ ಪ್ರಶಸ್ತಿ ನೀಡಿದರು. ಚುಡಾ ಅಧ್ಯಕ್ಷ ಮಹಮದ್ ಅಜ್ಗರ್ ಮುನ್ನಾ, ನಗರಸಭೆ ಸದಸ್ಯ ಮಹೇಶ್, ಜಾನಪದ ಗಾಯಕ ನರಸಿಂಹಮೂರ್ತಿ, ಯುವಜನ ಕ್ರೀಡಾ ಇಲಾಖೆ ಉಪನಿರ್ದೇಶಕ ಶಿವಸ್ವಾಮಿ ಇದ್ದರು.

ವ್ಯವಸ್ಥಾಪಕ ನಿರ್ದೇಶಕ ಶಿವಸ್ವಾಮಿಗೆ ಅಭಿನಂದನೆ...



ಕರ್ನಾಟಕ ಹಾಲು ಮಹಾಮಂಡಳಿ ನೂತನ ವ್ಯವಸ್ಥಾಪಕ ನಿರ್ದೇಶಕ ಬಿ.ಶಿವಸ್ವಾಮಿ ಅವರನ್ನು ಚಾಮುಲ್ ಅಧ್ಯಕ್ಷ ವೈ.ಸಿ.ನಾಗೇಂದ್ರ ನೇತೃತ್ವದಲ್ಲಿ ನಿರ್ದೇಶಕ ಹೆಚ್.ಎಸ್.ನಂಜುಂಡ ಪ್ರಸಾದ್, ಕ.ಹಾ.ಮ ನಿರ್ದೇಶಕರಾದ ಎಂ.ನಂಜುಂಡಸ್ವಾಮಿ, ಎಚ್.ಎಸ್.ಬಸವರಾಜು, ಎಸ್.ಮಹದೇವಸ್ವಾಮಿ, ಎಂ.ಪಿ.ಸುನೀಲ್, ಸದಾಶಿವಮೂರ್ತಿ, ಶಾಹುಲ್ ಅಹಮದ್, ಶ್ರೀಲಾ ಪುಟ್ಟರಂಗಶೆಟ್ಟಿ, ನಾಮ ನಿರ್ದೇಶಕ ಕೆ.ಕೆ.ರೇವಣ್ಣ ಅಭಿನಂದಿಸಿದರು.

ಹೆಬ್ಬಾಳ್ ಠಾಣೆ ಸಮೀಪದ ಸ್ಪಾನಲ್ಲಿ ವೇಶ್ಯಾವಾಟಿಕೆ

ವಿಜಯನಗರ ಉಪವಿಭಾಗ ಪೊಲೀಸರ ದಾಳಿ, ದಂಧೆಕೋರಳ ಬಂಧನ

ಮೈಸೂರು, ಡಿ.15– ಮೈಸೂರಿನ ಹೆಬ್ಬಾಳ್ ಪೊಲೀಸ್ ಠಾಣೆಯ ಕೂಗಳತೆ ದೂರದಲ್ಲಿರುವ ಸ್ಪಾವೊಂದರ ಮೇಲೆ ದಾಳಿ ನಡೆಸಿದ ವಿಜಯನಗರ ಉಪ ವಿಭಾಗದ ಪೊಲೀಸರು ವೇಶ್ಯಾವಾಟಿಕೆ ನಡೆಸುತ್ತಿದ್ದ ದಂಧೆಕೋರ ಮಹಿಳೆ ಹಾಗೂ ಗ್ರಾಹಕನೊಬ್ಬನನ್ನು ಬಂಧಿಸಿ, ಐವರು ಅವಾಂತುಕ ಯುವತಿಯರನ್ನು ರಕ್ಷಿಸಿದ್ದಾರೆ.

ಒಡನಾಡಿ ಸೇವಾ ಸಂಸ್ಥೆ ಸಹಕಾರದೊಂದಿಗೆ ವಿಜಯನಗರ ಉಪವಿಭಾಗದ ಎಸಿಪಿ ಗಜೇಂದ್ರ ಪ್ರಸಾದ್ ನಿರ್ದೇಶನದ ಮೇರೆಗೆ ಹೆಬ್ಬಾಳ್ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಪ್ರವೀಣ್, ಸರಸ್ವತಿಪುರಂ ಠಾಣೆಯ ಸಬ್‌ಇನ್‌ಸ್ಪೆಕ್ಟರ್ ಲತಾ, ಮೇಟಗಳ್ಳಿ ಠಾಣೆ ಇನ್‌ಸ್ಪೆಕ್ಟರ್ ದಿವಾಕರ್, ಸಬ್‌ಇನ್‌ಸ್ಪೆಕ್ಟರ್ ಜೋಸನ್ ಹಾಗೂ ಸಿಬ್ಬಂದಿಯನ್ನೊಳಗೊಂಡ ತಂಡ ಯೂನಿಕ್ ಮೆನ್ ಅಂಡ್ ಉಮೆನ್ ಸ್ಪಾ ಅಂಡ್ ಸಲೂನ್ ಮೇಲೆ ದಾಳಿ ನಡೆಸಿತು.

ಈ ಸ್ಪಾ ಹೆಬ್ಬಾಳ್ ಠಾಣೆಯ ಕೂಗಳತೆ ದೂರದಲ್ಲೇ ಇದ್ದರೂ ಮೇಟಗಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಡುತ್ತದೆ. ವೇಶ್ಯಾವಾಟಿಕೆ ದಂಧೆಯನ್ನು ವ್ಯವಸ್ಥಿತವಾಗಿ ನಡೆಸುತ್ತಿರುವ ಮಹಿಳೆ ಬಂಧನಕ್ಕೊಳಗಾಗಿದ್ದು, ಈ ಹಿಂದೆ 3–4 ಬಾರಿ ಈಕೆ ಸಿಕ್ಕಿಬಿದ್ದಿದ್ದಾಳೆ. ವಿಜಯನಗರ ಹಾಗೂ ಮೇಟಗಳ್ಳಿ ಠಾಣೆ ಸೇರಿದಂತೆ ವಿವಿಧ ಠಾಣೆಗಳಲ್ಲಿ ಈಕೆ ವಿರುದ್ಧ ವೇಶ್ಯಾವಾಟಿಕೆ ಪ್ರಕರಣಗಳು ದಾಖಲಾಗಿದ್ದರೂ ಕೂಡ ಜಾಮೀನಿನ ಮೇಲೆ ಹೊರಬಂದ ನಂತರ ತನ್ನ ದಂಧೆಯನ್ನು ಮುಂದುವರೆಸಿದ್ದಳು ಎಂದು ಹೇಳಲಾಗಿದೆ.

ಇಂದು ದಾಳಿ ನಡೆದ ಸ್ಪಾ ಹೆಬ್ಬಾಳ ಠಾಣೆಗೆ ಸಮೀಪವಿದ್ದರೂ ಮೇಟಗಳ್ಳಿ ಠಾಣೆ ವ್ಯಾಪ್ತಿಗೆ ಒಳಪಡುತ್ತದೆ. ಇದೇ ರೀತಿ ಈಕೆ ಪೊಲೀಸ್ ಠಾಣಾ ವ್ಯಾಪ್ತಿ ಗೊಂದಲವುಂಟು ಮಾಡುವಂತಹ ಸ್ಥಳಗಳನ್ನೇ ಆಯ್ಕೆ ಮಾಡಿಕೊಂಡು ತನ್ನ ದಂಧೆ ನಡೆಸುತ್ತಿದ್ದಳು. ಮೊಬೈಲ್ ಆ್ಯಪ್ ಹಾಗೂ ಸಾಮಾಜಿಕ ಜಾಲತಾಣದ ಮೂಲಕ ಗ್ರಾಹಕರನ್ನು ಸೆಳೆಯುತ್ತಿದ್ದಳು ಎಂದು ಹೇಳಲಾಗಿದೆ. ಈಕೆ ವಿರುದ್ಧ ಮೇಟಗಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಇಂದಿನ ದಾಳಿಯಲ್ಲಿ ಪೊಲೀಸರಿಗೆ ಒಡನಾಡಿ ಸೇವಾಸಂಸ್ಥೆಯ ನಿರ್ದೇಶಕ ರಾದ ಸ್ಟ್ಯಾನ್ಲಿ, ಪರಶು, ಪ್ರದೀಪ್.ಕೆ, ಸುಮಾ ಹಾಗೂ ಬಾಲು ಕುಮಾರ್ ಅವರುಗಳು ಸಹಕರಿಸಿದ್ದರು.

ಒಂದನೇ ಪುಟದಿಂದ

ವಿಜಯೇಂದ್ರ ಬಣದ ಸಭೆ

ಜನವರಿ 16ಕ್ಕೆ ಮತ್ತೆ ಸಭೆ ಮಾಡುತ್ತೇವೆ ಎಂದು ತಿಳಿಸಿದರು. ಮಾಜಿ ಸಚಿವ ಎಸ್.ಎ ರವೀಂದ್ರನಾಥ್ ಮಾತ ನಾಡಿ, ದಾವಣಗೆರೆಯಲ್ಲಿ ಬಿ.ಎಸ್.ಯಡಿಯೂರಪ್ಪ ಅವರ ಜನ್ಮದಿನ ಆಚರಣೆ ಮೂಲಕ ಶಕ್ತಿ ಪ್ರದರ್ಶನ ಮಾಡುತ್ತೇವೆ. ಇಂದು ನಡೆದ ಸಭೆಯಲ್ಲಿ ಈ ಬಗ್ಗೆ ನಿರ್ಣಯವಾಗಿದೆ. ಫೆಬ್ರವರಿ 27 ದಾವಣಗೆರೆಯಲ್ಲಿ ಬಿಎಸ್‌ವೈ ಹುಟ್ಟುಹಬ್ಬ ಆಚರಣೆ ನಡೆಯಲಿದೆ. ಅಂದು ನಡೆಯುವ ಕಾರ್ಯಕ್ರಮಕ್ಕೆ 25 ಲಕ್ಷ ಜನರನ್ನು ಸೇರಿಸುವ ನಿರೀಕ್ಷೆ ಇದೆ ಎಂದು ಹೇಳಿದರು. ಮಾಜಿ ಶಾಸಕರಾದ ಸೋಮಶೇಖರ್ ರೆಡ್ಡಿ, ಹರತಾಳು ಹಾಲಪ್ಪ, ಸೀಮಾ ಮಸೂತಿ ಸೇರಿ 35ಕ್ಕೂ ಹೆಚ್ಚು ಮಾಜಿ ಶಾಸಕರು, ಸಚಿವರು ಸಭೆಯಲ್ಲಿ ಭಾಗಿಯಾಗಿಯಾಗಿದ್ದರು. ಸಭೆಗೂ ಮುನ್ನ ಮಾಜಿ ಶಾಸಕರು, ಮಾಜಿ ಸಚಿವರು ದಾವಣಗೆರೆ ನಗರದ ದುರ್ಗಾಂಬಿಕಾ ದೇವಿ ದೇವಸ್ಥಾನಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದರು.

ಬಿಜೆಪಿಯಲ್ಲಿ ಬಣ ರಾಜಕೀಯಕ್ಕೆ ಅವಕಾಶವಿಲ್ಲ, ಬಣದ ಹೆಸರಿನಲ್ಲಿ ಸಭೆಗಳನ್ನು ಆಯೋಜಿಸುವುದನ್ನು ಒಪ್ಪಲಾಗದು

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ



ಬೆಂಗಳೂರು, ಡಿ.14– ಬಿಜೆಪಿಯಲ್ಲಿ ಬಣ ರಾಜಕೀಯಕ್ಕೆ ಅವಕಾಶ ಇಲ್ಲವೇ ಇಲ್ಲ. ಬಣದ ಹೆಸರಿನಲ್ಲಿ ಸಭೆಗಳನ್ನು ಆಯೋಜಿಸುವುದನ್ನು ಒಪ್ಪಲಾಗದು. ಈ ನಿಟ್ಟಿನಲ್ಲಿ ಸಭೆ, ಸಮಾವೇಶಗಳನ್ನು ಮಾಡಲು ಯಾರೇ ಹೊರಟಿದ್ದರೂ ಕೂಡಲೇ ತಮ್ಮ ಚಟುವಟಿಕೆಗಳನ್ನು ಸ್ಥಗಿತಗೊಳಿಸಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಭಾನುವಾರ ಸೂಚನೆ ನೀಡಿದ್ದಾರೆ.

ಈ ಸಂಬಂಧ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಭಾರತೀಯ ಜನತಾ ಪಾರ್ಟಿ ಕೂಡು ಕುಟುಂಬವಿದ್ದಂತೆ, ಪಕ್ಷದ ಚೌಕಟ್ಟಿನಲ್ಲೇ ಪ್ರತಿಯೊಂದು ಸಭೆ, ಕಾರ್ಯಕ್ರಮಗಳು ನಡೆಯಬೇಕೇ ಹೊರತು ಪಕ್ಷದ ನಿಯಮ, ಧ್ಯೇಯಗಳನ್ನು ಬದಿಗೆ ಸರಿಸಿ ಯಾವುದೇ ಚಟುವಟಿಕೆಗಳನ್ನು ನಡೆಸುವುದು ಸಂಘಟನೆಯ ಆಶಯಕ್ಕೆ ಪೂರಕವಾಗಿಲ್ಲದಿರುವುದನ್ನು ವಿನಮ್ರತೆಯಿಂದ ಸಹೃದಯರಲ್ಲಿ ತಿಳಿಸಬಯಸುತ್ತೇನೆಂದು ಹೇಳಿದ್ದಾರೆ. ರಾಜ್ಯಾಧ್ಯಕ್ಷನಾಗಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಪಕ್ಷ ಸಂಘಟನೆಗೆ ಇನ್ನಷ್ಟು ಬಲ ತುಂಬುವ ಕಾರ್ಯಕ್ರಮದಡಿಯಲ್ಲಿ ಪಕ್ಷದ ಹಿರಿಯರು, ಶಾಸಕರು, ಮಾಜಿ ಶಾಸಕರು ಹಾಗೂ ಪಕ್ಷದ ಎಲ್ಲ ಹಿರಿಯರೊಂದಿಗೆ ಅತೀ ಶೀಘ್ರದಲ್ಲೇ ಸಭೆ ಕರೆಯಲಿದ್ದೇನೆಂದು ತಿಳಿಸಿದ್ದಾರೆ.

ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರಿಗೆ ಠಕ್ಕರ್ ನೀಡಲು ದಾವಣ ಗೆರೆಯಲ್ಲಿ ವಿಜಯೇಂದ್ರ ಬಣದ ನಾಯಕರು ಇಂದು ಸಭೆ ನಡೆಸಿದ್ದಾರೆ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹಾಗೂ ಶಾಸಕ ಬಸನಗೌಡ ಪಾಟೀಲ ಯತ್ನಾಳ ಬಣಗಳ ನಡುವಿನ ಮುನಿಸು ಹೈಕಮಾಂಡ್ ಮಧ್ಯ ಪ್ರವೇಶದಿಂದ ಶಮನವಾಗಿದೆ ಎನ್ನುವಾಗಲೇ ದಾವಣಗೆರೆಯಲ್ಲಿ ಸೇರಿರುವ ಈ ಸಭೆ ಕುತೂಹಲ ಕೆರಳಿಸಿದೆ.

ಸಿದ್ದರಾಮಯ್ಯ ಆರೋಪ ಸುಳ್ಳು

ವಹಿಸಲಿ ಎಲ್ಲವೂ ಹೊರ ಬರುತ್ತೆ ಎಂದಿದ್ದಾರೆ. ವಕ್ಫ್ ವರದಿಯನ್ನು ಮುಚ್ಚಿ ಹಾಕಲು ಕಾಂಗ್ರೆಸ್‌ನವರೇ ನನಗೆ ಹಣದ ಆಮಿಷ ಒಡ್ಡಿದ್ದರು. 2012ರಿಂದಲೂ ಶುರು ಮಾಡಿ, ಮೂರು–ನಾಲ್ಕು ವರ್ಷಗಳಿಂದ ಆಫರ್ ನೀಡುತ್ತಾ ಬಂದಿದ್ದರು. ನಾನು ಬೈದು ಕಳುಹಿಸಿದೆ ಎಂದು ದೂರಿದ್ದಾರೆ. ಪ್ರಧಾನ ಮಂತ್ರಿಗಳಿಗೂ ವರದಿ ಸಂಬಂಧ ಬಹಳಷ್ಟು ಪತ್ರಗಳನ್ನು ಬರೆದಿದ್ದೆ. ಕೇಂದ್ರ ಸರ್ಕಾರ ಇದನ್ನು ಪರಿಗಣಿಸಿ ತನಿಖಾ ಸಂಸ್ಥೆಗೆ ಹಸ್ತಾಂತರಿಸ ಬೇಕು ಎಂದು ಕೇಳಿಕೊಂಡಿದ್ದೆ ಎಂದು ತಿಳಿಸಿದ್ದಾರೆ.

ನಮ್ಮ ವಕ್ಫ್ ಒಟ್ಟು ಆಸ್ತಿ 50 ಸಾವಿರ ಎಕರೆ ಇದ್ದಾಗ, ಅದರಲ್ಲಿ 27–28 ಸಾವಿರ ಎಕರೆ ಕಬಳಿಕೆ ಆಗಿ ಬಾಕಿ ಉಳಿದಿದ್ದು 23 ಸಾವಿರ ಎಕರೆ. ಆಗ ಸಿದ್ದರಾಮಯ್ಯ ಅವರು ಬೇರೆ ಬೇರೆ ರೈತರಿಗೆ 1,60,000 ಎಕರೆಗೆ ನೋಟಿಸ್ ಕೊಡುತ್ತಾರೆ. ಇದು ಯಾಕೆ? ಇದು ಮುಸ್ಲಿಂ ಮತ್ತು ಹಿಂದೂಗಳ ನಡುವೆ ಕಿಡಿ ಹೊತ್ತಿಸಿದ್ದು, ಅವರಿಬ್ಬರು ಹೊಡೆದಾಡಿಕೊಳ್ಳಲಿ ಅಂತಾ. ಅವರು ಅಷ್ಟು ಸತ್ಯವಂತರಾಗಿದ್ದರೆ ಒಮ್ಮೆ ನೋಟಿಸ್ ಕೊಟ್ಟವರು ಹಿಂದಕ್ಕೆ ಯಾಕೆ ಪಡೆದುಕೊಳ್ತಾರೆ? ಕೇವಲ 23–24 ಸಾವಿರ ಎಕರೆ ಇರಬೇಕಾದರೆ, 1,60,000 ಎಕರೆಗೆ ಹೇಗೆ ನೋಟಿಸ್ ಕೊಟ್ಟರು ಎಂದು ಮಾಣಿಪ್ಪಾಡಿ ಪ್ರಶ್ನಿಸಿದ್ದಾರೆ.

ಸಿದ್ದರಾಮಯ್ಯ ಅವರಿಗೆ ಕಿಂಚಿತ್ತಾದರೂ ಅಲ್ಪಸಂಖ್ಯಾತರ ಮೇಲೆ ಪ್ರೀತಿ ಇದ್ದರೆ ಆ ಸಮುದಾಯಕ್ಕೆ ಏನಾದರು ಮಾಡಬೇಕೆಂಬ ಮನಸ್ಸಿದರೆ ನಾನು ಕೊಟ್ಟ ವರದಿಯನ್ನು ಸಿಬಿಐ ತನಿಖೆಗೆ ಹಸ್ತಾಂತರ ಮಾಡಲಿ ಎಂದು ಒತ್ತಾಯಿಸಿದ್ದಾರೆ. ಕಾಂಗ್ರೆಸ್‌ನಲ್ಲಿರುವ ಮುಸ್ಲಿಂ ನಾಯಕರು ಸೇರಿ ಬಹಳಷ್ಟು ಮಂದಿ ವಕ್ಫ್ ಆಸ್ತಿಯನ್ನು ಲೂಟಿ ಮಾಡಿದ್ದಾರೆ. ಅದನ್ನು ಮುಚ್ಚಿ ಹಾಕಲು ತೋಳು ಬಲ ಮತ್ತು ಹಣದ ಬಲದಿಂದ ಸಾಕಷ್ಟು ಪ್ರಯತ್ನ ಮಾಡಿದರು. ನನಗೆ ಕಿರುಕುಳವನ್ನೂ ಕೊಟ್ಟಿದ್ದಾರೆ ಎಂದು ಕಾಂಗ್ರೆಸ್ ವಿರುದ್ಧ ಗಂಭೀರ ಆರೋಪಗಳನ್ನು ಮಾಡಿದ್ದಾರೆ.

ಹುಣಸೂರಲ್ಲಿ ವಿಜೃಂಭಣೆಯ ಹನುಮಂತೋತ್ಸವ

• ಎಲ್ಲಡೆ ಮೊಳಗಿದ ಜೈ ಶ್ರೀರಾಮ ನಾಮಸ್ಮರಣೆ • ಮೆರಣಿಗೆಯಲ್ಲಿ ಗಣ್ಯರು ಸೇರಿದಂತೆ ಸಾವಿರಾರು ಹನುಮ ಭಕ್ತರು ಭಾಗಿ



ಹುಣಸೂರಿನಲ್ಲಿ ನಡೆದ ಹನುಮಂತೋತ್ಸವದಲ್ಲಿ ಭಾಗವಹಿಸಿದ್ದ ಹನುಮ ಭಕ್ತರು.

ಹುಣಸೂರು, ಡಿ.15– ನಗರದಲ್ಲಿ ಹನುಮ ಜಯಂತಿ ಅಂಗವಾಗಿ ಹನುಮಂತೋತ್ಸವ ಸಮಿತಿ ಮತ್ತು ಅಂಜನಾದ್ರಿ ಟ್ರಸ್ಟ್ ವತಿಯಿಂದ ಭಾನುವಾರ ನಡೆದ 30ನೇ ಹನುಮಂತೋತ್ಸವ ಸಾವಿರಾರು ಭಕ್ತರ ಜೈಕಾರಗಳೊಂದಿಗೆ ವಿಜೃಂಭಣೆಯಿಂದ ನೆರವೇರಿತು.

ಬೆಳಗ್ಗೆ 11 ಗಂಟೆಗೆ ನಗರದ ರಂಗನಾಥ ಬಡಾವಣೆಯಲ್ಲಿ ಶಾಸಕ ಜಿ.ಡಿ.ಹರೀಶ್ ಗೌಡ, ಮಾಜಿ ಶಾಸಕ ಹೆಚ್.ಪಿ.ಮಂಜುನಾಥ, ಮಾಜಿ ಸಂಸದ ಪ್ರತಾಪ್ ಸಿಂಹ, ಎಸಿ ವಿಜಯಕುಮಾರ್, ಶ್ರೀರಾಮಸೇನೆ ರಾಜ್ಯಾಧ್ಯಕ್ಷ ಪ್ರಮೋದ್ ಮುತಾಲಿಕ್, ಗಾವಡಗೆರೆ ಗುರುಲಿಂಗ ಜಂಗಮ ದೇವರ ಮಠದ ನಟರಾಜ ಸ್ವಾಮೀಜಿ, ಮಾದಳ್ಳಿ ಉಕ್ಕಿನಕಂತೆ ಮಠದ ಸಾಂಬ ಸದಾಶಿವ ಸ್ವಾಮೀಜಿ, ಹಾಸನ ಜಿಲ್ಲೆ ಹೊಸಕೊಪ್ಪಲು ಮಠದ ಕಾಳಸ್ವಾಮಿ ಸೇರಿದಂತೆ ಹಲವು ಗಣ್ಯರು ನಂದಿಕಂಬಕ್ಕೆ ಪುಷ್ಪಾರ್ಚನೆ ಮಾಡಿದರು. ಬಳಿಕ ಆಂಜನೇಯಸ್ವಾಮಿ ಉತ್ಸವ ಮೂರ್ತಿಗೆ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡಿ ಮೆರವಣಿಗೆಗೆ ಚಾಲನೆ ನೀಡಿದರು. ಸಂಸದ ಯದುವೀರ್ ತಡವಾಗಿ ಆಗಮಿಸಿ ಮೆರವಣಿಗೆಯಲ್ಲಿ ಪಾಲ್ಗೊಂಡು ಕೊನೆವರೆಗೂ ಇದ್ದರು. ಈ ವೇಳೆ ಮಾಜಿ ಸಂಸದ ಪ್ರತಾಪ್ ಸಿಂಹ ಯದುವೀರ್‌ಗೆ ಸಾಥ್ ನೀಡಿದರು.

ಹನುಮಂತೋತ್ಸವ ಮೆರವಣಿಗೆಯಲ್ಲಿ ನಗರದ ಜೆಎಲ್‌ಬಿ ರಸ್ತೆಯ ಜನಜಾಗೃತಿ ವೇದಿಕೆ ಮತ್ತು ವರ್ತಕರ ಸಂಘ, ಶ್ರೀರಾಮ ಮಂದಿರ ಕಲ್ಕುಣಿಕೆ, ಹನುಮಂತೋತ್ಸವ ಸಮಿತಿಯಿಂದ ದತ್ತಾತ್ರೇಯ, ಶಿವಲಿಂಗ, ಕೋದಂಡರಾಮ, ಪಂಚಲೋಹದ ರಾಮ–ಲಕ್ಷ್ಮಣ–ಸೀತೆಯ ಉತ್ಸವ ಮೂರ್ತಿ ಒಳಗೊಂಡಂತೆ 13 ವಿವಿಧ ಗರಡಿ ಮನೆಗಳಿಂದ ಆಗಮಿಸಿದ ಆಂಜನೇಯ ಉತ್ಸವ ಮೂರ್ತಿಗಳು ಆಕರ್ಷಣೀಯವಾಗಿದ್ದವು. ವೀರಗಾಸೆ, ಕೇರಳದ ಚಂಡೆ, ಕೀಲು ಕುದುರೆ, ಡೊಳ್ಳು, ಹೆಚ್.ಡಿ.ಕೋಟೆ ತಾಲೂಕಿನ ಬಸವನ ಮುಂಡಿ ಹಾಡಿಯ ಸೋಲಿಗರ ಬುರುಡೆ ಕುಣಿತ, ಮಂಗಳೂರಿನ ಬೊಂಬೆಗಳು, ಪೂಜಾ ಕುಣಿತ, ವಿನೋಬಾ ಕಾಲೋನಿ ಯುವಕರಿಂದ ಕುಣಿತ ಸೇರಿದಂತೆ ಹಲವು ಜಾನಪದ ಕಲಾ ತಂಡಗಳು, ನಗಾರಿ, ಡೋಲು, ಬ್ಯಾಂಡ್ ಸೆಟ್, ಮಂಗಳ ವಾದ್ಯಗಳು ಭಾಗವಹಿಸಿದ್ದವು.

ನಗರದ ರಂಗನಾಥ ಬಡಾವಣೆಯಿಂದ ಹೊರಟ ಮೆರವಣಿಗೆ ಕಲ್ಕುಣಿಕೆ ಸರ್ಕಲ್, ಶಬರಿ ಸರ್ಕಲ್, ಹಳೇ ಸೇತುವೆ, ಸಂವಿಧಾನ ವೃತ್ತ, ಎಸ್‌ಜೆ ರಸ್ತೆ, ಕೋಟೆ ಸರ್ಕಲ್, ಜೆಎಲ್‌ಬಿ ರಸ್ತೆ, ಲಕ್ಷ್ಮಿ ವಿಲಾಸ್ ಸರ್ಕಲ್, ಜಬಾರ್ ರಸ್ತೆ, ಅಕ್ಷಯ ಭಂಡಾರ್, ಹೊಸ ಬಸ್ ನಿಲ್ದಾಣ, ಕಲ್ಪತರು ವೃತ್ತದ ಮೂಲಕ ಸಂಜೆ 6 ಗಂಟೆಗೆ ಆಂಜನೇಯಸ್ವಾಮಿ ದೇವಸ್ಥಾನ ತಲುಪಿತು. ಮೆರವಣಿಗೆ ಉದ್ದಕ್ಕೂ ನೆರೆದಿದ್ದ ಸಾವಿರಾರು ಹನುಮ ಭಕ್ತರು ಜೈ ಶ್ರೀರಾಮ್ ಘೋಷಣೆ ಮೊಳಗಿಸಿದರು. ಅಲ್ಲದೇ ಧ್ವನಿವರ್ಧಕದ ಹಾಡಿಗೆ ತಕ್ಕಂತೆ ಕುಣಿದು ಕುಪ್ಪಳಿಸಿದರು. ಯುವತಿಯರ ತಂಡ ಕೇಸರಿ ರುಮಾಲು ತೊಟ್ಟು ಕುಣಿದರು.

ಮೆರವಣಿಗೆ ವೇಳೆ ಕಲ್ಕುಣಿಕೆ ಸರ್ಕಲ್ ಶಾಲೆ ಬಳಿ ಕಲ್ಕುಣಿಕೆ ಯುವಜನರ ತಂಡದಿಂದ ಹನುಮ ಭಕ್ತರಿಗೆ ಲಘು ಉಪಹಾರ ನೀಡಲಾಯಿತು. ಹೋಟೆಲ್ ದೇವಿ ಪ್ರಸಾದ್ ಬಳಿ ಮಜ್ಜಿಗೆ, ಪಾನಕ, ಗೋಕುಲ್ ರಸ್ತೆ ವರ್ತಕರು ಮತ್ತು ನಿವಾಸಿಗಳು ನವನಗರ ಬ್ಯಾಂಕ್ ಬಳಿ ಲಘು ಉಪಹಾರ, ಸಿಹಿ ನೀಡಿದರು. ಜೆಎಲ್‌ಬಿ ರಸ್ತೆಯ ಚರ್ಚ್ ಬಳಿ ಮಾರ್ನಿಂಗ್ ವಾಕರ್ಸ್ ತಂಡದಿಂದ ಹನುಮ ಭಕ್ತರಿಗೆ ಲಘು ಉಪಹಾರ ಮತ್ತು ಬಾಳೆ ಹಣ್ಣುಗಳನ್ನು ನೀಡಲಾಯಿತು. ಬಜಾರ್ ರಸ್ತೆಯಲ್ಲಿ ಮುಸ್ಲಿಮರು ಹನುಮ ಭಕ್ತರಿಗೆ ಮಜ್ಜಿಗೆ, ಬಾಳೆ ಹಣ್ಣು, ಸಿಹಿ ವಿತರಿಸಿ ಸಾಮರಸ್ಯ, ಸೌಹಾರ್ದತೆ ಮೆರೆದರು. ಬಜಾರ್ ರಸ್ತೆಯಲ್ಲಿ ಸಿರ್ವಿ ಸಮಾಜದವರು ಹನುಮ ಭಕ್ತರಿಗೆ ಲಘು ಉಪಹಾರ ಮತ್ತು ಸಿಹಿ ತಿಂಡಿಗಳನ್ನು ವಿತರಿಸಿದರು.

ಹನುಮ ಜಯಂತೋತ್ಸವ ಅಂಗವಾಗಿ ಮೆರವಣಿಗೆ ಸಾಗುವ ಎಲ್ಲಾ ರಸ್ತೆಗಳಲ್ಲಿ ವರ್ತಕರು ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡಿ ಸಹಕಾರ ನೀಡಿದರು. ಮೆರವಣಿಗೆಯಲ್ಲಿ ಸುಮಾರು 10 ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು. ಅಲ್ಲದೇ ಎಲ್ಲರೂ ಕೇಸರಿ ರುಮಾಲು ತೊಟ್ಟು, ಕೇಸರಿ ಬಾವುಟ ಹಿಡಿದು ಮೆರವಣಿಗೆಗೆ ರಂಗು ತಂದರು. ಮೆರವಣಿಗೆ ಸಾಗುವ ರಸ್ತೆಗಳಲ್ಲಿ ಕೇಸರಿ ಬಣ್ಣದ ಬಾವುಟ, ಬಂಟಿಂಗ್ಸ್‌ಗಳನ್ನು ಕಟ್ಟಲಾಗಿತ್ತು. ಒಟ್ಟಾರೆ ಇಡೀ ಹುಣಸೂರು ನಗರ ಕೇಸರಿಮಯವಾಗಿತ್ತು.

ಯಾವುದೇ ಅಹಿತಕರ ಘಟನೆ ನಡೆಯದಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್ ನೇತೃತ್ವದಲ್ಲಿ 1500 ಪೊಲೀಸರನ್ನು ನಿಯೋಜಿಸಿ ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿತ್ತು. ಮೆರವಣಿಗೆಯಲ್ಲಿ ತಹಸೀಲ್ದಾರ್ ಮಂಜುನಾಥ್, ತಾಪಂ ಇಓ ಹೊಂಬಯ್ಯ, ಪೌರಾಯುಕ್ತೆ ಮಾನಸ, ಎಎಸ್‌ಪಿಗಳಾದ ಸುಂದರ್ ರಾಜ್, ನಾಗೇಶ್, ಡಿವೈಎಸ್‌ಪಿ ಗೋಪಾಲಕೃಷ್ಣ, ಹರಿಪ್ರಸಾದ್, ನಗರಸಭಾಧ್ಯಕ್ಷ ಶರವಣ, ಉಪಾಧ್ಯಕ್ಷೆ ಆಶಾ, ಅಂಜನಾದ್ರಿ ಸೇವಾ ಟ್ರಸ್ಟ್ ಗೌರಾವಾಧ್ಯಕ್ಷ ಯೋಗಾನಂದ್ ಕುಮಾರ್, ಅಧ್ಯಕ್ಷ ವೆಂಕಟನಾರಾಯಣ ದಾಸ್, ಅನೀಲ್, ಸಚಿನ್, ಸುಧಾಕರ್, ಮಾಜಿ ನಗರಸಭಾಧ್ಯಕ್ಷ ಹೆಚ್.ವೈ.ಮಹದೇವು, ಸದಸ್ಯರಾದ ವಿವೇಕನಂದ, ಹರೀಶ್, ಕೃಷ್ಣ ರಾಜಗುಪ್ತ, ಗಿರೀಶ್, ಅನೀಲ್, ಚಂದ್ರ ಮೌಳಿ, ಜಗದೀಶ್, ಪಿ.ಆರ್.ರಾಚಪ್ಪ, ರಘುವೀರ್, ಸುಧಾಕರ್, ದೀಪು, ಪೂರ್ವಜ್, ಯೋಗೇಶ್, ರಾಮಣ್ಣ, ಅಧಿ ಕಾರಿಗಳು, ಗಣ್ಯರು ಭಾಗವಹಿಸಿದ್ದರು.



ಹನುಮಂತೋತ್ಸವಕ್ಕೆ ಶಾಸಕ ಜಿ.ಡಿ.ಹರೀಶ್‌ಗೌಡ ಸೇರಿದಂತೆ ಗಣ್ಯರು ಚಾಲನೆ ನೀಡಿದರು.





ಹನುಮಂತೋತ್ಸವದಲ್ಲಿ ಯುವತಿಯರ ತಂಡದ ನೃತ್ಯ. ಮತ್ತೊಂದು ಚಿತ್ರದಲ್ಲಿ ಜಾನಪದ ಕಲಾ ತಂಡದ ಪ್ರದರ್ಶನ.

ಸಚಿವ ಕೆ.ವೆಂಕಟೇಶ್‌ರಿಂದ ದ್ವೇಷದ ರಾಜಕಾರಣ

ಜೆಡಿಎಸ್ ಮುಖಂಡರ ಆರೋಪ



ಸುದ್ದಿಗೋಷ್ಠಿಯಲ್ಲಿ ಜೆಡಿಎಸ್ ಮುಖಂಡರು ಮಾತನಾಡಿದರು.

ಪಿರಿಯಾಪಟ್ಟಣ, ಡಿ.15– ತಾಲೂಕಿನಲ್ಲಿ ಸಚಿವ ಕೆ.ವೆಂಕಟೇಶ್ ದ್ವೇಷದ ರಾಜಕಾರಣ ಮಾಡುತ್ತಿದ್ದಾರೆ ಎಂದು ಜೆಡಿಎಸ್ ಮುಖಂಡರು ಆರೋಪಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖಂಡರು, ವಿಧಾನಸಭೆ ಚುನಾವಣೆ ನಡೆದು 2 ವರ್ಷ ಕಳೆದರೂ ತಾಲೂಕಿನಲ್ಲಿ ಅಭಿವೃದ್ಧಿ ಕುಂಠಿತವಾಗಿದೆ. ಅಲ್ಲದೇ ಯಾವುದೇ ಅಭಿವೃದ್ಧಿ ಕಾರ್ಯಕ್ಕೆ ಚಾಲನೆ ನೀಡಿದೇ ಸಚಿವ ಕೆ.ವೆಂಕಟೇಶ್ ದ್ವೇಷದ ರಾಜಕಾರಣ ಮಾಡುತ್ತಿದ್ದಾರೆ ಎಂದು ದೂರಿದರು.

ತಾಲೂಕಿನಲ್ಲಿ ಅಧಿಕಾರಿಗಳ ಮೂಲಕ ಜೆಡಿಎಸ್ ಕಾರ್ಯಕರ್ತರ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸುವುದು. ಮಾಜಿ ಶಾಸಕ ಕೆ.ಮಹದೇವ್ ಬಗ್ಗೆ ಕೀಳಾಗಿ ಮಾತನಾಡುವುದು. ಅವರ ಪುತ್ರ ಪ್ರಸನ್ನ ಅವರ ರಾಜಕೀಯ ಏಳಿಗೆ ಸಹಿಸದ ಅವರು ಇಲ್ಲಸಲ್ಲದ ಆರೋಪ ಮಾಡಿ ಮೈಮುಲ್ ಅಧ್ಯಕ್ಷ ಗಾದಿಯಿಂದ ಇಳಿಸಲು ಮೂರು ಬಾರಿ ಪ್ರಯತ್ನ ಪಟ್ಟು, ಸಾಕಷ್ಟು ಕಿರುಕುಳ ನೀಡಿ ಅಧಿಕಾರಿಗಳನ್ನು ಎತ್ತಿಕಟ್ಟಿ ಅವರನ್ನು ಅಧಿಕಾರದಿಂದ ಇಳಿಸಿದ್ದು ಸಚಿವರ ಕ್ಷುಲ್ಲಕ ರಾಜಕಾರಣಕ್ಕೆ ಉದಾಹರಣೆಯಾಗಿದೆ ಎಂದರು. ತಾಲೂಕಿನ ಆಶ್ರಯ ಕಮಿಟಿ, ಕೆಡಿಬಿ ಕಮಿಟಿಗಳಿಗೆ ಸಚಿವ ವೆಂಕಟೇಶ್ ಅವರ ಪುತ್ರ ನಿತಿನ್ ಅವರೇ ಅಧ್ಯಕ್ಷರಾಗಬೇಕೆ ಎಂದು ಪ್ರಶ್ನಿಸಿದ ಮುಖಂಡರು ಕಾಂಗ್ರೆಸ್‌ನಲ್ಲಿ ಬೇರೆ ಯಾರು ಮುಖಂಡರಿಲ್ಲವೇ ಎಂದು ವ್ಯಂಗ್ಯವಾಡಿದರು.

ಹಾಲು ಉತ್ಪಾದಕರ ಸಹಕಾರ ಕ್ಷೇತ್ರದಲ್ಲಿ 428 ಮತಗಳನ್ನು ಪಡೆದು ಗೆಲುವು ಸಾಧಿಸಿದ ಸದಸ್ಯರ ಸದಸ್ಯತ್ವ ಅನರ್ಹಗೊಳಿಸಿ ಕೇವಲ 40 ಮತಗಳನ್ನು ಪಡೆದು ಸೋತಿದ್ದ ಅಭ್ಯರ್ಥಿಯನ್ನು ಸರ್ಕಾರಿ ನಾಮ ನಿರ್ದೇಶಕನನ್ನಾಗಿ ಮಾಡಿರುವುದು ಇವರ ದ್ವೇಷದ ಆಡಳಿತಕ್ಕೆ ಸಾಕ್ಷಿ. ತಾಲೂಕಿನಲ್ಲಿ 205 ಹಾಲು ಉತ್ಪಾದಕರ ಸಹಕಾರ ಸಂಘಗಳಿದ್ದು, 50 ರಿಂದ 60 ಸಂಘಗಳ ಅವಧಿ ಮುಗಿದಿದ್ದರೂ ಚುನಾವಣೆ ನಡೆಸದೆ ಕಾಲಹರಣ ಮಾಡುತ್ತಿದ್ದಾರೆ. ಕಾರಣ ಅವರಿಗೆ ಸೋಲುವ ಭೀತಿ ಎದುರಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯಶೆಟ್ಟಿ, ಟಿಎಪಿಸಿಎಂಎಸ್ ಅಧ್ಯಕ್ಷ ರಾಮು, ಮುಖಂಡರಾದ ಸಿಎನ್.ರವಿ, ಕುಮಾರ್, ಪ್ರೀತಿ ಅರಸ್, ನಾಗೇಂದ್ರ ಮಹೇಶ್, ಗಗನ್, ರಘು, ಶಿವಣ್ಣ, ವಿದ್ಯಾಶಂಕರ್, ವಿನೋದ್ ಇನ್ನಿತರರಿದ್ದರು.

ರಾಜ್ಯಕ್ಕೆ ಮಾಜಿ ಸಿಎಂ ಎಸ್.ಎಂ.ಕೃಷ್ಣ ಕೊಡುಗೆ ಅಪಾರ



ಕೆ.ಆರ್.ನಗರದಲ್ಲಿ ಎಸ್.ಎಂ.ಕೃಷ್ಣ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಕೆ.ಆರ್.ನಗರ, ಡಿ.15– ರಾಜ್ಯಕ್ಕೆ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಕೊಡುಗೆ ಅಪಾರ ಎಂದು ನವನಗರ ಅರ್ಬನ್ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್ ತಿಳಿಸಿದರು.

ಪಟ್ಟಣದ ಹೆಚ್.ಡಿ.ದೇವೇಗೌಡ ಸಮುದಾಯ ಭವನದಲ್ಲಿ ನಡೆದ ಮಾಜಿ ಸಿಎಂ ಎಸ್.ಎಂ.ಕೃಷ್ಣ ಅವರ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿದ ಅವರು, ಎಸ್.ಎಂ.ಕೃಷ್ಣ ಅವರು ತಮ್ಮ ರಾಜಕೀಯ ಜೀವನದ ಉದ್ದಕ್ಕೂ ಶಿಸ್ತು ಮತ್ತು ಸಂಯಮ ರೂಢಿಸಿಕೊಂಡಿದ್ದ ಮಾದರಿ ರಾಜಕಾರಣಿ ಎಂದರು.

ಇತರರ ಬಗ್ಗೆ ಹಗುರವಾಗಿ ಮಾತನಾಡದೆ ಬೇರೆಯವರು ಟೀಕಿಸಿದರೂ ಅದನ್ನು ಸಕಾರಾತ್ಮಕವಾಗಿ ತೆಗೆದುಕೊಳ್ಳುತ್ತಿದ್ದ ಅಂತಹ ನಾಯಕರು ಅತ್ಯಂತ ವಿರಳವಾಗಿದ್ದು, ತಮ್ಮ ಅಧಿಕಾರದ ಅವಧಿಯಲ್ಲಿ ಜನಮಾನಸದಲ್ಲಿ ಶಾಶ್ವತವಾಗಿ ಉಳಿಯುವ ಹತ್ತು ಹಲವು ಕಾರ್ಯಕ್ರಮಗಳನ್ನು ಜಾರಿಗೆ ತಂದ ಹೆಗ್ಗಳಿಕೆ ಎಸ್‌ಎಂಕೆ ಅವರಿಗೆ ಸಲ್ಲುತ್ತದೆ ಎಂದು ತಿಳಿಸಿದರು.

ಜಿಪಂ ಮಾಜಿ ಸದಸ್ಯ ಎಂ.ಟಿ.ಕುಮಾರ್ ಮಾತನಾಡಿ, ತಮ್ಮಲ್ಲಿದ್ದ ಅಪಾರ ಪಾಂಡಿತ್ಯ ಮತ್ತು ತಾಳ್ಮೆ ಪರಿಣಾಮವಾಗಿ ಎಸ್.ಎಂ.ಕೃಷ್ಣ ಅವರು ಪ್ರಧಾನ ಮಂತ್ರಿ ಹುದ್ದೆ ಹೊರತು ಪಡಿಸಿ ಮಿಕ್ಕೆಲ್ಲಾ ರಾಜಕೀಯ ಸ್ಥಾನಮಾನ ಅನುಭವಿಸಿ ಅವುಗಳಿಗೆ ಗೌರವ ತರುವುದರೊಂದಿಗೆ ರಾಜ್ಯದ ಕೀರ್ತಿ ಪತಾಕೆ ಜೊತೆಗೆ ಒಕ್ಕಲಿಗ ಸಮಾಜದ ಹೆಸರನ್ನು ಮುಗಿಲೆತ್ತರಕ್ಕೇರಿಸಿದ ಆ ಮಹಾನ್ ಪುರುಷನ ಹೆಸರು ಚಿರಸ್ಥಾಯಿಯಾಗಿ ಉಳಿಯಲಿದೆ ಎಂದು ನುಡಿದರು. ದಸರಾ ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಮಿರ್ಲೆಶ್ರೀನಿವಾಸಗೌಡ ಮಾತನಾಡಿದರು.

ಪುರಸಭೆ ಸದಸ್ಯರಾದ ಕೆ.ಎಲ್.ಜಗದೀಶ್, ಸಂತೋಷ್‌ಗೌಡ, ತಾಲೂಕು ಯುವ ಜೆಡಿಎಸ್ ಅಧ್ಯಕ್ಷ ಯೋಗೇಶ್, ಮಾಜಿ ಅಧ್ಯಕ್ಷ ಹೆಚ್.ಕೆ.ಸುಜಯ್, ವಕ್ತಾರ ಕೆ.ಎಲ್.ರಮೇಶ್, ವಕೀಲ ಎ.ತಿಮ್ಮಪ್ಪ, ಒಕ್ಕಲಿಗ ಸಮಾಜದ ಮುಖಂಡರಾದ ಕೇಶವ್, ಅನಿಲ್‌ಗೌಡ, ಶಂಕರೇಗೌಡ, ಸಿ.ಜೆ.ಅರುಣ್‌ಕುಮಾರ್, ವಿ.ಸಿ.ಶಿವರಾಮು, ಬಿ.ರಮೇಶ್, ಬಿ.ಈ.ರವಿಕುಮಾರ್, ಶಂಭು, ರಾಧಾಕೃಷ್ಣ, ರಾಜು, ರವಿ, ಎ.ಪಿ.ದರ್ಶನ್, ಹರೀಶ್ ಮತ್ತಿತರರಿದ್ದರು.

ಆದಿವಾಸಿಗಳನ್ನು ಮುಖ್ಯ ವಾಹಿನಿಗೆ ತರುವಲ್ಲಿ

ಆರ್‌ಜಿಹೆಚ್‌ಎಸ್ ಸಂಸ್ಥೆ ಶ್ರಮ ಶ್ಲಾಘನೀಯ



ವಾಲಿಬಾಲ್ ಪಂದ್ಯಾವಳಿಯಲ್ಲಿ ಜಯ ಗಳಿಸಿದ ತಂಡದ ಸದಸ್ಯರು.

ಹೆಚ್.ಡಿ.ಕೋಟೆ, ಡಿ.15– ಆದಿವಾಸಿ ಗಳನ್ನು ಮುಖ್ಯ ವಾಹಿನಿಗೆ ತರುವಲ್ಲಿ ಆರ್‌ಜಿ ಹೆಚ್‌ಎಸ್ ಸಂಸ್ಥೆ ಶ್ರಮ ಶ್ಲಾಘನೀಯ ಎಂದು ಪರಿಶಿಷ್ಟ ಕಲ್ಯಾಣ ವರ್ಗಗಳ ಅಧಿಕಾರಿ ಜಿ.ಆರ್.ಮಹೇಶ್ ತಿಳಿಸಿದರು.

ತಾಲೂಕಿನ ನಾಗರಹೊಳೆ ಅರಣ್ಯ ವ್ಯಾಪ್ತಿಯ ಬಳ್ಳೆ ಹಾಗೂ ಗೋಳೂರು ಹಾಡಿಯಲ್ಲಿ ಬುಡಕಟ್ಟು ಆದಿವಾಸಿಗಳನ್ನು ಮುಖ್ಯ ವಾಹಿನಿಗೆ ತರಲು ಶೈಲಜಾ ರಾಮಕೃಷ್ಣ ಚಾರಿಟಬಲ್ ಟ್ರಸ್ಟ್ ಮೈಸೂರು ಹಾಗೂ ಜಿಹೆಚ್‌ಪಿಎಸ್ ಗೋಳೂರು ಹಾಡಿ ಶಾಲೆ ಸಹಯೋಗದೊಂದಿಗೆ ಟ್ರಸ್ಟ್ ವತಿಯಿಂದ ನಿರ್ಮಾಣಗೊಂಡ ಗೋಳೂರು ಹಾಡಿ ಶಾಲೆ ನೂತನ ಕೊಠಡಿ ಉದ್ಘಾಟನೆ ಮತ್ತು ಬುಡಕಟ್ಟು ಯುವ ಸಮೂಹ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ವಾಲಿಬಾಲ್ ಪಂದ್ಯಾವಳಿ ಹಾಗೂ ಬುಡಕಟ್ಟು ನಿವಾಸಿಗಳ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಆದಿವಾಸಿಗಳನ್ನು ಮುಖ್ಯ ವಾಹಿನಿಗೆ ತರುವ ನಿಟ್ಟಿನಲ್ಲಿ ಅವರನ್ನು ಪ್ರೋತ್ಸಾಹಿಸುವ ಕೆಲಸದಲ್ಲಿ ನಿರತರಾಗಿರುವುದು ಸಂತಸದ ವಿಚಾರ. ಆದಿವಾಸಿಗಳ ಅಭಿವೃದ್ಧಿಗೆ ಈಗಾಗಲೇ ಸರ್ಕಾರ ಹಲವು ಯೋಜನೆಗಳನ್ನು ಜಾರಿಗೊಳಿಸಿದೆ. ಅಲ್ಲದೇ ಇತ್ತೀಚೆಗೆ ಸಿಎಂ ಸಿದ್ದರಾಮಯ್ಯ ಕೆರೆ ಹಾಡಿಗೆ ಭೇಟಿ ನೀಡಿದ ವೇಳೆ ಹಾಡಿಗಳ ಮೂಲ ಸೌಕರ್ಯಗಳಿಗೆ ಒತ್ತು ನೀಡಲಾಗುವುದು ಎಂದು ತಿಳಿಸಿದ್ದು, ಶೀಘ್ರ ಕಾರ್ಯ ರೂಪಕ್ಕೆ ಬರಲಿದೆ ಎಂದರು.

ಶಿಕ್ಷಣ ಇಲಾಖೆ ವಿಭಾಗೀಯ ಸಂಪನ್ಮೂಲ ಅಧಿಕಾರಿ ನಂಜಯ್ಯ, ಆರ್‌ಜಿಹೆಚ್‌ಎಸ್ ಸಂಸ್ಥೆ ಅಧ್ಯಕ್ಷೆ ಶೈಲಜಾ ರಾಮಕೃಷ್ಣ ಮಾತನಾಡಿದರು. ನಂತರ ನಡೆದ ವಾಲಿಬಾಲ್ ಪಂದ್ಯಾವಳಿಯಲ್ಲಿ ಗೋಳೂರು ಹಾಡಿ ಅಭಿ ನೇತೃತ್ವದ ಯುವಕರ ತಂಡ ಪ್ರಥಮ, ಭೋಗಪುರ ಗ್ರಾಮದ ಯುವಕರ ತಂಡ ದ್ವಿತೀಯ ಬಹುಮಾನ ಪಡೆದವು. ಬುಡಕಟ್ಟು ಮಕ್ಕಳು, ನಿವಾಸಿಗಳಿಗೆ ನಡೆಸಲಾದ ಕ್ರೀಡೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಜಯಗಳಿಸಿದವರಿಗೆ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಬಳಿಕ ನೂತನ ಶಾಲಾ ಕೊಠಡಿಯನ್ನು ಶಾಲೆ ಮುಖ್ಯ ಶಿಕ್ಷಕರಿಗೆ ಹಸ್ತಾಂತರಿಸಲಾಯಿತು.

ಸಂಸ್ಥೆಯ ಕಾರ್ಯದರ್ಶಿ ಹರೀಶ್ ಕುಮಾರ್, ನಿರ್ದೇಶಕರಾದ ಶಿವಪ್ರಸಾದ್, ರಾಜೇಶ್, ಶೇಖರ್, ಮಾರ್ಗದರ್ಶಕ ಬಾಲಕೃಷ್ಣ, ಪೊಲೀಸ್ ಸಿಬ್ಬಂದಿ ಪರಶಿವಮೂರ್ತಿ, ಅರಣ್ಯ ಇಲಾಖೆ ಸಿಬ್ಬಂದಿ ಚಿಕ್ಕಣ್ಣ, ಸ್ವಯಂ ಸೇವಕರಾದ ಗೋವಿಂದರಾಜು, ಬಸವಣ್ಣ, ಮಂಜುಳಾ, ಮುಖ್ಯ ಶಿಕ್ಷಕರಾದ ಕಾರ್ತಿಕ್, ಶಿಕ್ಷಕರಾದ ಭಾಗ್ಯ, ಶಾಂತರಾಜು, ಬಸವರಾಜು, ಮ್ಯಾಚ್ ರೆಫ್ರಿ ವಸಂತ್, ಹಾಡಿ ಮುಖಂಡರಾದ ರಾಜು, ಮಹದೇವಯ್ಯ ಸೇರಿದಂತೆ ಇನ್ನಿತರರಿದ್ದರು.

ಮನೆಯಲ್ಲಿ ನಾಗರಹಾವು ರಕ್ಷಣೆ

ಕಂಪಲಾಪುರ, ಡಿ.15– ಇಲ್ಲಿನ ಕಂಪಲಾಪುರ ಕೊಪ್ಪಲಿನ ಮಂಟಿ ಗ್ರಾಮದ ಚಂದ್ರು ಅವರ ಮನೆಯಲ್ಲಿ ಅಡಗಿದ್ದ ಭಾರೀ ಗಾತ್ರದ ನಾಗರಹಾವನ್ನು ಉರಗ ಸಂರಕ್ಷಕ ಸ್ನೇಕ್ ಗಿರೀಶ್ ರಕ್ಷಿಸಿ ಕಾಡಿಗೆ ಬಿಟ್ಟಿದ್ದಾರೆ.



ಚಂದ್ರು ಪುತ್ರಿ ಐಶ್ವರ್ಯ ಮನೆ ಬಾಗಿಲನ್ನು ಮುಚ್ಚಿ ಓದಿನಲ್ಲಿ ತಲ್ಲೀನರಾಗಿದ್ದರು. ಈ ವೇಳೆ ಮನೆಯೊಳಗಿನ ರೂಮಿನ ಪಕ್ಕದಲ್ಲಿ ಜೋರಾಗಿ ಹಾವು ಬುಸುಗುಟ್ಟಿದೆ. ಈ ವೇಳೆ ಐಶ್ವರ್ಯ ನೋಡಿದ್ದು, ತಕ್ಷಣ ತಂದೆ ಮೂಲಕ ಸ್ನೇಕ್ ಗಿರೀಶ್ ಅವರಿಗೆ ಕರೆ ಮಾಡಿ ತಿಳಿಸಲಾಗಿ ಗಿರೀಶ್ ಹಾವನ್ನು ಹಿಡಿದು ಸಂರಕ್ಷಣೆ ಮಾಡಿ ಕಂಬಿಬೋರೆ ಅರಣ್ಯಕ್ಕೆ ಬಿಟ್ಟಿದ್ದಾರೆ.

ಇಂದಿನಿಂದ ಜೆಎಸ್‌ಎಸ್ ರಂಗೋತ್ಸವ

ಸರಗೂರು, ಡಿ.15– ಪಟ್ಟಣದ ಶ್ರೀಶಿವರಾತ್ರೀಶ್ವರ ಶಿವಾನುಭವ ಮಂದಿರದ ಸಭಾಂಗಣದಲ್ಲಿ ಡಿ.16ರಿಂದ 18ರವರೆಗೆ ಜೆಎಸ್‌ಎಸ್ ರಂಗೋತ್ಸವ ಹಮ್ಮಿಕೊಳ್ಳಲಾಗಿದೆ.


ಡಿ.16ರಂದು ಬೆಳಗ್ಗೆ 10.30ಕ್ಕೆ ರಂಗಭೂಮಿ ಮತ್ತು ಚಿತ್ರ ನಟ ಸುಂದರ್ ಜೆಎಸ್‌ಎಸ್ ರಂಗೋತ್ಸವವನ್ನು ಉದ್ಘಾಟಿಸಲಿದ್ದಾರೆ. ಪಪಂ ಅಧ್ಯಕ್ಷೆ ರಾಧಿಕಾ ಅಧ್ಯಕ್ಷತೆ ವಹಿಸಲಿದ್ದು, ತಹಸೀಲ್ದಾರ್ ಮೋಹನ ಕುಮಾರಿ, ಕೋಟೆ ಹಾಗೂ ಸರಗೂರು ಬಿಇಓ ಕೆ.ಕಾಂತರಾಜು, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಸರಗೂರು ತಾಲೂಕು ಅಧ್ಯಕ್ಷ ಕೆ.ಎಸ್.ವೀರಭದ್ರಪ್ಪ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ನಂತರ ಎಸ್‌ಜೆಸಿಇ ಕ್ಯಾಂಪಸ್‌ನ ಜೆಎಸ್‌ಎಸ್ ಪಬ್ಲಿಕ್ ಶಾಲೆ ವಿದ್ಯಾರ್ಥಿಗಳು ಮಧ್ಯಮ ವ್ಯಾಯೋಗ ನಾಟಕ ಪ್ರದರ್ಶಿಸಲಿದ್ದಾರೆ.

ಡಿ.17ರಂದು ಗುಂಡ್ಲುಪೇಟೆ ಜೆಎಸ್‌ಎಸ್ ಪದವಿ ಕಾಲೇಜಿನ ವಿದ್ಯಾರ್ಥಿಗಳು ಸಾಣೇಹಳ್ಳಿ ತರಳಬಾಳು ಮಠದ ಡಾ.ಪಂಡಿತಾರಾಧ್ಯ ಶಿವಾಚಾರ್ಯರ ಜಂಗಮದೆಡೆಗೆ ನಾಟಕ, ಡಿ.18ರಂದು ದೇವಲಾಪುರ ಜೆಎಸ್‌ಎಸ್ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳು ಡಾ.ದಾ.ರಾ.ಬೇಂದ್ರೆಯವರ ಜಾತ್ರೆ ನಾಟಕಗಳನ್ನು ಪ್ರದರ್ಶಿಸುವರು. ಅಂದು ಸಂಜೆ 5 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದ್ದು, ಸರಗೂರಿನ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷೆ ಸುಧಾ ಅಧ್ಯಕ್ಷತೆ ವಹಿಸಲಿದ್ದಾರೆ. ಚಿತ್ರನಟ ದೊಡ್ಡಣ್ಣ ಸಮಾರೋಪ ಭಾಷಣ ಮಾಡಲಿದ್ದು, ಮಹಾಸಭಾ ನಿಕಟಪೂರ್ವ ಅಧ್ಯಕ್ಷ ಡಿ.ಜಿ.ಶಿವರಾಜು, ವೀರಶೈವ ಸಮಾಜದ ಅಧ್ಯಕ್ಷ ಎಸ್.ಎನ್.ಮೋಹನ್ ಕುಮಾರ್ ಉಪಸ್ಥಿತರಿರುವರು. ನಿತ್ಯ ಬೆಳಗಿನ ಪ್ರದರ್ಶನ ಶಾಲಾ ಕಾಲೇಜು ಮಕ್ಕಳಿಗಾಗಿ ಹಾಗೂ 6.30ರಂದು ಪ್ರದರ್ಶನವನ್ನು ಸಾರ್ವಜನಿಕರಿಗಾಗಿ ಏರ್ಪಡಿಸಲಾಗಿದೆ. ಪ್ರವೇಶ ಉಚಿತವಾಗಿರುತ್ತದೆ ಎಂದು ಜೆಎಸ್‌ಎಸ್ ಮಹಾವಿದ್ಯಾಪೀಠ ತಿಳಿಸಿದೆ.

ಕೃಷಿಕ ಸಮಾಜದ ಕಾರ್ಯಕಾರಿ ಸಮಿತಿ ಚುನಾವಣೆ

ಕೆ.ಪಿ.ಮಹದೇವಸ್ವಾಮಿ ಬಣಕ್ಕೆ ಭರ್ಜರಿ ಜಯ

• ಬಿ.ಎಂ.ಶಿವಮಲ್ಲಪ್ಪ ನೇತೃತ್ವದಲ್ಲಿ 15 ಸ್ಥಾನಗಳಲ್ಲಿ ಜಯ • ಖಾತೆ ತೆರೆಯದ ಪುಟ್ಟಬುದ್ಧಿ ತಂಡದ ಅಭ್ಯರ್ಥಿಗಳು



ಕೃಷಿಕ ಸಮಾಜದ ಕಾರ್ಯಕಾರಿ ಸಮಿತಿ ಚುನಾವಣೆಯಲ್ಲಿ ವಿದ್ಯೋದಯ ಶಿಕ್ಷಣ ಸಂಸ್ಥೆ ಗೌರವ ಕಾರ್ಯದರ್ಶಿ ಕೆ.ಪಿ.ಮಹದೇವಸ್ವಾಮಿ ತಂಡ ಭರ್ಜರಿ ಗೆಲುವು ಸಾಧಿಸಿ ಗೆಲುವಿನ ನಗೆ ಬೀರಿತು.

ತಿ.ನರಸೀಪುರ, ಡಿ.15– ತಾಲೂಕು ಕೃಷಿಕ ಸಮಾಜದ ಕಾರ್ಯಕಾರಿ ಸಮಿತಿ ಸದಸ್ಯರ ಆಯ್ಕೆಗಾಗಿ ಭಾನುವಾರ ನಡೆದ ಚುನಾವಣೆಯಲ್ಲಿ ವಿದ್ಯೋದಯ ಶಿಕ್ಷಣ ಸಂಸ್ಥೆ ಗೌರವ ಕಾರ್ಯದರ್ಶಿ ಕೆ.ಪಿ.ಮಹದೇವಸ್ವಾಮಿ ಬಣದ ಅಭ್ಯರ್ಥಿಗಳು ಕೃಷಿಕ ಸಮಾಜದ ಹಾಲಿ ಅಧ್ಯಕ್ಷ ಬಿ.ಎಂ.ಶಿವಮಲ್ಲಪ್ಪ ನೇತೃತ್ವದಲ್ಲಿ ಭರ್ಜರಿ ಜಯಗಳಿಸಿದರೆ, ನಿವೃತ್ತ ಮುಖ್ಯೋಪಾಧ್ಯಾಯ ಪುಟ್ಟಬುದ್ಧಿ ತಂಡದ ಅಭ್ಯರ್ಥಿಗಳು ಒಂದು ಸ್ಥಾನ ಗೆಲ್ಲಲಾಗದೇ ಸೋಲನುಭವಿಸಿದ್ದಾರೆ.

ತಿ.ನರಸೀಪುರ ತಾಲೂಕು ಕೃಷಿಕ ಸಮಾಜದ ಕಾರ್ಯಕಾರಿ ಸಮಿತಿಯ 15 ಸದಸ್ಯರ ಆಯ್ಕೆಗಾಗಿ ಭಾನುವಾರ ಪಟ್ಟಣದ ಸಹಾಯಕ ಕೃಷಿ ನಿರ್ದೇಶಕರ ಕಚೇರಿಯಲ್ಲಿ ಬೆಳಗ್ಗೆ 8 ರಿಂದ ಮಧ್ಯಾಹ್ನ 3ರವರೆಗೆ ಚುನಾವಣೆ ನಡೆಯಿತು. ಒಟ್ಟು 313 ಮತದಾರರ ಪೈಕಿ 210 ಮಂದಿ ಹಕ್ಕು ಚಲಾಯಿಸಿದರು. ಒಬ್ಬ ಮತದಾರರಿಗೆ 15 ಮತ ಚಲಾಯಿಸಲು ಅವಕಾಶ ಕಲ್ಪಿಸಲಾಗಿತ್ತು. ನಂತರ ನಡೆದ ಮತ ಎಣಿಕೆಯಲ್ಲಿ ಕೆ.ಪಿ.ಮಹದೇವಸ್ವಾಮಿ ಬೆಂಬಲಿತ ಬಣದಿಂದ ಸ್ಪರ್ಧಿಸಿದ್ದ 15 ಅಭ್ಯರ್ಥಿಗಳು ಭರ್ಜರಿ ಜಯ ಸಾಧಿಸಿದರೆ, 9 ಸ್ಥಾನಗಳಿಗಷ್ಟೇ ಸ್ಪರ್ಧಿಸಿದ್ದ ಪುಟ್ಟಬುದ್ಧಿ ತಂಡದ ಅಭ್ಯರ್ಥಿಗಳು ಒಂದೇ ಒಂದು ಸ್ಥಾನದಲ್ಲಿ ಜಯಗಳಿಸಲು ಸಾಧ್ಯವಾಗದೇ ಹೀನಾಯ ಸೋಲನುಭವಿಸಿದರು.

ಕೃಷಿಕ ಸಮಾಜದ ಚುನಾವಣೆಗೆ ಹೈಕೋರ್ಟ್‌ನಲ್ಲಿ ತಕರಾರು ಇದ್ದ ಹಿನ್ನೆಲೆಯಲ್ಲಿ ಕಳೆದ 9 ವರ್ಷಗಳಿಂದ ಚುನಾವಣೆ ನಡೆದಿರಲಿಲ್ಲ. ಹಾಗಾಗಿ ಬಿ.ಎಂ.ಶಿವಮಲ್ಲಪ್ಪ ಕಳೆದ 3 ಅವಧಿಗೂ ಅಧ್ಯಕ್ಷರಾಗಿದ್ದರು. ಈ ಬಾರಿ ಶತಾಯಗತಾಯ ಅಧಿಕಾರ ಪಡೆಯಬೇಕೆಂದು ಸ್ಪರ್ಧೆಗಿಳಿದಿದ್ದ ಪುಟ್ಟಬುದ್ಧಿ ತಂಡ ಶಿವಮಲ್ಲಪ್ಪ ತಂಡದ ಚಾಣಾಕ್ಷ ರಾಜಕೀಯ ನಡೆ ಮುಂದೆ ಸೋತು ಸುಣ್ಣವಾಗಿ ತೀವ್ರ ಮುಖಭಂಗ ಅನುಭವಿಸಿತು.

ಕೆ.ಪಿ.ಮಹದೇವಸ್ವಾಮಿ ಬೆಂಬಲಿತ ತಂಡದಿಂದ ಕಣಕ್ಕಿಳಿದಿದ್ದ ಹಾಲಿ ಅಧ್ಯಕ್ಷ ಬಿ.ಎಂ.ಶಿವಮಲ್ಲಪ್ಪ (167), ಬಿ.ಕುಮಾರ(154), ಕೆ.ಜೆ.ಚಿಕ್ಕಜವರಪ್ಪ (147), ಕೆ.ಚನ್ನಯ್ಯ(133), ಆಲಗೂಡು ನಾಗರಾಜು(153), ಪಿ.ನಾಗರಾಜು(140), ನಂಜುಂಡಸ್ವಾಮಿ(156), ಬಿ.ಆರ್.ಪುರುಷೋತ್ತಮ(132), ರಾಜಗೋಪಾಲ್ (138), ವೈ.ಎನ್.ರಾಮಸ್ವಾಮಿ(145), ಪಿ.ವಿರೂಪಾಕ್ಷ(154), ಕೆ.ಜಿ.ವೀರಣ್ಣ(171), ಪಿ.ಶಶಿಧರ(134), ಶಿವಸ್ವಾಮಿ(153) ಹಾಗೂ ಎಂ.ಸ್ವಾಮಿ 142 ಮತ ಪಡೆದು ಜಯಗಳಿಸಿದರೆ, ಎದುರಾಳಿ ತಂಡದಿಂದ ಸ್ಪರ್ಧಿಸಿದ್ದ ವೃಷಬೇಂದ್ರಸ್ವಾಮಿ(52), ಗೋಪಾಲ್(48), ಕೆ.ವಿ.ಗೌರಿಶಂಕರ್ (66), ನಟರಾಜು(67), ಪುಟ್ಟಬುದ್ಧಿ(74), ಕೆ.ಬಿ.ಬಸವರಾಜು(66), ಕೆ.ಜಿ.ಮಹದೇವಪ್ರಸಾದ್(67), ರವಿ(58) ಹಾಗೂ ಬಿ.ಲಿಂಗಪ್ಪ 58 ಮತ ಪಡೆದು ಸೋಲನುಭವಿಸಿದರು.

ಚುನಾವಣಾಧಿಕಾರಿ ಕೃಷಿ ಇಲಾಖೆ ಎಡಿ ಸುಹಾಸಿನಿ, ರಾಘವೇಂದ್ರ ಸಹಾಯಕ ಚುನಾವಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದರು. ಚುನಾವಣಾ ಫಲಿತಾಂಶ ಪ್ರಕಟಗೊಳ್ಳುತ್ತಿದ್ದಂತೆ ಕೃಷಿ ಇಲಾಖೆ ಮುಂದೆ ಜಮಾಯಿಸಿದ್ದ ಅಭ್ಯರ್ಥಿಗಳ ಬೆಂಬಲಿಗರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

ಇದೇ ವೇಳೆ ಭರ್ಜರಿ ಗೆಲುವಿಗೆ ಕಾರಣರಾದ ಕೆ.ಪಿ.ಮಹದೇವಸ್ವಾಮಿ ಅವರನ್ನು ವಿಜೇತ ಅಭ್ಯರ್ಥಿಗಳ ತಂಡ ವಿದ್ಯೋದಯ ಕಾಲೇಜಿನಲ್ಲಿ ಭೇಟಿ ಮಾಡಿ ಅಭಿನಂದನೆ ಸಲ್ಲಿಸಿ, ಸನ್ಮಾನಿಸಿತು. ಈ ವೇಳೆ ಮೂಗೂರು ಕುಮಾರಸ್ವಾಮಿ, ಕುರುಬೂರು ಶಿವಕುಮಾರ್, ಬೆನಕನಹಳ್ಳಿ ಪ್ರಭುಸ್ವಾಮಿ, ಪಿಎಸಿಸಿ ಬ್ಯಾಂಕ್ ಅಧ್ಯಕ್ಷ ಮಲ್ಲಣ್ಣ, ತಿರುಮಕೂಡಲು ಫಣೀಶ್ ಕುಮಾರ್, ದೊಡ್ಡನಹುಂಡಿ ನಂಜುಂಡಸ್ವಾಮಿ, ಪರಮೇಶ್ ಪಟೇಲ್, ಆಲಗೂಡು ಕೃಷ್ಣ ಸೇರಿದಂತೆ ಮತ್ತಿತರಿದ್ದರು.

ಉನ್ನತ ಸ್ಥಾನಕ್ಕೆ ಕೃಷಿಕ ಸಮಾಜ ಕೊಂಡೊಯ್ಯುವೆ....!

ಕೃಷಿಕ ಸಮಾಜದ ಹಾಲಿ ಅಧ್ಯಕ್ಷ ಬಿ.ಎಂ.ಶಿವಮಲ್ಲಪ್ಪ ಮಾತನಾಡಿ, ಅವಿರೋಧ ಆಯ್ಕೆಗೆ ನಮ್ಮ ಒಲವಿತ್ತಾದರೂ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆ ಅನಿವಾರ್ಯವಾಯಿತು. ಕೃಷಿಕರಾದ ನಾವು ನಮ್ಮ ತಂಡಕ್ಕೆ ವಿರೋಚಿತ ಗೆಲುವು ತಂದು ಕೊಟ್ಟಿದ್ದೀರಿ. ಇದಕ್ಕಾಗಿ ತಮಗೆಲ್ಲರಿಗೂ ಕೃತಜ್ಞತೆ ಸಲ್ಲಿಸುತ್ತೇನೆ. ಕೊಟ್ಟಿರುವ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸಿ ಕೃಷಿಕ ಸಮಾಜವನ್ನು ಸದಸ್ಯರ ಸಹಕಾರದೊಂದಿಗೆ ಉನ್ನತ ಮಟ್ಟಕ್ಕೆ ಕೊಂಡೊಯ್ಯಲು ಪ್ರಾಮಾಣಿಕ ಪ್ರಯತ್ನ ಪಡುತ್ತೇನೆ ಎಂದರು.

ಕೃಷಿಕ ಸಮಾಜ ಗೌರ್ನಮೆಂಟ್ ಬಾಡಿಯಲ್ಲ. ಇದು ಕೃಷಿಕರೇ ಸೇರಿ ಮಾಡಿಕೊಂಡಿರುವ ಬಾಡಿಯಾಗಿದ್ದು, ಇದಕ್ಕೆ ತನ್ನದೇ ಆದ ಇತಿಮಿತಿಗಳಿವೆ. ಇರುವ ಇತಿಮಿತಿಯಲ್ಲೂ ಅನೇಕ ಉತ್ತಮ ಕೆಲಸ ಮಾಡಬಹುದಾಗಿದೆ. ಸರ್ಕಾರದ ಶಾಸಕರು, ಸಚಿವರನ್ನು ವಿಶ್ವಾಸಕ್ಕೆ ಪಡೆದು ಬಿತ್ತನೆ ಬೀಜ, ಮತ್ತಿತರೆ ಸಲಕರಣೆ ಕೊಡಿಸಲು ಪ್ರಯತ್ನ ಮಾಡಲಾಗುವುದು. ಈ ಸಮಾಜಕ್ಕೆ ಹೆಚ್ಚಿನ ಸದಸ್ಯರ ಅವಶ್ಯಕತೆ ಇದೆ. ಕಳೆದ 9 ವರ್ಷಗಳಿಂದ ಹೈಕೋರ್ಟ್‌ನಲ್ಲಿ ಸ್ಟೇ ಇದ್ದ ಕಾರಣ ಸದಸ್ಯರ ನೋಂದಣಿ ಸಾಧ್ಯವಾಗಿರಲಿಲ್ಲ. ಆದರೆ ಇಂದು ನಡೆದ ಚುನಾವಣೆಯಲ್ಲಿ ನಿರೀಕ್ಷೆಗೂ ಮೀರಿದ ಬೆಂಬಲ ಕೊಟ್ಟಿದ್ದೀರಿ. ಹಾಗಾಗಿ ಮುಂದೆ ಸಾವಿರಾರು ಸದಸ್ಯರ ನೋಂದಣಿ ಮಾಡಿಸುವ ಮೂಲಕ ಸಮಾಜವನ್ನು ಗಟ್ಟಿಗೊಳಿಸಲಾಗುತ್ತದೆ. ಜಿಲ್ಲೆ ಮತ್ತು ರಾಜ್ಯದಲ್ಲೂ ತಾಲೂಕು ಕೃಷಿಕ ಸಮಾಜದ ಹೆಸರನ್ನು ಎತ್ತರದ ಸ್ಥಾನಕ್ಕೆ ಕೊಂಡೊಯ್ಯುವ ಪ್ರಾಮಾಣಿಕ ಪ್ರಯತ್ನ ನಮ್ಮದಾಗಿರುತ್ತದೆ ಎಂದರು.

ಮೈಸೂರು ಮಿತ್ರ

ಶ್ರೀರಂಗಪಟ್ಟಣದಲ್ಲಿ ಹನುಮ ಮಾಲಾಧಾರಿಗಳ ಸಂಕೀರ್ತನ ಯಾತ್ರೆ

ಬಿಗಿ ಭದ್ರತೆ, ಪೊಲೀಸರ ಜೊತೆ ಮಾತಿನ ಚಕಮಕಿ, ಮೊಳಗಿದ ಜೈಕಾರ



ಶ್ರೀರಂಗಪಟ್ಟಣದ ಸಂಕೀರ್ತನ ಯಾತ್ರೆಯಲ್ಲಿ ಪಾಲ್ಗೊಂಡಿದ್ದ ಹನುಮ ಮಾಲಾಧಾರಿಗಳು.



ಶ್ರೀರಂಗಪಟ್ಟಣ ಜಾಮೀಯ ಮಸೀದಿ ಬಳಿ ಮಾಲಾಧಾರಿಗಳು ಭಜನೆ ನಡೆಸಿದರು.

ಶ್ರೀರಂಗಪಟ್ಟಣ, ಡಿ.15– ಪಟ್ಟಣದಲ್ಲಿ ಸಹಸ್ರಾರು ಹನುಮ ಮಾಲಾಧಾರಿಗಳ ಸಂಕೀರ್ತನ ಯಾತ್ರೆ ಭಾನುವಾರ ಸಡಗರ ಸಂಭ್ರಮದಿಂದ ನಡೆಯಿತು.

ಪಟ್ಟಣದ ಹೊರವಲಯದಲ್ಲಿರುವ ಗಂಜಾಂನ ಕಾವೇರಿ ನದಿ ದಂಡೆಯಲ್ಲಿರುವ ಆಂಜನೇಯಸ್ವಾಮಿ ದೇವಾಲಯದಲ್ಲಿ ಹಿಂದೂ ಮುಖಂಡ ಮನೋಹರ್ ಮಠದ್ ವಿಶೇಷ ಪೂಜೆ ಸಲ್ಲಿಸಿ, ಆಂಜನೇಯ ಸ್ವಾಮಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಮೆರವಣಿಗೆಯ ಸಂಕೀರ್ತನ ಯಾತ್ರೆಗೆ ಚಾಲನೆ ನೀಡಿದರು.

ಮಾಲಾಧಾರಿಗಳು ಪಟ್ಟಣದ ಮೂಡಲ ಬಾಗಿಲು ಆಂಜನೇಯ ಸ್ವಾಮಿ ದೇವಾಲಯದವರೆಗೂ ಯಾತ್ರೆ ಕೈಗೊಂಡು, ಗಂಜಾಂನ ಬೇಸಿಗೆ ಅರಮನೆ, ಆಸ್ಪತ್ರೆ, ಬೆಂಗಳೂರು–ಮೈಸೂರು ಹೆದ್ದಾರಿ ಹಾಗೂ ಪುರಾತನ ಕೋಟೆದ್ವಾರದಲ್ಲಿ ಯಾತ್ರೆ ಸಂಚರಿಸಿ ಮಧ್ಯಾಹ್ನದ ವೇಳೆಗೆ ಐತಿಹಾಸಿಕ ಮೂಡಲ ಬಾಗಿಲು ಆಂಜನೇಯಸ್ವಾಮಿ ದೇವಾಲಯ ತಲುಪಿತು. ಮೆರವಣಿಗೆಯ ಉದ್ದಕ್ಕೂ ಹಿಂದೂ ಹಾಗೂ ಹನುಮಾ ಮಾಲಾಧಾರಿಗಳು ಜೈ ಶ್ರೀರಾಂ, ಭಜರಂಗಿ ಭಜರಂಗಿ ಘೋಷಣೆಗಳು ಮೊಳಗಿದವು. ಮಾಲಾಧಾರಿಗಳು ಭಗವಾಧ್ವಜಗಳನ್ನು ಬೀಸಿದರು. ದಾರಿಯುದ್ದಕ್ಕೂ ಭಜನೆ, ಕೀರ್ತನೆಗಳನ್ನು ಮಾಡಿದರು. ಪುಟ್ಟಮಕ್ಕಳು ಹಾಗೂ ಕೆಲವರು ಶ್ರೀರಾಮ, ಲಕ್ಷ್ಮಣ, ಹನುಮಂತ ವೇಷ ತೊಟ್ಟು ಗಮನಸೆಳೆದರು.

ಮಂಡ್ಯ ಮಾತ್ರವಲ್ಲದೆ ರಾಮನಗರ, ಮೈಸೂರು, ಮದ್ದೂರು, ಪಾಂಡವಪುರ, ನಾಗಮಂಗಲ, ಕೆ.ಆರ್.ಪೇಟೆ ಹಾಗೂ ಶ್ರೀರಂಗಪಟ್ಟಣ ಸುತ್ತಮುತ್ತಲ ಗ್ರಾಮಗಳಿಂದ ಸಾವಿರಾರು ಹನುಮ ಭಕ್ತರು ಈ ಸಂಕೀರ್ತನಾ ಯಾತ್ರೆಯಲ್ಲಿ ಪಾಲ್ಗೊಂಡಿದ್ದರು. ಧಾರ್ಮಿಕ ವಿಧಿ ವಿಧಾನಗಳಂತೆ ಮಾಲಾಧಾರಿಗಳು ಮೂಡಲ ಬಾಗಿಲು ಆಂಜನೇಯಸ್ವಾಮಿ ದೇವಾಲಯದಲ್ಲಿ ತಮ್ಮ ಮಾಲೆಗಳನ್ನು ವಿಸರ್ಜಿಸಿದರು. ಜಿಲ್ಲೆಯಾದ್ಯಂತ ಆಗಮಿಸಿದ ಭಕ್ತಾದಿಗಳು, ಹನುಮಮಾಲಾ ಸಮಿತಿಯ ಮುಖ್ಯಸ್ಥರು ಹಾಗೂ ಸದಸ್ಯರು ಇದ್ದರು.

ಬಿಗಿ ಭದ್ರತೆ: ಜಿಲ್ಲಾ ನಾನಾ ಭಾಗಗಳಿಂದ ಹನುಮ ಮಾಲಾಧಾರಿಗಳು ಪಟ್ಟಣಕ್ಕೆ ಆಗಮಿಸಿ ಹನುಮಮಾಲೆ ವಿಸರ್ಜನೆ ಕಾರ್ಯಕ್ರಮ ಹಮ್ಮಿಕೊಂಡಿರುವುದರಿಂದ ಯಾವುದೇ ಅಹಿತಕರ ಘಟನೆಗಳು ಸಂಭವಿಸದಂತೆ ಪಟ್ಟಣ ಹಾಗೂ ಗಂಜಾಂನಲ್ಲಿ ಸಾವಿರಾರು ಸಂಖ್ಯೆಯಲ್ಲಿ ಹನುಮ ಮಾಲಾಧಾರಿಗಳು ಸಂಕೀರ್ತನ ಯಾತ್ರೆಯಲ್ಲಿ ಪಾಲ್ಗೊಳ್ಳುವ ಹಿನ್ನೆಲೆ ಶ್ರೀರಂಗಪಟ್ಟಣ ಪೊಲೀಸರು ಭಿಗಿಭದ್ರತೆ ಕೈಗೊಂಡಿದ್ದರು.

ಹನುಮ ಮಾಲಾಧಾರಿಗಳು ಯಾತ್ರೆ ತೆರಳಲಿರುವ ಪಟ್ಟಣ ಹಾಗೂ ಗಂಜಾಂನ ಪ್ರಮುಖ ಮಾರ್ಗ ಸೇರಿದಂತೆ ವಿವಿಧ ಸ್ಥಳಗಳು ಹಾಗೂ ಸೂಕ್ಷ್ಮ ಪ್ರದೇಶವಾದ ಕಾರಣ 1ಐಜಿ, 3 ಎಸ್ಪಿ, 3 ಎಎಸ್‌ಪಿ, 20 ಡಿವೈಎಸ್ಪಿ ಸೇರಿದಂತೆ 1708 ಮಂದಿ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ, ಜೊತೆಗೆ 8 ಡಿಎಆರ್, 5 ಕ್ಯೂಆರ್‌ಟಿ, 9 ಕೆಎಸ್‌ಆರ್‌ಪಿ ತುಕಡಿ ಮತ್ತು 300 ಗೃಹ ರಕ್ಷಕ ದಳ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ಜೊತೆಗೆ ಟಿಪ್ಪು ಮಸೀದಿ ಬಳಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ಡ್ರೋನ್ ಕ್ಯಾಮರ ಸೇರಿದಂತೆ ಹತ್ತಾರು ಆಯ್ದ ಸ್ಥಳಗಳಲ್ಲಿ ಸಿಸಿ ಕ್ಯಾಮರಾ ಅಳವಡಿಸಲಾಗಿತ್ತು.

ಈಡುಗಾಯಿ ಪೂಜೆ: ಮಸೀದಿ ಪಕ್ಕದ ಪುರಸಭೆ ವೃತ್ತದಲ್ಲಿ ಮಾಲಾಧಾರಿಗಳು ಪೂಜೆ ಸಲ್ಲಿಸಿ, ಈಡುಗಾಯಿ ಹೊಡೆದು, ಕರ್ಪೂರ ಹಚ್ಚಿ ಕೆಲಕಾಲ ರಸ್ತೆಯಲ್ಲೇ ಕುಳಿತು ರಾಮ ಹಾಗೂ ಆಂಜನೇಯ ಸ್ವಾಮಿ ಭಜನೆ ನಡೆಸಿದರು. ನಂತರ ರಕ್ತದ ಕಣ ಕಣ ಕುದಿಯುತ್ತಿದೆ ಹಿಂದೂ, ಹಿಂದೂ ಎನ್ನುತ್ತಿದೆ. ಹನುಮನ ಪಾದದ ಮೇಲಾಣೆ ಮಂದಿರವಿಲ್ಲೆ ಕಟ್ಟುವೆವು, ಕಟ್ಟುವೆವು ಮಂದಿರವಿಲ್ಲೆ ಕಟ್ಟುವೆವು ಎಂದು ಘೋಷಣೆ ಕೂಗಿದರು.

ಮಾತಿನ ಚಕಮಕಿ: ಪಟ್ಟಣ ಪುರಸಭೆ ವೃತ್ತದ ಬಳಿ ಸಂಕೀರ್ತನ ಯಾತ್ರೆ ಬಂದ ವೇಳೆ ಹನುಮ ಮಾಲಾಧಾರಿಗಳು ಮಂದಿರ ಕಟ್ಟುವೆವು ಎಂದು ಜಾಮೀಯ ಮಸೀದಿ ಎದುರು ಕೂಗುತ್ತಿದ್ದ ವೇಳೆ ಪೊಲೀಸರು ಅವರನ್ನು ತಡೆದು ಮುಖ್ಯ ರಸ್ತೆಯಲ್ಲಿ ತೆರಳಲು ಸೂಚಿಸಿ ತಳ್ಳುತ್ತಿದ್ದ ವೇಳೆ ಪೊಲೀಸರು ಹಾಗೂ ಮಾಲಾಧಾರಿಗಳ ನಡುವೆ ಮಾತಿನ ಚಕಮಕಿ ನಡೆದು ಸ್ವಲ್ಪ ಹೊತ್ತು ನೂಕುನುಗ್ಗಲು ಉಂಟಾಗಿ ತಳ್ಳಾಟ, ನೂಕಾಟ ನಡೆಯಿತು.

ಜೈಕಾರ: ಸಂಕೀರ್ತನ ಯಾತ್ರೆ ವೇಳೆ ಉರಿಗೌಡ ಹಾಗೂ ನಂಜೇಗೌಡ ಪರ ಘೋಷಣೆ ಕೂಗಿ, ಟಿಪ್ಪು ಸುಲ್ತಾನ್ ಕೊಂದ ಉರಿಗೌಡ, ನಂಜೇಗೌಡ ಅವರಿಗೆ ಜೈ ಎಂದು ಘೋಷಣೆ ಕೂಗಿದರು.

ಇದಕ್ಕೂ ಮುನ್ನ ಯಾತ್ರೆಗೆ ಚಾಲನೆ ನೀಡಿದ ಬಳಿಕ ಹಿಂದೂ ಮುಖಂಡ ಮನೋಹರ್ ಮಠದ್ ಮಾತನಾಡಿ, ಅಯೋಧ್ಯೆಯಲ್ಲಿ ರಾಮಮಂದಿರ ಆಗಿದೆ, ಕಾಶಿಯಲ್ಲಿ ವಿಶ್ವನಾಥ ಮಂದಿರ ಆಗಿದೆ. ಇನ್ನು ಕೃಷ್ಣನ ದೇವಾಲಯ ಆಗಬೇಕು. ನಾವು ಅದಕ್ಕೆ ಬೆಂಬಲ ಕೊಡಬೇಕು ಎಂದರು.

ಶ್ರೀರಂಗಪಟ್ಟಣದ ಇಂದಿನ ಜಾಮೀಯ ಮಸೀದಿ ಜಾಗದಲ್ಲಿ 1674ನೇ ಇಸವಿಯಲ್ಲೇ ದೇವಾಲಯ ಕಟ್ಟಿಸಲಾಗಿತ್ತು. ಆದರೆ ನಮ್ಮ ಇತಿಹಾಸ ತಿರುಚಿ ಅಲ್ಲಿ ಮಸೀದಿ ಇದೆ ಎಂಬ ದಾಖಲೆ ಸೃಷ್ಟಿಸಿದ್ದರು. ನಮ್ಮ ಸಂಕಲ್ಪ ಅದೇ ಜಾಗದಲ್ಲಿ ಹನುಮನ ದೇವಾಲಯ ಆಗಬೇಕು. ನಾವು ಕಾನೂನಿನ ಮೂಲಕವೇ ಇದಕ್ಕೆ ಹೋರಾಟ ಮಾಡಬೇಕು. ಜ್ಞಾನವ್ಯಾಪಿ ಮಸೀದಿಯಲ್ಲಿ ಪರಿಶೀಲನೆ ಆದ ಹಾಗೆ ಇಲ್ಲೂ ಪರಿಶೀಲನೆ ಆಗಲಿ ಎಂದರು.

ಕೊನೆಗೂ ತೃತೀಯಲಿಂಗಿಗಳಿಗೆ ದೊರೆತ ಗೃಹಲಕ್ಷ್ಮಿ ಭಾಗ್ಯ

ಮೈಸೂರಿನ 30 ಫಲಾನುಭವಿಗಳಿಗೆ 2 ಸಾವಿರ ಹಣ ಸಂದಾಯ

ಮೈಸೂರು, ಡಿ.15(ಬಿಎಲ್‌ಯು)– ಮೈಸೂರಿನ ತೃತೀಯಲಿಂಗಿಗಳಿಗೆ ಗೃಹಲಕ್ಷ್ಮಿ ಯೋಜನೆಯ ಭಾಗ್ಯ ದೊರೆಕಿದ್ದು, ಕಳೆದ ಒಂದು ವರ್ಷದ ಸತತ ಹೋರಾಟಕ್ಕೆ ಫಲ ಸಿಕ್ಕಿದೆ.

ರಾಜ್ಯ ಕಾಂಗ್ರೆಸ್ ಸರ್ಕಾರದ ಮಹತ್ವಾಕಾಂಕ್ಷಿಯ ಗೃಹಲಕ್ಷ್ಮಿ ಯೋಜನೆಯಿಂದ ಕರ್ನಾಟಕದ 1.25 ಲಕ್ಷ ಮನೆ ಯಜಮಾನಿಯರಿಗೆ ಪ್ರತಿ ತಿಂಗಳು ಎರಡು ಸಾವಿರ ರೂಪಾಯಿ ಸಂದಾಯವಾಗುತ್ತಿದೆ ಯಾವುದೇ ಮಧ್ಯವರ್ತಿಗಳ ಹಾವಳಿ ಇಲ್ಲದೆ ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಹಣ ಜಮೆಯಾಗುತ್ತಿದೆ.

ಆದರೆ ರಾಜ್ಯದ ಯಾವುದೇ ತೃತೀಯಲಿಂಗಿಗಳಿಗೆ ಗೃಹಲಕ್ಷ್ಮಿ ಯೋಜನೆಯಲ್ಲಿ ಹಣ ಸಂದಾಯವಾಗುತ್ತಿರಲಿಲ್ಲ. ತೃತೀಯಲಿಂಗಿಗಳು ಕೂಡ ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳು ಎಂದು ಸರ್ಕಾರ ಆದೇಶ ಹೊರಡಿಸಿದ್ದೂ, ಹಣ ಮಾತ್ರ ಸಂದಾಯವಾಗುತ್ತಿರಲಿಲ್ಲ.

ಈ ಸಂಬಂಧ ಮೈಸೂರಿನ ಪ್ರಾತಿ ಪ್ರಕಾಶ್ ಸೇರಿದಂತೆ ಇತರೆ ತೃತೀಯ ಲಿಂಗಿಗಳು ಹೋರಾಟ ಮಾಡುತ್ತಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಅವರಿಗೆ ಹಲವು ಬಾರಿ ಮನವಿ ಕೂಡ ಸಲ್ಲಿಸಿದ್ದರು. ಆದರೆ ಕಳೆದ ಒಂದು ವರ್ಷದಿಂದ ಹಣ ಮಾತ್ರ ಬಂದಿರಲಿಲ್ಲ.

ಆದರೆ ಈಗ ರಾಜ್ಯ ಸರ್ಕಾರ ಮೈಸೂರಿನ 30 ತೃತೀಯಲಿಂಗಿಗಳ ಬ್ಯಾಂಕ್ ಖಾತೆಗೆ ಡಿಸೆಂಬರ್ 11 ರಂದು ಗೃಹಲಕ್ಷ್ಮಿ ಹಣ ಜಮಾ ಮಾಡಿದೆ. ಇದರಿಂದ ತೃತೀಯಲಿಂಗಿಗಳು ಸಂತಸಗೊಂಡಿದ್ದಾರೆ.

ತೃತೀಯಲಿಂಗಿಗಳು ಭಿಕ್ಷಾಟನೆ ಮಾಡಿ, ಜೀವನ ಮಾಡಬೇಕಿದೆ. ಅವರ ಶಕ್ತಿಯಾನುಸಾರ ದಿನಕ್ಕೆ 300 ರಿಂದ 500 ರೂಪಾಯಿ ಸಂಪಾದನೆ ಮಾಡುತ್ತಾರೆ. ಆದರೆ ನಿಶ್ಯಕ್ತರಾಗಿರುವ, ಅನಾರೋಗ್ಯಕ್ಕೆ ಒಳಗಾಗಿರುವ ಹಾಗೂ ವೃದ್ಧ ತೃತೀಯಲಿಂಗಿಗಳಿಗೆ ಭಿಕ್ಷಾಟನೆ ಸಾಧ್ಯವಾಗುವುದಿಲ್ಲ. ಇವರು ಬದುಕು ನಡೆಸುವುದೇ ಕಷ್ಟವಾಗಿತ್ತು. ಆದರೆ ಈಗ ಸರ್ಕಾರದಿಂದ ಪ್ರತಿ ತಿಂಗಳು ಎರಡು ಸಾವಿರ ರೂಪಾಯಿ ಗೃಹಲಕ್ಷ್ಮಿ ಹಣ ಬರುವುದರಿಂದ ಅವರ ಜೀವನೋಪಾಯಕ್ಕೆ ಅನುಕೂಲವಾಗಲಿದೆ ಎಂದು ಪ್ರಾತಿ ಪ್ರಕಾಶ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಇನ್ನು ಬಹಳಷ್ಟು ತೃತೀಯಲಿಂಗಿಗಳಿಗೆ ಈ ಯೋಜನೆ ಭಾಗ್ಯ ಸಿಕ್ಕಿಲ್ಲ. ಸರ್ಕಾರದ ಮೇಲೆ ನಂಬಿಕೆ ಇಲ್ಲದ ಕಾರಣ ಅರ್ಜಿ ಸಲ್ಲಿಸಿರಲಿಲ್ಲ. ನಿಮಗೆಲ್ಲಾ ಹಣ ಬಂದ ಮೇಲೆ ನಾವು ಅರ್ಜಿ ಹಾಕುತ್ತೇವೆ ಎಂದು ಹೇಳುತ್ತಿದ್ದರು. ಈಗ ನಮಗೆ ಹಣ ಬಂದಿರುವ ಕಾರಣ ಉಳಿದಿರುವ ಎಲ್ಲರೂ ಈಗ ಗೃಹಲಕ್ಷ್ಮಿ ಯೋಜನೆಗೆ ಅರ್ಜಿ ಸಲ್ಲಿಸುತ್ತಾರೆ ಎಂದು ಹೇಳಿದರು.

ಕಾರ್ಖಾನೆಯಲ್ಲಿ ವಿದ್ಯುತ್ ಮೋಟಾರ್‌ಗಳನ್ನು ಕಳವು ಮಾಡಿದ್ದ ನಾಲ್ವರು ಖದೀಮರ ಬಂಧನ

10 ಲಕ್ಷ ರೂ. ಬೆಲೆಬಾಳುವ ಮಾಲು ವಶ

ಮೈಸೂರು, ಡಿ. 15(ಆರ್‌ಕೆ)– ರೋಲಿಂಗ್ ಷಟರ್ ಮಿಟಿ ಕಾರ್ಖಾನೆಯ ವಿದ್ಯುತ್ ಮೋಟಾರುಗಳನ್ನು ಕಳವು ಮಾಡಿದ್ದ ನಾಲ್ವರನ್ನು ಬಂಧಿಸಿರುವ ಮೈಸೂರಿನ ವಿಜಯನಗರ ಠಾಣೆ ಪೊಲೀಸರು, 10 ಲಕ್ಷ ರೂ. ಬೆಲೆಬಾಳುವ ಮಾಲು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಬೆಂಗಳೂರಿನ ಗೋರಿಪಾಳ್ಯ ನಿವಾಸಿ ಲೇಟ್ ಸಾಬುಲಾಲ್ ಅವರ ಮಗ ಸಲೀಂ ಪಾಷಾ ಅಲಿಯಾಸ್ ಲಡ್ಡಾ ಕಲೀಂ(52), ಕಲಾಸಿಪಾಳ್ಯದ ಲೇಟ್ ಇರ್ಷಾದ್ ಪಾಷಾರ ಮಗ ಮೊಹಮ್ಮದ್ ತೌಶಿಪ್ ಪಾಷಾ (36), ಪಾದರಾಯನಪುರ ನಿವಾಸಿ ಲೇಟ್ ಏಜಾಜ್ ಖಾನ್‌ರ ಮಗ ಸಲ್ಮಾನ್ ಖಾನ್(30) ಹಾಗೂ ಚಿಕ್ಕಬಳ್ಳಾಪುರ ತಾಲೂಕು ಚಿಂತಾಮಣಿ ನಿವಾಸಿ ಲೇಟ್ ಅಮೀರ್ ಖಾನ್ ಅವರ ಮಗ ಮುಜಾಹಿದ್ ಖಾನ್ ಅಲಿಯಾಸ್ ಮೈಮೂನ್(38) ಬಂಧಿತ ಆರೋಪಿಗಳು.


2024ರ ನವೆಂಬರ್ 30ರಂದು ಮೈಸೂರಿನ ಹೆಬ್ಬಾಳ್‌ನಲ್ಲಿರುವ ಡೀಕೆವ್ ರೆಸಿನ್ಸ್ ಲಿಮಿಟೆಡ್‌ನ 3 ಸ್ಟೋರ್ ರೂಂಗಳ ರೋಲಿಂಗ್ ಷಟರ್ ಮಿಟಿ ಬೆಲೆಬಾಳುವ ವಿದ್ಯುತ್ ಮೋಟಾರ್‌ಗಳು ಹಾಗೂ ಕಬ್ಬಿಣದ ಪದಾರ್ಥಗಳನ್ನು ಕಳವು ಮಾಡಲಾಗಿತ್ತು. ಈ ಸಂಬಂಧ ವಿಜಯನಗರ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಸುರೇಶ್‌ಕುಮಾರ್ ಅವರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದರು. ತಮಗೆ ದೊರೆತ ಸುಳಿವಿನ ಜಾಡು ಹಿಡಿದ ಪೊಲೀಸರು ಡಿಸೆಂಬರ್ 7ರಂದು ಗೂಡ್ಸ್ ವಾಹನ (ಕೆಎ 51–ಎಎ 5556 ಮತ್ತು ಕೆಎ 41–ಎ 8270)ಗಳಲ್ಲಿ ತೆರಳುತ್ತಿದ್ದಾಗ ಸಂಶಯ ಬಂದ ಹಿನ್ನೆಲೆಯಲ್ಲಿ ವಾಹನಗಳನ್ನು ತಡೆದು ಕೆಆರ್‌ಎಸ್ ರಸ್ತೆಯಲ್ಲಿ ಪರಿಶೀಲಿಸಿದಾಗ, ಆರೋಪಿಗಳು ಕಳವು ಮಾಲುಗಳನ್ನು ಸಾಗಿಸುತ್ತಿದ್ದಾರೆ ಎಂಬ ಮಾಹಿತಿ ತಿಳಿಯಿತು.

ಠಾಣೆಗೆ ಕರೆತಂದು ವಿಚಾರಣೆ ನಡೆಸಿದ ಪೊಲೀಸರು, ಖದೀಮರೆಂದು ಖಚಿತವಾದ ಹಿನ್ನೆಲೆಯಲ್ಲಿ ನಾಲ್ವರನ್ನು ಬಂಧಿಸಿ ಅವರಿಂದ 3 ಲಕ್ಷ ರೂ. ಬೆಲೆಬಾಳುವ ವಿದ್ಯುತ್ ಮೋಟಾರ್‌ಗಳು, ಕಬ್ಬಿಣದ ಪದಾರ್ಥಗಳು ಹಾಗೂ ಕೃತ್ಯಕ್ಕೆ ಬಳಸಿದ್ದ 7 ಲಕ್ಷ ರೂ. ಮೌಲ್ಯದ 2 ಸರಕು ವಾಹನಗಳನ್ನು ವಶಪಡಿಸಿಕೊಂಡರು. ಆರೋಪಿ ಕಲೀಂ ಪಾಷಾ ಅಲಿಯಾಸ್ ಲಡ್ಡಾ ಕಲೀಂ ಎಂಬಾತ ಮೈಸೂರಿನ ಉದಯಗಿರಿ ಠಾಣೆಯಲ್ಲಿ ಕಳ್ಳತನ ಪ್ರಕರಣದಲ್ಲಿ ಆರೋಪಿಯಾಗಿದ್ದನಲ್ಲದೇ, ಮಂಡಿ ಪೊಲೀಸ್ ಠಾಣೆಯಲ್ಲಿ ಕೊಲೆ ಪ್ರಕರಣದಲ್ಲೂ ಸಹ ಭಾಗಿಯಾಗಿ ತಲೆಮರೆಸಿಕೊಂಡಿದ್ದ ಎಂಬುದು ವಿಚಾರಣೆ ವೇಳೆ ತಿಳಿದುಬಂದಿತು.

ಮತ್ತೋರ್ವ ಆರೋಪಿ ಮುಜಾಹಿದ್ ಖಾನ್ ಎಂಬಾತ ಚಿಕ್ಕಬಳ್ಳಾಪುರ ಹಾಗೂ ನಂದಿ ಪೊಲೀಸ್ ಠಾಣೆಯಲ್ಲಿ ಕಳವು ಪ್ರಕರಣದ ಆರೋಪಿಯಾಗಿದ್ದು, ಇನ್ನೋರ್ವ ಮೊಹಮದ್ ತೌಸಿಪ್ ಸಹ ಬೆಂಗಳೂರಿನ ಕಲಾಸಿಪಾಳ್ಯ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕೊಲೆ ಆರೋಪಿಯಾಗಿದ್ದಾನೆ. ಈ ಆರೋಪಿಗಳನ್ನು ಹೆಡೆಮುರಿ ಕಟ್ಟಿ ಬಂಧಿಸಿ ಕಳವು ಮಾಲನ್ನು ವಶಪಡಿಸಿಕೊಳ್ಳುವಲ್ಲಿ ವಿಜಯನಗರ ಪೊಲೀಸರು ಯಶಸ್ವಿಯಾಗಿದ್ದಾರೆ.

ಡಿಸಿಪಿ ಎಸ್.ಜಾಹ್ನವಿ ಅವರ ನಿರ್ದೇಶನದಂತೆ ವಿಜಯನಗರ ಉಪ ವಿಭಾಗದ ಎಸಿಪಿ ಜಿ.ಎಸ್. ಗಜೇಂದ್ರ ಪ್ರಸಾದ್ ಅವರ ಮಾರ್ಗದರ್ಶನದಲ್ಲಿ ವಿಜಯನಗರ ಠಾಣೆ ಇನ್ಸ್‌ಪೆಕ್ಟರ್ ಎಸ್.ಡಿ. ಸುರೇಶ್ ಕುಮಾರ್, ಸಬ್ ಇನ್ಸ್‌ಪೆಕ್ಟರ್‌ಗಳಾದ ಕೆ. ನಾರಾಯಣ, ಶ್ರೀಕೃಷ್ಣ, ಸಿಬ್ಬಂದಿಗಳಾದ ಶಂಕರ್, ಪ್ರದೀಪ್, ಡಿ. ಪರಮೇಶ್, ಕೆ.ಎನ್. ಲೋಕೇಶ್, ಕೆ.ಎನ್.ಮಂಜುನಾಥ್, ಎನ್. ವೆಂಕಟೇಶ್, ಎ.ಎಂ.ಪರಮೇಶ, ರಂಜಿತಾ, ಚಂದ್ರಶೇಖರ್, ಎಂ. ಪ್ರದೀಪ್, ಕುಮಾರ್, ಮಂಜು, ಶ್ಯಾಂಸುಂದರ್ ಹಾಗೂ ಇತರರು ಪತ್ತೆ ಕಾರ್ಯದಲ್ಲಿ ಪಾಲ್ಗೊಂಡಿದ್ದರು. ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಅವರು ವಿಜಯನಗರ ಪೊಲೀಸರ ಪತ್ತೆ ಕಾರ್ಯವನ್ನು ಪ್ರಶಂಸಿಸಿದ್ದಾರೆ.

ಶಾಸಕ ಜಿ.ಟಿ.ದೇವೇಗೌಡರಿಗೆ ಅಭಿನಂದನೆ



ಇತ್ತೀಚೆಗೆ ನಡೆದ ಆನಂದೂರು ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆಯಲ್ಲಿ ನೂತನವಾಗಿ ಆಯ್ಕೆಯಾದ ನಿರ್ದೇಶಕರುಗಳು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಹಾಗೂ ಅವರ ಧರ್ಮಪತ್ನಿ ಶ್ರೀಮತಿ ಲಲಿತಾ ಜಿ.ಟಿ.ದೇವೇಗೌಡರನ್ನು ಅಭಿನಂದಿಸಿದರು.ಈ ಸಂದರ್ಭದಲ್ಲಿ ನಿರ್ದೇಶಕರುಗಳಾದ ಎನ್.ಬಿ.ಮಂಜು, ದಿನೇಶ್, ದೇವೇಂದ್ರ, ಅಂಕಿತ ಯಧುಕುಮಾರ್, ಸಿದ್ದನಾಯ್ಕ, ಶ್ರೀನಿವಾಸ್ ಶೆಟ್ಟಿ, ಲಕ್ಷ್ಮೀದೇವಮ್ಮ, ಭದ್ರಯ್ಯ, ಗ್ರಾಪಂ ಸದಸ್ಯ ಶಿವಣ್ಣ, ಮಹದೇವ್, ಮುಖಂಡರಾದ ನಂಜುಂಡೇಗೌಡ, ನಾಗರಾಜ್, ರಾಮಕೃಷ್ಣ, ಲೋಕೇಶ್, ಉಮೇಶ್, ಫೋಟೋ ರಮೇಶ್, ರಾಜೇಶ್, ಪುಟ್ಟಸ್ವಾಮಚಾರ್, ಚಲುವೇಗೌಡ, ಮಹೇಂದ್ರ, ನಂದೀಶ್, ಶ್ರೀನಿವಾಸ್ ಇನ್ನಿತರರಿದ್ದರು.




ಡಿ.ಸಿ.ವಿನಯ್‌ಕುಮಾರ್‌ಗೆ ಪಿಹೆಚ್.ಡಿ

ಡಾ.ಎನ್.ಕೆ.ಲೋಕನಾಥ್ ಅವರ ಮಾರ್ಗದರ್ಶನದಲ್ಲಿ ಡಿ.ಸಿ.ವಿನಯ್‌ಕುಮಾರ್ ಅವರು ಭೌತಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಪಂಚಮಸಾಲಿ ಸಮುದಾಯದವರ ಮೇಲಿನ ಲಾಠಿಚಾರ್ಜ್ ಅಮಾನವೀಯ

ಹೊಸ ಮಠದ ಶ್ರೀ ಚಿದಾನಂದ ಸ್ವಾಮೀಜಿ ಆಕ್ರೋಶ



ಮೈಸೂರು, ಡಿ.15(ಬಿಎಲ್‌ಯು)– 2ಎ ಮೀಸಲಾತಿಗೆ ಆಗ್ರಹಿಸಿ ಬೆಳಗಾವಿ ವಿಧಾನಸಭಾ ಅಧಿವೇಶನದ ಸಂದರ್ಭದಲ್ಲಿ ಪ್ರತಿಭಟನೆ ನಡೆಸುತ್ತಿದ್ದ ಪಂಚಮಸಾಲಿ ಸಮುದಾಯದ ಮೇಲೆ ಲಾಠಿಚಾರ್ಜ್ ಮಾಡಿ, ಜಯ ಮೃತ್ಯುಂಜಯ ಸ್ವಾಮೀಜಿ ಬಂಧಿಸಿರುವ ರಾಜ್ಯ ಸರ್ಕಾರದ ಕ್ರಮ ಅಮಾನವೀಯ ಎಂದು ಮೈಸೂರಿನ ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನಗರದ ಅಗ್ರಹಾರದ ಮಠದಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 2ಎ ಮೀಸಲಾತಿ ನೀಡುವ ಸಂಬಂಧ ಪಂಚಮಸಾಲಿ ಸಮುದಾಯದ ಮುಖಂಡರು ಹಾಗೂ ಸ್ವಾಮೀಜಿ ಅವರನ್ನು ಸರ್ಕಾರ ಕರೆದು ಮಾತನಾಡಬೇಕಿತ್ತು. ಅದು ಬಿಟ್ಟು ಹೋರಾಟ ಹತ್ತಿಕ್ಕುವ ಹುನ್ನಾರ ನಡೆಸಿರುವುದು ಎಷ್ಟು ಸರಿ? ಎಂದು ಪ್ರಶ್ನಿಸಿದರು.

ಈ ಹಿಂದೆ ವಿರೋಧ ಪಕ್ಷದ ನಾಯಕರಾಗಿದ್ದ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ನೀಡಬೇಕೆಂದು ಬೆಂಬಲ ನೀಡಿದ್ದರು. ಆದರೆ ಈಗ ಅವರೇ ಮುಖ್ಯಮಂತ್ರಿ ಆಗಿರುವ ಈ ಸಂದರ್ಭದಲ್ಲಿ ಮೀಸಲಾತಿ ನೀಡಲು ವಿರೋಧ ವ್ಯಕ್ತಪಡಿಸುತ್ತಿದ್ದಾರೆ ಎಂದು ಕಿಡಿಕಾರಿದರು.

ಬೆಳಗಾವಿಯಲ್ಲಿ ಶಾಂತಿಯುತವಾಗಿ ನಡೆಯುತ್ತಿದ್ದ ಪ್ರತಿಭಟನೆ ತೀವ್ರ ಸ್ವರೂಪ ಪಡೆಯಲು ಪ್ರಚೋದನೆ ನೀಡಿದ್ದೆ ಸಿದ್ದರಾಮಯ್ಯ. ಆದರೆ ಯಾವುದೇ ತಪ್ಪು ಮಾಡದ ಪ್ರತಿಭಟನಾಕಾರರ ಮೇಲೆ ಲಾಠಿಯಿಂದ ಹಲ್ಲೆ ನಡೆಸಿದ್ದಾರೆ ಎಂದು ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಲಿಂಗಾಯಿತ ಸಮುದಾಯ ಹೆಚ್ಚು ಬಡವರಾಗುತ್ತಿದ್ದಾರೆ. ಇದರಿಂದ ಅವರ ಮಕ್ಕಳಿಗೆ ವಿದ್ಯಾಭ್ಯಾಸ ಹಾಗೂ ಉದ್ಯೋಗಕ್ಕಾಗಿ 2ಎ ಮೀಸಲಾತಿ ಅತ್ಯವಶ್ಯವಾಗಿದೆ ಇದರಿಂದ ಪಂಚಮಸಾಲಿ ಸಮುದಾಯ ಹೋರಾಟ ನ್ಯಾಯ ಸಮ್ಮತವಾಗಿದೆ ಎಂದು ಸ್ವಾಮೀಜಿ ಅಭಿಪ್ರಾಯಪಟ್ಟರು.

ಲಿಂಗಾಯಿತರನ್ನು ಒಬಿಸಿ ಪಟ್ಟಿಗೆ ಸೇರಿಸುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿದರೆ ರಾಜ್ಯ ಸರ್ಕಾರಕ್ಕೇನು ನಷ್ಟ ಎಂದು ಪ್ರಶ್ನಿಸಿದ ಸ್ವಾಮೀಜಿ, ಈ ಕೂಡಲೇ ಸಿದ್ದರಾಮಯ್ಯ ಸ್ವಾಮೀಜಿ ಅವರಲ್ಲಿ ಕ್ಷಮೆ ಕೇಳಬೇಕು ಎಂದು ಆಗ್ರಹಿಸಿದರು.

ರಾಜಕೀಯವಿಲ್ಲದೆ ಸ್ವಾಮೀಜಿಗಳಿಲ್ಲ

ಸ್ವಾಮೀಜಿಗಳಿಲ್ಲದೆ ರಾಜಕೀಯವಿಲ್ಲ, ರಾಜಕೀಯವಿಲ್ಲದೆ ಸ್ವಾಮೀಜಿಗಳಿಲ್ಲ ಎಂಬ ಪರಿಸ್ಥಿತಿ ಇಂದು ನಿರ್ಮಾಣವಾಗಿದೆ ಎಂದು ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ ಬೇಸರ ವ್ಯಕ್ತಪಡಿಸಿದರು. ಮೊದಲು ಸ್ವಾಮೀಜಿ ಭೇಟಿ ಮಾಡಲು ರಾಜಕಾರಣಿಗಳು ಬರುತ್ತಿದ್ದರು, ಆದರೆ ಈಗ ರಾಜಕಾರಣಿಗಳನ್ನು ಭೇಟಿ ಮಾಡಲು ಸ್ವಾಮೀಜಿಗಳು ಹೋಗುತ್ತಿದ್ದಾರೆ. ತಮ್ಮ ಸ್ವಾರ್ಥಕ್ಕಾಗಿ ರಾಜಕಾರಣಿಗಳು ಸ್ವಾಮೀಜಿಗಳನ್ನು ಓಲೈಸುತ್ತಿದ್ದಾರೆ ಎಂದು ಹೇಳಿದರು.

2ಎ ಮೀಸಲಾತಿ ತಟ್ಟೆಗೆ ಕೈ ಹಾಕಿದರೆ ಕೈ ಕತ್ತರಿಸುತ್ತೇವೆ ಎಂಬ ಹೇಳಿಕೆಗೆ ಕಿಡಿಕಾರಿದ ಸ್ವಾಮೀಜಿ, ಈ ಹಿಂದೆ ಕೂಡ ಕೆಲವರು ಇಂತಹ ಹೇಳಿಕೆ ನೀಡುತ್ತಿದ್ದರು. ಆದರೆ ಕೈ ಕತ್ತರಿಸಲು ಸಾಧ್ಯವಾಯಿತೆ. ಇಂತಹ ಹೇಳಿಕೆಗಳು ಸಹಜ, ಆದರೆ ಹೇಳಿದಂತೆ ಯಾರೂ ಕಾರ್ಯಗತ ಮಾಡಲು ಸಾಧ್ಯವಿಲ್ಲ ಎಂದು ಸ್ವಾಮೀಜಿ ತಿರುಗೇಟು ನೀಡಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಮುತ್ತು (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಭೈರತಿ ರಣಗಲ್(ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಪುಷ್ಪ–2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಮಿಸ್ ಯು (ತ)	4 ಪ್ರದರ್ಶನಗಳು
ಸಂಗಂ	
ಪುಷ್ಪ–2 (ತೆ)	4 ಪ್ರದರ್ಶನಗಳು
ಲಿಡೋ	
ಲಕ್ಕಿ ಭಾಸ್ಕರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಪುಷ್ಪ–2 (ಕ)	4 ಪ್ರದರ್ಶನಗಳು
ಪ್ರಭಾ	
ಬಘೀರಾ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಪುಷ್ಪಾ 2 (ಕ): ಬೆ.10ಕ್ಕೆ, ಮ.1.55ಕ್ಕೆ, ಪುಷ್ಪಾ 2 (ಹಿಂ): ಸಂ.5.50ಕ್ಕೆ, ರುಧೀರಂ (ಮ): ರಾ.9.50ಕ್ಕೆ.
ಸ್ಕ್ರೀನ್ 2	ಸೌಧುಕವ್ವಂ (ತ): ಬೆ.11.05ಕ್ಕೆ, ಭೈರತಿ ರಣಗಲ್ (ಕ): ಮ.1.45ಕ್ಕೆ, ಮೋನಾ 2 (3ಡಿ)(ಇಂ): ಸಂ.4.40ಕ್ಕೆ, ಮಿಸ್ ಯು (ತ): ರಾ.7ಕ್ಕೆ, ಪುಷ್ಪಾ 2 (ಕ): ರಾ.9.40ಕ್ಕೆ.
ಸ್ಕ್ರೀನ್ 3	ದಿ ಲಾರ್ಡ್ ಆಫ್ ದಿ ರಿಂಗ್ಸ್ (ಇಂ): ಬೆ.11.10ಕ್ಕೆ, ರಾ.9.55ಕ್ಕೆ, ಮೋನಾ 2 (3ಡಿ) (ಇಂ): ಮ.1.55ಕ್ಕೆ, ಹರಿದಾಸರ ದಿನಚರಿ (ಕ): ಸಂ.4ಕ್ಕೆ, ಪುಷ್ಪಾ 2 (ಕ): ಸಂ.6.05ಕ್ಕೆ,
ಸ್ಕ್ರೀನ್ 4	ಮೋನಾ 2(3ಡಿ)(ಇಂ): ಬೆ.11.55ಕ್ಕೆ, ಪುಷ್ಪಾ 2 (ತೆ): ಮ.2.10ಕ್ಕೆ, ಸಂ.6ಕ್ಕೆ, ರಾ.9.50ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಅಮರನ್ (ಕ): ಬೆ.10.30ಕ್ಕೆ, ರಾ.7.30ಕ್ಕೆ, ಭೈರತಿ ರಣಗಲ್ (ಕ): ಮ.1.45ಕ್ಕೆ, ಧೀರ ಭಗತ್ ರಾಯ್ (ಕ): ಸಂ.4.30ಕ್ಕೆ.
ಸ್ಕ್ರೀನ್ 2	ಭೈರತಿ ರಣಗಲ್ (ಕ): ಬೆ.10.40ಕ್ಕೆ, ಪುಷ್ಪಾ 2 (ಕ): ಮ.1.15ಕ್ಕೆ, ಸಂ.5.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ಪುಷ್ಪಾ 2 (ಕ): ಬೆ.11.30ಕ್ಕೆ, ರಾ.7.45ಕ್ಕೆ, ಪುಷ್ಪಾ 2 (ತೆ): ಸಂ.4ಕ್ಕೆ.
ಸ್ಕ್ರೀನ್ 4	ಪುಷ್ಪಾ 2 (ತೆ): ಬೆ.10.30ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಪುಷ್ಪಾ 2 (ಕ): ಮ.2.15ಕ್ಕೆ.

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷರಾಗಿ ಬಿ.ಕೆಂಚಪ್ಪಗೌಡ ಆಯ್ಕೆ



ರಾಜ್ಯ ಒಕ್ಕಲಿಗರ ಸಂಘದ ನೂತನ ಅಧ್ಯಕ್ಷ ಬಿ.ಕೆಂಚಪ್ಪಗೌಡ ಹಾಗೂ ಇತರೆ ಪದಾಧಿಕಾರಿಗಳನ್ನು ಸಂಘದ ಕಚೇರಿಯಲ್ಲಿ ಅಭಿನಂದಿಸಲಾಯಿತು.

ಬೆಂಗಳೂರು, ಡಿ.15– ರಾಜ್ಯ ಒಕ್ಕಲಿಗರ ಸಂಘಕ್ಕೆ ನೂತನ ಅಧ್ಯಕ್ಷರಾಗಿ ಬಿ.ಕೆಂಚಪ್ಪಗೌಡ ಆಯ್ಕೆಯಾಗಿದ್ದಾರೆ.

ನಗರದ ಕೆ.ಆರ್.ರಸ್ತೆಯ ಸಂಘದ ಕೇಂದ್ರ ಕಚೇರಿಯಲ್ಲಿ ಭಾನುವಾರ ನಡೆದ ಚುನಾವಣೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬೆಂಬಲಿತ ಅಭ್ಯರ್ಥಿ ಕೆಂಚಪ್ಪಗೌಡ 21 ಸದಸ್ಯರ ಬೆಂಬಲದೊಂದಿಗೆ ಅಧ್ಯಕ್ಷರಾಗಿ ಆಯ್ಕೆಯಾಗಿದ್ದು, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಬೆಂಬಲಿತ ಡಾ.ಅಂಜಿನಪ್ಪ 14 ಮತಗಳೊಂದಿಗೆ ಪರಾಜಿತರಾದರು. ಉಪಾಧ್ಯಕ್ಷರಾಗಿ ಎಲ್.ಶ್ರೀನಿವಾಸ್, ಡಾ.ಕೆ.ವಿ. ರೇಣುಕಾಪ್ರಸಾದ್, ಪ್ರಧಾನ ಕಾರ್ಯದರ್ಶಿಯಾಗಿ ಟಿ.ಕೋನರೆಡ್ಡಿ, ಸಹಾಯಕ ಕಾರ್ಯದರ್ಶಿಯಾಗಿ ಆರ್.ಹನುಮಂತರಾಯಪ್ಪ ಹಾಗೂ ಖಜಾಂಚಿಯಾಗಿ ನಲ್ಲಿಗೆರೆ ಬಾಲು ಆಯ್ಕೆಯಾದರು. ಶಾಸಕ ಸಿ.ಎನ್.ಬಾಲಕೃಷ್ಣ ಸಂಘದ ಹಾಲಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದರು.

3 ವರ್ಷದಲ್ಲಿ ನಾಲ್ವರು: ಮೂರು ವರ್ಷದಲ್ಲಿ ರಾಜ್ಯ ಒಕ್ಕಲಿಗರ ಸಂಘಕ್ಕೆ 4ನೇ ಬಾರಿ ಅಧ್ಯಕ್ಷರ ಬದಲಾವಣೆಯಾಗಿದೆ. 2021ರ ಡಿ.15ರಂದು ಸಂಘದ 35 ನಿರ್ದೇಶಕರ ಆಯ್ಕೆ ನಂತರ 2022ರ ಜ.5ರಂದು ಸಂಘದ ಪದಾಧಿಕಾರಿಗಳ ಆಯ್ಕೆಗೆ ಚುನಾವಣೆ ನಡೆದಿತ್ತು. ಈ ವೇಳೆ ಸಂಘದ ಅಧ್ಯಕ್ಷ ಸ್ಥಾನಕ್ಕೆ ಸಿ.ಎನ್.ಬಾಲಕೃಷ್ಣ ಮತ್ತು ಕೆಂಚಪ್ಪಗೌಡ ಬಣಗಳ ನಡುವೆ ತೀವ್ರ ಪೈಪೋಟಿ ಏರ್ಪಟಿತ್ತಾದರೂ, ಅಂತಿಮವಾಗಿ 19 ಮತಗಳೊಂದಿಗೆ ಬಾಲಕೃಷ್ಣ ಬಣ ಅಧಿಕಾರ ಪಡೆಯಿತು. ಒಂದೂವರೆ ವರ್ಷದ ಬಳಿಕ ಅನಿರೀಕ್ಷಿತ ಬೆಳವಣಿಗೆಯಲ್ಲಿ ಸಂಘದ ಅಧ್ಯಕ್ಷರ ವಿರುದ್ಧ ಕೆಂಚಪ್ಪಗೌಡ ಬಣ ಅವಿಶ್ವಾಸ ನಿರ್ಣಯ ಮಂಡಿಸಿತು. ಈ ವಿಚಾರವಾಗಿ ಸಿಟಿ ಸಿವಿಲ್ ಕೋರ್ಟ್‌ಗೆ ಹೋಗಿದ್ದರಿಂದ ಕಾನೂನಿನ ಪ್ರಕಾರ ಪದಾಧಿಕಾರಿಗಳ ಆಯ್ಕೆಗೆ ನ್ಯಾಯಾಲಯ ಆದೇಶಿಸಿತ್ತು. ಅದರಂತೆ ನೂತನ ಪದಾಧಿಕಾರಿಗಳ ಆಯ್ಕೆ ನಡೆದಾಗ ಕೆಂಚಪ್ಪಗೌಡ ಬಣ ಗೆಲುವಿನ ನಗೆ ಬೀರಿತ್ತು. ಮತ್ತೆ ಅಧಿಕಾರಕ್ಕೆ ಕಿತ್ತಾಟ ನಡೆದು ಆರ್.ಹನುಮಂತರಾಯಪ್ಪ ಅಧ್ಯಕ್ಷರಾದರು. ಕೆಲ ತಿಂಗಳ ನಂತರ ಅನಿರೀಕ್ಷಿತ ಬೆಳವಣಿಗೆಯಲ್ಲಿ ಅವಿಶ್ವಾಸ ನಿರ್ಣಯ ಮಂಡನೆಯಾದ ಪರಿಣಾಮ ಮತ್ತೆ ಬಾಲಕೃಷ್ಣ ಅಧ್ಯಕ್ಷರಾಗಿದ್ದರು. ಇದೀಗ ನಾಲ್ಕನೆಯವರಾಗಿ ಕೆಂಚಪ್ಪಗೌಡ ಆಯ್ಕೆಯಾಗಿದ್ದಾರೆ.


ಕೇಂದ್ರ ಸಚಿವರಾದ
ಸನ್ಮಾನ್ಯ ಶ್ರೀ ಹೆಚ್ ಡಿ ಕುಮಾರಸ್ವಾಮಿ ಅವರಿಗೆ
ಹುಟ್ಟು ಹಬ್ಬದ ಶುಭಾಶಯಗಳು